ಸಂಪುಟ: 04 ಸಂಚಿಕೆ: 231 ಪುಟಗಳು: 08 ಸೋಮವಾರ 04 ನವೆಂಬರ್ 2024
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ಜ್ಞಾನ ಎಂಬುದು ಎಂದಿಗೂ ನಿಂತ ನೀರಾಗಬಾರದು. ಸದಾ ಹೆಚ್ಚುತ್ತಲೇ ಇರಬೇಕು. ಇದು ನಿಮ್ಮ ವೈಯಕ್ತಿಕ ಸ್ವಾತಂತ್ರ್ಯ ಪಡೆಯಲು ಬೇಕಾದ ಪ್ರಮುಖ ಅಸ್ತ್ರ

# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ಉದಯ ವಾಹಿನಿ
ವರದಿಗಾರರು ಬೇಕಾಗಿದ್ದಾರೆ
ಎಂಎ., ಜರ್ನಲಿಸಂ ಮಾಡಿರುವಂತಹ ಉತ್ಸಾಹಿ ಯುವಕ ಯುವತಿಯರು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಕೆಲಸ ಮಾಡುವಂತಹ
ರಾಜ್ಯದಾದ್ಯಂತ
ವರದಿಗಾರರು ಬೇಕಾಗಿದ್ದಾರೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
9448225696
+91 8035841833
#: 1230 'JAYAMAHAL 13th cross, 2nd phase, Girinagar, Bangalore-560085. (Near to Bangalore one park, opposite mandya medical)
udayavahininews@gmail.com

## ಏಕರೂಪ ನಾಗರಿಕ ಸಂಹಿತೆ ಜಾರಿ
# ಜಾರ್ಖಂಡ್ ಅಖಾಡಕ್ಕೆ ತಯಾರಿ



**ಚುನಾವಣೆಗೆ ಬಿಜೆಪಿ ಗ್ಯಾರಂಟಿ**

- ಏಕರೂಪ ನಾಗರಿಕ ಸಂಹಿತೆ ಜಾರಿ ಫಿಕ್ಸ್
- ಆದಿವಾಸಿ ಸಮುದಾಯ ಬಿಟ್ಟು ಯುಸಿಸಿ ಜಾರಿ
- ಮಹಿಳೆಯರಿಗೆ 2,100 ರೂ., ವಾರ್ಷಿಕ 2 ಎಲ್‌ಪಿಜಿ ಸಿಲಿಂಡರ್ ಫ್ರೀ – ಜಾರ್ಖಂಡ್ ಚುನಾವಣೆಗೆ ಬಿಜೆಪಿ ಗ್ಯಾರಂಟಿ
- ಜಾರ್ಖಂಡ್ ಚುನಾವಣೆಗೆ ಬಿಜೆಪಿಯ ಪ್ರಣಾಳಿಕೆ ಬಿಡುಗಡೆ

• **ಉದಯವಾಹಿನಿ, ನವದೆಹಲಿ**

ಮಹಾರಾಷ್ಟ್ರ ಮತ್ತು ಜಾರ್ಖಂಡ್ ವಿಧಾನಸಭಾ ಚುನಾವಣೆ ಗರಿಗೆದರಿದ್ದು, ಮುಂಬರಲಿರುವ ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ಬಿಜೆಪಿ ಭರದ ಸಿದ್ಧತೆ ನಡೆಸುತ್ತಿದೆ. ಭಾನುವಾರ ಅಮಿತ್ ಶಾ ಬಿಜೆಪಿಯ ಪ್ರಣಾಳಿಕೆ(ಸಂಕಲ್ಪ ಪತ್ರ)ಯನ್ನು ಬಿಡುಗಡೆ ಮಾಡಿದರು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಕೇಂದ್ರ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್, ಸಂಜಯ್ ಸೇಠ್ ಮತ್ತು ಬಿಜೆಪಿ ಜಾರ್ಖಂಡ್ ಅಧ್ಯಕ್ಷ ಬಾಬುಲಾಲ್ ಮರಾಂಡಿ ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಜಾರ್ಖಂಡ್ ಬಾಬುಲಾಲ್ ಮರಾಂಡಿ ಅವರು ಕೇಂದ್ರ ಸಚಿವರಾದ ಶಿವರಾಜ್ ಸಿಂಗ್ ಚೌಹಾಣ್, ಅನ್ನಪೂರ್ಣ ದೇವಿ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರ ಸಮ್ಮುಖದಲ್ಲಿ ಪಂಚ ಪ್ರಾಣ (ಐದು ಪ್ರತಿಜ್ಞೆ) ಬಿಡುಗಡೆ ಮಾಡಿದರು.


> ''ನಮ್ಮ ಸರ್ಕಾರವು ಜಾರ್ಖಂಡ್‌ನಲ್ಲಿ ಯುಸಿಸಿಯನ್ನು ಪರಿಚಯಿಸುತ್ತದೆ ಆದರೆ ಬುಡಕಟ್ಟು ಜನಾಂಗದವರನ್ನು ಅದರ ವ್ಯಾಪ್ತಿಯಿಂದ ಹೊರಗಿಡಲಾಗುತ್ತದೆ. ಜೆಎಂಎಂ ಸರ್ಕಾರವು ಯುಸಿಸಿ ಬುಡಕಟ್ಟು ಹಕ್ಕುಗಳು ಮತ್ತು ಸಂಸ್ಕೃತಿಯ ಮೇಲೆ ಪರಿಣಾಮ ಬೀರುತ್ತದೆ ಎಂದು ಸುಳ್ಳು ಪ್ರಚಾರ ಮಾಡುತ್ತಿದ್ದು, ಇದು ಸಂಪೂರ್ಣವಾಗಿ ಆಧಾರರಹಿತವಾಗಿದೆ. ಏಕೆಂದರೆ ಅವುಗಳನ್ನು ತನ್ನ ವ್ಯಾಪ್ತಿಯಿಂದ ಹೊರಗಿಡಲಾಗುವುದು''
> –ಅಮಿತ್ ಶಾ, ಕೇಂದ್ರ ಗೃಹ ಸಚಿವ

1. ಬುಡಕಟ್ಟು ಸಂಪ್ರದಾಯ ರಕ್ಷಿಸಲು 500 ಕೋಟಿ
2. ಯಾವುದೇ ಧರ್ಮವನ್ನು ಲೆಕ್ಕಿಸದೆ ಎಲ್ಲಾ ನಾಗರಿಕರಿಗೆ ಯುಸಿಸಿ
3. ಬುಡಕಟ್ಟು ಸಂಪ್ರದಾಯಗಳ ಮೇಲೆ ಯುಸಿಸಿ ಅಡ್ಡಿ

ರಾಜ್ಯದ ಕುಟುಂಬಗಳು 500 ರೂ.ಗೆ ಎಲ್‌ಪಿಜಿ ಗ್ಯಾಸ್ ಸಿಲಿಂಡರ್‌ಗಳನ್ನು ಖರೀದಿಸಲು ಸಾಧ್ಯವಾಗುತ್ತದೆ. ಜೊತೆಗೆ, ಒಂದು ವರ್ಷದಲ್ಲಿ ಎರಡು ಸಿಲಿಂಡರ್‌ಗಳನ್ನು ಉಚಿತವಾಗಿ ನೀಡಲಾಗುವುದು. ಇದಲ್ಲದೇ ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ 2.87 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಮೊಟ್ಟ ಮೊದಲ ಸಂಪುಟ ಸಭೆಯ ನಂತರ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿದ್ದು, 2025ರ ನವೆಂಬರ್ ವೇಳೆಗೆ 1.5 ಲಕ್ಷ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.ಪಕ್ಷವು ಅಧಿಕಾರಕ್ಕೆ ಬಂದರೆ, ಎರಡು ವರ್ಷಗಳವರೆಗೆ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ 2,000 ರೂಪಾಯಿಗಳ ಆರ್ಥಿಕ ಸಹಾಯವನ್ನು ನೀಡುತ್ತದೆ, ಇದರಿಂದಾಗಿ ಅವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧರಾಗಬಹುದು. ಬಿಜೆಪಿಯು ಮಹಿಳೆಯರ ಸಬಲೀಕರಣದ ಧ್ಯೇಯೋದ್ದೇಶದ ಭಾಗವಾಗಿ 'ಗೋಗೋ-ದೀದಿ' ಯೋಜನೆಯನ್ನು ಪ್ರಾರಂಭಿಸಲಿದೆ ಮತ್ತು ಕಾರ್ಯಕ್ರಮದ ಅಡಿಯಲ್ಲಿ ಮಹಿಳೆಯರಿಗೆ ತಿಂಗಳಿಗೆ 2,100 ರೂ. ನೀಡಲಾಗುತ್ತದೆ.

ಬಿಜೆಪಿ 68 ಸ್ಥಾನಗಳಲ್ಲಿ ಸ್ಪರ್ಧಿಸುತ್ತಿದೆ: ರಾಜಮಹಲ್, ಬೋರಿಯೊ, ಬರ್ಹೈತ್, ಲಿಟಿಪಾರಾ, ಮಹೇಶ್‌ಪುರ, ಸಿಕಾರಿಪಾರಾ, ನಾಲಾ, ಜಮ್ತಾರಾ, ದುಮ್ಕಾ, ಜಮಾ, ಜರ್ಮುಂಡಿ, ಮಧುಪುರ್, ಶರತ್, ದಿಯೋಘರ್, ಪೊರೆಯಹತ್, ಗೊಡ್ಡಾ, ಮಹಾಗಾಮ, ಕೊಡರ್ಮಾ, ಬರ್ಕಥಾ, ಬರ್ಹಿ, ಬರ್ಕಗಾಂವ್, ಹಜಾರಿಬಾಗ್, ಸಿಮಾರಿಯಾ, ಧನ್ವರ್, ಬಾಗೋದರ್, ಜಮುವಾ, ಗಂಡೇ, ಗಿರಿದಿಹ್, ಬೆರ್ಮೊ, ಬೊಕಾರೊ, ಚಂದಂಕಿಯರಿ, ಸಿಂದ್ರಿ, ನಿರ್ಸಾ, ಧನ್‌ಬಾದ್, ಝರಿಯಾ, ತುಂಡಿ, ಬಘ್ಮಾರಾ, ಬಹರಗೋರಾ, ಘಟ್‌ಸಿಲಾ, ಪೊಟ್ಕಾ, ಜಮ್‌ಶೆಡ್‌ಪುರ ವೆಸ್ಟ್, ಸೆರೈಕೆಲ್ಲಾ, ಚೈಬಾಸಾ, ಮಜ್‌ಗಾಂವ್, ಕ್ಟು ಟಿ ಜಗನಾಥಪುರ, ಚಕ್ರಧರ್‌ಪುರ್, ಖರ್ಸಾವನ್, ಖುಜ್ಂಟಿ, ರಣಪಾ , ಹತಿಯಾ, ಕಂಕೆ, ಮಂದರ್, ಸಿಸೈ, ಗುಮ್ಲಾ, ಬಿಶುನ್‌ಪುರ್, ಸಿಮ್ಡೆಗಾ, ಕೊಲೆಬಿರಾ, ಮಾಣಿಕಾ, ಲತೇಹರ್, ಪಂಕಿ, ಡಾಲ್ಟೋಂಗಂಜ್, ಬಿಶ್ರಾಮ್‌ಪುರ, ಛತ್ತರ್‌ಪುರ್, ಹುಸೇನಾಬಾದ್, ಗರ್ಹ್ವಾ ಮತ್ತು ಭವನಾಥಪುರ. ನವೆಂಬರ್ 13 ಮತ್ತು ನವೆಂಬರ್ 20 ರಂದು ಎರಡು ಹಂತಗಳಲ್ಲಿ ಚುನಾವಣೆಗಳು ನಡೆಯಲಿದ್ದು, ನವೆಂಬರ್ 23 ರಂದು ಎಣಿಕೆ ನಡೆಯಲಿದೆ. ಸುಮಾರು 2.60 ಕೋಟಿ ಮತದಾರರು, 11.84 ಲಕ್ಷ ಮೊದಲ ಬಾರಿಗೆ ಮತದಾರರು ಮತ್ತು 1.13 ಲಕ್ಷ ವಿಕಲಚೇತನರು, ತೃತೀಯ ಲಿಂಗ ವ್ಯಕ್ತಿಗಳು ಮತ್ತು ಹಿರಿಯ ನಾಗರಿಕರು ಸೇರಿದಂತೆ 2019ರ ವಿಧಾನಸಭಾ ಚುನಾವಣೆಯಲ್ಲಿ 2.23 ಕೋಟಿಗೆ ಹೋಲಿಸಿದರೆ 85 ಕ್ಕಿಂತ ಹೆಚ್ಚು ಜನರು ಮತ ಚಲಾಯಿಸುವ ನಿರೀಕ್ಷೆಯಿದೆ. 2019 ರಲ್ಲಿ, ಜೆಎಂಎಂ ನೇತೃತ್ವದ ಮೈತ್ರಿ 47 ಸ್ಥಾನಗಳನ್ನು ಗೆದ್ದು ರಾಜ್ಯದಲ್ಲಿ ಬಿಜೆಪಿಯಿಂದ ಅಧಿಕಾರವನ್ನು ಕಸಿದುಕೊಂಡಿತು. ಜೆಎಂಎಂ 30 ಸ್ಥಾನಗಳನ್ನು ಗೆದ್ದಿದ್ದರೆ, ಕಾಂಗ್ರೆಸ್ 16 ಮತ್ತು ಆರ್‌ಜೆಡಿ ಒಂದು ಸ್ಥಾನವನ್ನು ಗಳಿಸಿತು. ಬಿಜೆಪಿ 25, ಜೆವಿಎಂ-ಪಿ ಮೂರು, ಎಜೆಎಸ್‌ಯು ಪಕ್ಷ 2 ಮತ್ತು ಸಿಪಿಐ-ಎಂಎಲ್ ಮತ್ತು ಎನ್‌ಸಿಪಿ ತಲಾ ಒಂದು ಸ್ಥಾನಗಳನ್ನು ಪಡೆದುಕೊಂಡಿದ್ದು, ಇಬ್ಬರು ಸ್ವತಂತ್ರರು ಗೆಲುವು ಸಾಧಿಸಿದ್ದರು




**2.87 ಲಕ್ಷ ಸರ್ಕಾರಿ ಉದ್ಯೋಗ ಸೃಷ್ಟಿ**

''ಬಿಜೆಪಿ, ಜಾರ್ಖಂಡ್‌ನಲ್ಲಿ ಅಧಿಕಾರಕ್ಕೆ ಬಂದರೆ, ಸರ್ವಾ ಧಾರ್ಮಿಕ ಸಂಹಿತೆ ವಿಷಯದ ಬಗ್ಗೆ ಚರ್ಚಿಸಿ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ಜಾರ್ಖಂಡ್‌ನಲ್ಲಿ ಕೈಗಾರಿಕೆಗಳು ಮತ್ತು ಗಣಿಗಳಿಂದ ಸ್ಥಳಾಂತರಗೊಂಡ ಜನರ ಪುನರ್ವಸತಿಯನ್ನು ಖಚಿತಪಡಿಸಿಕೊಳ್ಳಲು ಸ್ಥಳಾಂತರ ಆಯೋಗವನ್ನು ರಚಿಸಲಾಗುವುದು ಎಂದು ಶಾ ಹೇಳಿದರು. ಜಾರ್ಖಂಡ್‌ನಲ್ಲಿ ಬಿಜೆಪಿ 2.87 ಲಕ್ಷ ಸರ್ಕಾರಿ ಉದ್ಯೋಗಗಳು ಸೇರಿದಂತೆ 5 ಲಕ್ಷ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ಎಂದು ಅವರು ಹೇಳಿದರು.




**ಅಕ್ರಮ ವಲಸಿಗರಿಂದ ಆಹಾರ ರಕ್ಷಣೆ**

ಅಕ್ರಮ ವಲಸಿಗರಿಂದ 'ಮತಿ, ಬೇಟಿ, ರೊಟ್ಟಿ' (ಭೂಮಿ, ಮಗಳು ಮತ್ತು ಆಹಾರ) ಅಪಾಯದಲ್ಲಿದ್ದು, ಆದ್ದರಿಂದ ಸ್ಥಳೀಯ ಜನರಿಗೆ ಬಿಜೆಪಿ ಭದ್ರತೆ ನೀಡುತ್ತದೆ ಎಂದು ಅವರು ಪ್ರತಿಪಾದಿಸಿದರು. ಇದರೊಂದಿಗೆ ಅವರು ''ಹಿಂದೂಗಳು ದಾಳಿಗೆ ಒಳಗಾಗಿದ್ದಾರೆ ಮತ್ತು ತುಷ್ಟೀಕರಣವು ಉತ್ತುಂಗದಲ್ಲಿದೆ. ಜಾರ್ಖಂಡ್ ದೇಶದಲ್ಲೇ ಅತ್ಯಂತ ಭ್ರಷ್ಟ ರಾಜ್ಯವಾಗಿದೆ,'' ಎಂದು ಆರೋಪಿಸಿದರು. ಜಾರ್ಖಂಡ್ ಚುನಾವಣೆಗೆ ಮುಂಚಿತವಾಗಿ ಬಿಜೆಪಿ ಪಕ್ಷವು ಹಲವಾರು ಭರವಸೆಗಳನ್ನು ನೀಡಿತು. ಅಕ್ರಮ ನುಸುಳುಕೋರರು ಆಕ್ರಮಿಸಿಕೊಂಡಿರುವ ಭೂಮಿಯನ್ನು ಪುನಃ ಆದಿವಾಸಿಗಳಿಗೆ ಹಿಂದಿರುಗಿಸಲು ಕಾನೂನನ್ನು ರಚಿಸುವುದು ಮತ್ತು ಬುಡಕಟ್ಟು ಮಹಿಳೆಯರನ್ನು ಮದುವೆಯಾಗುವ ನುಸುಳುಕೋರರಿಗೆ ಬುಡಕಟ್ಟು ಸ್ಥಾನಮಾನವನ್ನು ನೀಡುವುದಿಲ್ಲ ಎಂದು ಖಚಿತಪಡಿಸಿಕೊಳ್ಳುವುದು. ಹೀಗೆ ಅನೇಕ ಭರವಸೆಗಳನ್ನು ಆದಿವಾಸಿ ಸಮುದಾಯಗಳಿಗೆ ನೀಡಿದೆ.



## ಗುರುಪ್ರಸಾದ್ ಪುತ್ರಿಯ ಭವಿಷ್ಯಕ್ಕೆ ನೆರವು ನೀಡುತ್ತೇನೆ : ಜಗ್ಗೇಶ್



• **ಉದಯವಾಹಿನಿ, ಬೆಂಗಳೂರು**

ನಟ, ನಿರ್ದೇಶಕ ಗುರುಪ್ರಸಾದ್ ಪುತ್ರಿಯ ಭವಿಷ್ಯಕ್ಕೆ ನಾನು ನೆರವು ನೀಡುತ್ತೇನೆ ಎಂದು ನಟ ಜಗ್ಗೇಶ್ ಘೋಷಿಸಿದ್ದಾರೆ.ನಟ, ನಿರ್ದೇಶಕ ಗುರುಪ್ರಸಾದ್ ಆತ್ಮಹತ್ಯೆಗೆ ಶರಣಾಗಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗುರುಪ್ರಸಾದ್ ಮಗುವಿಗೆ ಸಹಾಯ ಮಾಡುತ್ತೇನೆ. ಸಂಕಲ್ಪ ಮಾಡಿಕೊಂಡಿದ್ದೇನೆ, ಅದನ್ನು ಹೇಳೋಕೆ ಹೋಗಲ್ಲ. ಸಹಾಯವನ್ನು ಅವರಿಗೆ ತಲುಪಿಸುತ್ತೇನೆ ಎಂದರು. ಗುರುಪ್ರಸಾದ್ ತಾನು ಮಾಡಿದಂತ ಸಿನಿಮಾದಿಂದ ಬಂದ ಹಣದಿಂದ ಒಳ್ಳೆಯ ಜೀವನ ಕಟ್ಟಿಕೊಳ್ಳಬಹುದಿತ್ತು. ಆದರೆ ಕುಡಿತದ ಚಟಕ್ಕೆ ಬಿದ್ದು ಜೀವನವನ್ನೇ ಹಾಳು ಮಾಡಿಕೊಂಡು ಬಿಟ್ಟ. ಆತನ ಪತ್ನಿ ಗರ್ಭಿಣಿ ಹಾಗೂ ಇರುವ ಪುತ್ರಿಯನ್ನು ನೋಡಿದರೆ ಬೇಜಾರಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ನಿಮ್ಮ ಬೆಳವಣಿಗೆಯ ಹಿಂದೆ ಒಬ್ಬ ಗುರು ಇರಬೇಕು. ಯಾರಿಗೆ ಒಳ್ಳೆಯ ಗುರು ಇರುತ್ತಾರೆ ಅವರು ಸಕ್ಸಸ್ ಆಗುತ್ತಾರೆ. ಅವರಿಗೆ ಗುರು ಇರಲಿಲ್ಲ. ಆದರೆ ತಾಯಿಯೇ ಅವರಿಗೆ ಗುರು ಆಗಿದ್ದರು. ಅವರಿಗೂ ಬೈಯುತ್ತಿದ್ದರು. ಅದೆಲ್ಲಾ ನಮಗೆ ಸಹಿಸಿಕೊಳ್ಳೋಕೆ ಆಗುತ್ತಿರಲಿಲ್ಲ ಎಂದರು.

## ನಮ್ಮದು ಅಭಿವೃದ್ಧಿ ರಾಜಕಾರಣ ಡಿಕೆಶಿಗೆ ನಿಖಿಲ್ ತಿರುಗೇಟು

• **ಉದಯವಾಹಿನಿ, ಚನ್ನಪಟ್ಟಣ**

ಚನ್ನಪಟ್ಟಣ ಕ್ಷೇತ್ರದ ಅಕ್ಕೂರು ಹೊಸಹಳ್ಳಿಯಿಂದ ಪ್ರಚಾರ ಆರಂಭಿಸಿದ ಜೆಡಿಎಸ್ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅಕ್ಕೂರು, ಸಾದರಹಳ್ಳಿ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಪ್ರತಿಕ್ರಿಯಿಸಿದ ನಿಖಿಲ್ ಅವರು ಹಿನ್ನಲೆ, ಸಂಸ್ಕೃತಿಗೆ ತಕ್ಕಂತೆ ಮಾತಾಡ್ತಾರೆ. ನಾನು ಅದ್ಯಾವುದಕ್ಕೂ ಮಾತಾಡಲ್ಲ ಎಂದು ನಿಖಿಲ್ ಡಿಕೆ ಶಿವಕುಮಾರ್ ಅವರಿಗೆ ತಿರುಗೇಟು ನೀಡಿದರು. ನಮ್ಮದು ಅಭಿವೃದ್ಧಿ ರಾಜಕಾರಣ ಎದುರಾಳಿಗಳ ಸ್ಟ್ರಾಟರ್ಜಿ ಏನೇ ಆಗಿರಲಿ. ನಾನು ಯಾವುದಕ್ಕೂ ಪ್ರವೋಕ್ ಆಗೋದಿಲ್ಲ. ಜೆಡಿಎಸ್ ಮತ್ತು ಬಿಜೆಪಿ ಪಕ್ಷದ ಮುಖಂಡರು ನನ್ನ ಜತೆ ಹೆಜ್ಜೆ ಹಾಕುತಿದ್ದಾರೆ. ಯಡಿಯೂರಪ್ಪ ಅವರೆ ನನ್ನ ಹೆಸರು ಘೋಷಣೆ ಮಾಡಿದ್ದಾರೆ. ದೇವೆಗೌಡರು ನಾಳೆಯಿಂದ ಗ್ರಾಮಪಂಚಾಯತಿ ಮಟ್ಟದಿಂದ ಪ್ರಚಾರ ಮಾಡಬೇಕಿತ್ತು. ಆದರೆ ಆರೋಗ್ಯ ಸ್ವಲ್ಪ ಸರಿ ಇಲ್ಲ ಎಂದು ತಿಳಿಸಿದರು. ಇವತ್ತು 25 ಹಳ್ಳಿಗೆ ಹೋಗ್ತಾ ಇದ್ದೇನೆ 107 ಹಳ್ಳಿಗೆ ಇನ್ನೂ ಹೋಗುವುದು ಬಾಕಿ ಇದೆ ನಿಮ್ಮೆಲರ ಆಶೀರ್ವಾದ ಯುವಕ ನಿಖಿಲ್ ಮೇಲೆ ಇರಲಿ ಎಂದು ಮನವಿ ಮಾಡಿದರು.

## ನಿರ್ದೇಶಕ ಗುರುಪ್ರಸಾದ್ ನಿಧನಕ್ಕೆ ಎಚ್‌ಡಿಕೆ ಕುಮಾರಸ್ವಾಮಿ ಕಂಬನಿ

• **ಉದಯವಾಹಿನಿ, ರಾಮನಗರ**

ಕನ್ನಡ ಚಿತ್ರರಂಗದ ಹೆಸರಾಂತ ಗುರುಪ್ರಸಾದ್ ಅವರ ಸಾವಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಕಂಬನಿ ಮಿಡಿದಿದ್ದಾರೆ. ಚುನಾವಣಾ ಪ್ರಚಾರದ ನಡುವೆ ಚನ್ನಪಟ್ಟಣದ ಚೆಕ್ಕರೆ ಗ್ರಾಮದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಅವರು; ಗುರು ಪ್ರಸಾದ್ ಒಬ್ಬ ಪ್ರತಿಭಾನ್ವಿತ ನಿರ್ದೇಶಕ. ಅವರು ಉತ್ತಮ ಚಿತ್ರಗಳನ್ನು ನೀಡಿದ ಪ್ರತಿಭಾನ್ವಿತ ನಿರ್ದೇಶಕ. ಅವರ ಸಾವಿನ ವಿಷಯ ಕೇಳಿ ಬಹಳ ನೋವಾಯಿತು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಆಶಿಸಿದರು. ಚಿತ್ರರಂಗದಲ್ಲಿ ಲಾಭ ನಷ್ಟ ಸೋಲು ಗೆಲುವು ಸಾಮಾನ್ಯ. ಚಿತ್ರರಂಗದವರು ಸಮಾಜಕ್ಕೆ ಸಂದೇಶ ಕೊಡುವವರು. ಅಂತವರು ಸೋಲಿನಿಂದ ಧೃತಿಗೆಡಬಾರದು. ಅದು ಜನರ ಆತ್ಮವಿಶ್ವಾಸ ಕಡಿಮೆ ಮಾಡುತ್ತದೆ. ಯಾವುದೇ ಸಮಸ್ಯೆ ಬಂದರೂ ಧೃತಿಗೆಡಬೇಡಿ, ಮುಂದೆ ಹೆಜ್ಜೆ ಇಡಿ. ನಾವು ನಿಮ್ಮ ಜೊತೆಗಿರುತ್ತೇವೆ. ಎಲ್ಲಾವನ್ನೂ ಎದುರಿಸಿ ಎಂದು ಕೇಂದ್ರ ಸಚಿವರು ಮನವಿ ಮಾಡಿದರು.

## ಆಸ್ತಿ ಜಟಾಪಟಿ, ಸಚಿವ ಜಮೀರ್ ವಿರುದ್ಧ ತಿರುಗಿಬಿದ್ದ ರಾಜಣ್ಣ!
### ವಕ್ಫ್ ವಿವಾದ : ವಿಜಯಪುರದಲ್ಲಿ ಶಾಸಕ ಬಸನಗೌಡ ಯತ್ನಾಳ್ ಅಹೋರಾತ್ರಿ ಧರಣಿ

• **ಉದಯವಾಹಿನಿ, ಬೆಂಗಳೂರು**



ಸಿಎಂ ಹೆಸರು ಬಳಸಿಕೊಂಡು ನಿಯಮ ಬಾಹಿರವಾಗಿ ಖಾತೆಗಳನ್ನು ಬದಲಾವಣೆ ಮಾಡಿ ಎಂದು ಹೇಳುತ್ತಿರುವುದು ತಪ್ಪು ಎಂದು ವಕ್ಫ್ ಆಸ್ತಿ ವಿವಾದಕ್ಕೆ ಕಾರಣವಾದ ಸಚಿವ ಜಮೀರ್ ಅಹ್ಮದ್ ಅವರ ಹೇಳಿಕೆ ವಿರುದ್ಧ ಇದೀಗ ಸ್ವಪಕ್ಷದ ಸಚಿವ ಕೆ.ಎನ್.ರಾಜಣ್ಣ ಅವರೇ ವಾಗ್ದಾಳಿ ನಡೆಸಿದರು.

ಸಿಎಂ ಸಿದ್ದರಾಮಯ್ಯ ಅವರು ಕಾನೂನು ಬಾಹಿರವಾದ ಯಾವುದೇ ಸೂಚನೆಗಳನ್ನು ನೀಡಲ್ಲ. ಹೀಗಿದ್ದರೂ ಜಮೀರ್ ಅವರು ಸಿದ್ದರಾಮಯ್ಯ ಅವರ ಹೆಸರಿನಲ್ಲಿ ಹೇಳಿಕೆ ಯಾಕೆ ನೀಡಿದ್ದು ಎಂದು ಗರಂ ಆದರು. ಅಲ್ಲದೇ ಖಾತೆಗಳನ್ನು ಬದಲಾವಣೆ ಮಾಡಿ ಎಂಬ ಅವರ ಸೂಚನೆಗಳನ್ನು ಅಧಿಕಾರಿಗಳು ಪಾಲನೆ ಮಾಡುತ್ತಿರುವುದು ತಪ್ಪು ಎಂದರು. ರೈತರ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಲು ಯಾರು ಕಾರಣ ಈ ಬಗ್ಗೆ ಸೂಕ್ತ ತನಿಖೆಗೆ ಆಗ್ರಹಿಸಲು ಖುದ್ದು ಸಿಎಂ ಅವರನ್ನು ಭೇಟಿ ಮಾಡುವೆ. ಮಗದೊಂಡೆದೆ ಬಿಜೆಪಿಯವರೇ ವಕ್ಫ್ ಆಸ್ತಿ ಎಂದು ಪಹಣಿಯಲ್ಲಿ ನಮೂದಿಸಿ ಬೇಕು ಅಂತಲೇ ರಾಜಕೀಯ ಮಾಡುತ್ತಿರಬಹುದು ಎಂಬ ಅನುಮಾನವನ್ನೂ ರಾಜಣ್ಣ ಅವರು ವ್ಯಕ್ತಪಡಿಸಿದರು.

ರಾಜ್ಯಾದ್ಯಂತ ವಕ್ಫ್ ವಿವಾದ ಭುಗಿಲೆದ್ದಿದ್ದು, ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ರೈತರಿಗೆ ನೋಟಿಸ್ ನೀಡಿದ್ದನ್ನು ಕೂಡಲೇ ಹಿಂಪಡೆಯಿರಿ ಎಂದು ಖಡಕ್ ಸೂಚನೆ ಕೊಟ್ಟಿದ್ದಾರೆ. ಆದರೆ ಬಿಜೆಪಿ ಕೋಲಾರದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದು. ಇತ್ತ ವಿಜಯಪುರದಲ್ಲಿ ಬಿಜೆಪಿ ನಗರ ಶಾಸಕ ವಸನಗೌಡ ಪಾಟೀಲ್ ಯತ್ನಾಳ್ ಅಹೋರಾತ್ರಿ ಧರಣಿ ಆರಂಭಿಸಲಿದ್ದಾರೆ.

ಹೌದು ವಕ್ಫ್ ಆಸ್ತಿ ವಿವಾದ ಸಂಬಂಧ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅಹೋರಾತ್ರಿ ಧರಣಿ ಹಮ್ಮಿಕೊಂಡಿದ್ದಾರೆ. ಅಹೋರಾತ್ರಿ ಧರಣಿಯ ಬಗ್ಗೆ ಶಾಸಕರ ಕಚೇರಿಯಿಂದ ಮಾಧ್ಯಮ ಪ್ರಕಟಣೆ ಹೊರಡಿಸಲಾಗಿದೆ. ರೈತರು, ಸಂಘ ಸಂಸ್ಥೆಗಳು, ಶಾಲೆಗಳು, ಮಠಮಾನ್ಯಗಳ ಜಮೀನು ಹಾಗೂ ಸರ್ಕಾರಿ ಜಮೀನಿನ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದು ಮಾಡಲಾಗಿದೆ.


> ಜಮೀರ್ ಅಹಮದ್ ಅವರು ನನ್ನ ಹಳೆಯ ವಿಡಿಯೊ ಬಿಡುಗಡೆ ಮಾಡಿ, ನಾನು ರೈತರ ಜಮೀನು ವಶಪಡಿಸಿಕೊಳ್ಳಲು ವಕ್ಫ್‌ಗೆ ಹೇಳಿದ್ದೆ ಎಂದು ಸುಳ್ಳು ಪ್ರಚಾರ ಮಾಡುತ್ತಿದ್ದಾರೆ. ನಾನು ವಕ್ಫ್ ಸಮಾರಂಭದಲ್ಲಿ ಮಾತನಾಡಿದ್ದೆ ವಿನಃ ಮಂಡಳಿ ಬೋರ್ಡ್ ಯಾವುದೇ ಸಭೆ ಮಾಡಿಲ್ಲ. ನಾವು ರೈತರಿಗೆ ಯಾವುದೇ ನೋಟಿಸ್ ಕೊಟ್ಟಿಲ್ಲ ರೈತರ ಜಮೀನು ವಶ ಪಡೆದುಕೊಂಡಿಲ್ಲ
> –ಬೊಮ್ಮಾಯಿ, ಮಾಜಿ ಮುಖ್ಯಮಂತ್ರಿ

ವಕ್ಫ್ ಆಸ್ತಿ ಎಂದು ನಮೂದಿಸಿದ್ದನ್ನು ತೆಗೆಯುವಂತೆ ಒತ್ತಾಯ ಕೇಳಿ ಬಂದಿದ್ದು, ಹೋರಾಟ ನಡೆಸುವುದಾಗಿ ಶಾಸಕರ ಕಚೇರಿಯಿಂದ ಮಾಧ್ಯಮ ಪ್ರಕಟಣೆ ಹೊರಡಿಸಿದ್ದಾರೆ. ಅಲ್ಲದೆ ನವೆಂಬರ್ ಆರರಂದು ಜೆಪಿಸಿ ಅಧ್ಯಕ್ಷರು ರಾಜ್ಯಕ್ಕೆ ಆಗಮಿಸಲಿದ್ದಾರೆ. ಅಲ್ಲದೆ ಬಿಜೆಪಿ ಕೂಡ ದೊಡ್ಡ ಮಟ್ಟದಲ್ಲಿ ಹೋರಾಟ ನಡೆಸಲು ಸಿದ್ಧತೆ ಮಾಡಿಕೊಂಡಿದೆ ಎನ್ನಲಾಗಿದೆ.

## ಹಗರಣಗಳಿಂದ ಪಾರಾಗಲು ಸಾಧ್ಯವೇ ಇಲ್ಲ : ಬಿವೈವಿ

• **ಉದಯವಾಹಿನಿ, ಬೆಂಗಳೂರು**

ಸಿದ್ದರಾಮಯ್ಯನವರೇ, ನಿಮಗೆ ಸುತ್ತಿಕೊಂಡಿರುವ ಮುಡಾ ಹಗರಣದ ಉರುಳಿನಿಂದ ಹಿಡಿದು,ಮಹರ್ಷಿ ವಾಲೀಕಿ ಅಭಿವೃದ್ಧಿ ನಿಗಮದ ಕಳಂಕಗಳನ್ನು ಹೊತ್ತ ನೀವು ರಾಜಕೀಯ ಜೀವನದಲ್ಲಿ ಮುಂದೆಂದೂ ಕಳಂಕ ರಹಿತರಾಗಿ ಹೊರಬರಲು ಸಾಧ್ಯವೇ ಇಲ್ಲ ಎನ್ನುವುದನ್ನು ಸದ್ಯದ ತನಿಖೆಗಳು ಹಾಗೂ ಹೊರ ಬಂದಿರುವ ನ್ಯಾಯಾಲಯದ ತೀರ್ಪುಗಳಲ್ಲಿ ವ್ಯಕ್ತವಾಗುತ್ತಿದೆ ಎಂದು ರಾಜ್ಯ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಎಚ್ಚರಿಸಿದ್ದಾರೆ. ಕೆಂಪಣ್ಣ ಆಯೋಗವನ್ನು ರಚಿಸಿ ಅರ್ಕಾವತಿ ರೀಡೂ ಪ್ರಕರಣವನ್ನು ಬದಿಗೆ ಸರಿಸಿ ಬಚಾವಾದಂತೆ ಮುಡಾ ಪ್ರಕರಣವನ್ನು ನೀವು ಬದಿಗೆ ಸರಿಸಿ ಪಾರಾಗಲು ಸಾಧ್ಯವೇ ಇಲ್ಲ ಎನ್ನುವುದನ್ನು ಕಾಲವೇ ಉತ್ತರ ಹೇಳಲಿದೆ ಎಂದು ಭವಿಷ್ಯ ನುಡಿದಿದ್ದಾರೆ. ಈ ಕುರಿತು ತಮ ಅಧಿಕೃತ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಸಿಎಂ ವಿರುದ್ಧ ಸರಣಿ ಪೋಸ್ಟ್ ಮಾಡಿರುವ ವಿಜಯೇಂದ್ರ,ನಿಮಗೆ ನೆನಪಿಸುತ್ತಿದ್ದೇನೆ, ನನ್ನ ಈ ಹಿಂದಿನ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ. ನಾನು ನಿಮ ವೈಯಕ್ತಿಕ ಬದುಕಿನ ಚರಿತ್ರೆ, ಯನ್ನು ಪ್ರಶ್ನಿಸಿಲ್ಲ ಬದಲಾಗಿ ಈ ನಾಡು ಹಾಗೂ ಜನರ ಹಿತದೃಷ್ಟಿಯಿಂದ ಒಬ್ಬ ಮುಖ್ಯಮಂತ್ರಿಗೆ ಒಬ್ಬ ಪ್ರಜೆಯಾಗಿ ಕೇಳಬೇಕಾದ ಪ್ರಶ್ನೆಗಳನ್ನಷ್ಟೇ ಕೇಳಿದ್ದೇನೆ ಎಂದಿದ್ದಾರೆ.



## ಆರ್.ಅಶೋಕ್‌ಗೆ ಕಾಂಗ್ರೆಸ್ ಪಕ್ಷ, ಸರ್ಕಾರದ ಬಗ್ಗೆ ಮಾತನಾಡುವ ಯಾವುದೇ ನೈತಿಕತೆಯಿಲ್ಲ
### ಕಂದಾಯ ಸಚಿವರಾಗಿ ಅಕ್ರಮವಾಗಿ ಹಂಚಿರುವ ಭೂಮಿಯ ಆರೋಪಗಳಿಗೆ ಸಾರ್ವಜನಿಕವಾಗಿ ಇಲ್ಲಿಯವರೆಗೆ ಉತ್ತರ ನೀಡದೆ ಪಲಾಯನ ಮಾಡುತ್ತಿರುವ ಆರ್. ಅಶೋಕ್

• **ಉದಯವಾಹಿನಿ, ಬೆಂಗಳೂರು**

**ಗುರುತರವಾದ ಆರೋಪ ಎದುರಿಸುತ್ತಿರುವ ಅಶೋಕ್**

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಲೊಟ್ಟೆಗೊಲ್ಲ ಹಳ್ಳಿ ಭೂ ಪ್ರಕರಣದಲ್ಲಿ ಮಾಡಿರಬಹುದಾದ ವಂಚನೆ, ಅವರ ಶಿಕ್ಷಣ ಸಂಸ್ಥೆಗೆ ಪಡೆದಿರುವ ಅಕ್ರಮ ಭೂಮಿ, ಕಂದಾಯ ಸಚಿವರಾಗಿ ಅಕ್ರಮವಾಗಿ ಹಂಚಿರುವ ಭೂಮಿಯ ಆರೋಪಗಳಿಗೆ ಸಾರ್ವಜನಿಕವಾಗಿ ಇಲ್ಲಿಯವರೆಗೆ ಉತ್ತರ ನೀಡದೆ ಪಲಾಯನ ಮಾಡುತ್ತಿರುವ ಆರ್. ಅಶೋಕ್ ರವರು, ಕಾಂಗ್ರೆಸ್ ಪಕ್ಷ ಮತ್ತು ಸರ್ಕಾರದ ಮೇಲೆ ಮಾತನಾಡುವ ಯಾವುದೇ ನೈತಿಕತೆ ಉಳಿಸಿಕೊಂಡಿಲ್ಲ ಎಂಬುದಾಗಿ ಮಾಜಿ ಪರಿಷತ್ ಸದಸ್ಯ ಹಾಗೂ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ವಾಗ್ದಾಳಿ ನಡೆಸಿದ್ದಾರೆ.

ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವಂತ ಅವರು, ಕರ್ನಾಟಕದ ನವರಂಗಿ ವಿರೋಧ ಪಕ್ಷದ ನಾಯಕ ಶ್ರೀ ಆರ್ ಅಶೋಕ್ ರವರು ಚನ್ನಪಟ್ಟಣದ ಉಪಚುನಾವಣೆಯಲ್ಲಿ ಮಾತನಾಡುವಾಗ ಕಾಂಗ್ರೆಸ್ ಪಕ್ಷದ ದುರಾಡಳಿತದ ವಿರುದ್ಧ ಉಪಚುನಾವಣೆ ನಡೆಯುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬಹುತೇಕ ಕಾಂಗ್ರೆಸ್ ಪಕ್ಷಕ್ಕೆ ಅಥವಾ ಕರ್ನಾಟಕದ ಕಾಂಗ್ರೆಸ್ ನಾಯಕರಿಗೆ ಉಪಚುನಾವಣೆಗಳನ್ನು ದುರಾಡಳಿತದ ಮೇಲೆ ನಡೆಸುವ ಅವಶ್ಯಕತೆ ಇರುವುದಿಲ್ಲ. ಅಂತಹ ಅವಶ್ಯಕತೆ ಏನಾದರೂ ಇದ್ದರೆ ಅದು ಭಾರತೀಯ ಜನತಾ ಪಕ್ಷದ ನಾಯಕರಿಗೆ ಮತ್ತು ಅವರ ಪಕ್ಷಕ್ಕೆ ಇರುತ್ತದೆ. ಕಾಂಗ್ರೆಸ್ ಪಕ್ಷದ ಮೇಲೆ ಆರೋಪ ಮಾಡುತ್ತಿರುವುದು ಅವರ ವಿರೋಧ ಪಕ್ಷದ ನಾಯಕ ಸ್ಥಾನವನ್ನು ಉಳಿಸಿಕೊಳ್ಳುವ ಹತಾಶ ಪ್ರಯತ್ನ. ಕರ್ನಾಟಕದ ನವರಂಗಿ ವಿರೋಧ ಪಕ್ಷದ ನಾಯಕ ಆರ್ ಅಶೋಕ್ ಚನ್ನಪಟ್ಟಣದ ಉಪಚುನಾವಣೆಯಲ್ಲಿ ಮಾತನಾಡುವಾಗ



**ಪಕ್ಷೇತರವಾಗಿ ಸ್ಪರ್ಧೆ ಮಾಡುವಂತೆ ಯೋಗೀಶ್ವರ್ ಅವರಿಗೆ ಚಿತಾವಣೆ ಮಾಡಿದ ಅಶೋಕ್**

ಕರ್ನಾಟಕದ ಹೊಂದಾಣಿಕೆ ರಾಜಕಾರಣದ ಪಿತಾಮಹ ಖ್ಯಾತಿಯ ಆರ್ ಅಶೋಕ್ ರವರು 2013ರ ಬೆಂಗಳೂರು ಗ್ರಾಮಾಂತರ ಮತ್ತು ಮಂಡ್ಯ ಲೋಕಸಭಾ ಉಪ ಚುನಾವಣೆಯಲ್ಲಿ ಜೆಡಿಎಸ್ ಬಿಜೆಪಿ ಹೊಂದಾಣಿಕೆ ಮಾಡಿಸಿ ಅನಿತಾ ಕುಮಾರಸ್ವಾಮಿ ಮತ್ತು ಪುಟ್ಟರಾಜು ಅವರಿಗೆ ಕೈಕೊಟ್ಟು ದೇವೇಗೌಡರಿಂದ ಚೀಮಾರಿ ಹಾಕಿಸಿಕೊಂಡ ಘಟನೆ ಮಾಸುವ ಮುನ್ನವೇ ಚೆನ್ನಪಟ್ಟಣದಲ್ಲಿ ಹೊಸ ನಾಟಕ ಆರಂಭಿಸಿದ್ದಾರೆ. ಉಪ ಚುನಾವಣೆ ಪೂರ್ವದಲ್ಲಿ ಪಕ್ಷೇತರವಾಗಿ ಸ್ಪರ್ಧೆ ಮಾಡುವಂತೆ ಯೋಗೀಶ್ವರ್ ಅವರಿಗೆ ಚಿತಾವಣೆ ಮಾಡಿದ ಅಶೋಕ್, ಪ್ರತಿದಿನ ಒಂದೊಂದು ವೇಷ ಹಾಕುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ. ಬಿಜೆಪಿಯಲ್ಲಿ ಅನೇಕ ಹಿರಿಯರ ತುಳಿದು ವಿರೋಧ ಪಕ್ಷದ ಸ್ಥಾನ ಪಡೆದಿರುವ ಇವರು, ರಾಜ್ಯದ ಸಮಸ್ಯೆಗಳ ಮೇಲೆ ಬೆಳುಕು ಚೆಲ್ಲುವ ಬದಲು, ರಾಜಕೀಯ ಭಾಷಣ ಮಾಡಿಕೊಂಡು ಅಲೆದಾಡುತ್ತಿದ್ದಾರೆ. ಇದು ಈ ರಾಜ್ಯದ ದುರಂತ ಮತ್ತು ಬಿಜೆಪಿ ಅಧೋಗತಿ ಎಂಬುದಾಗಿ ಗುಡುಗಿದ್ದಾರೆ.

ಕಾಂಗ್ರೆಸ್ ಪಕ್ಷದ ದುರಳಿತದ ವಿರುದ್ಧ ಉಪಚುನಾವಣೆ ನಡೆಯುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬಹುತೇಕ ಕಾಂಗ್ರೆಸ್ ಪಕ್ಷಕ್ಕೆ ಅಥವಾ ಕರ್ನಾಟಕದ ಕಾಂಗ್ರೆಸ್ ನಾಯಕರಿಗೆ ಉಪಚುನಾವಣೆಗಳನ್ನು ದುರಡಳಿತದ ಮೇಲೆ ನಡೆಸುವ ಅವಶ್ಯಕತೆ ಇರುವುದಿಲ್ಲ ಅಂತಹ ಅವಶ್ಯಕತ್ತೆ ಏನಾದರೂ ಇದ್ದರೆ ಅದು ಭಾರತೀಯ ಜನತಾ ಪಕ್ಷದ ನಾಯಕರಿಗೆ ಮತ್ತು ಅವರ ಪಕ್ಷಕ್ಕೆ ಇರುತ್ತದೆ ಎಂದು ಕಿಡಿಕಾರಿದ್ದಾರೆ.

ಬಿಜೆಪಿ ನಾಯಕರಾದ ಯತ್ನಾಳ್ ಅವರು ಆರ್. ಅಶೋಕ್ ರವರು ಅಡ್ಜಸ್ಟ್ಮೆಂಟ್ ಗಿರಾಕಿ ಎನ್ನುವ ವಿಷಯವನ್ನು ಹಲವಾರು ಬಾರಿ ಪ್ರಸ್ತಾಪ ಮಾಡಿರುತ್ತಾರೆ. ಇದರ ಜೊತೆಗೆ ಕರ್ನಾಟಕದ ಪದ್ಮನಾಭನಗರದ ವಿಧಾನಸಭಾ ಕ್ಷೇತ್ರದಲ್ಲಿ ಪ್ರತಿಬಾರಿ ಜೆಡಿಎಸ್ ನಾಯಕರು ಜೊತೆ ಹೊಂದಾಣಿಕೆ ಮಾಡಿಕೊಂಡು ಗೆಲ್ಲುವ ಆರ್ ಅಶೋಕ್ ಅವರು, ತಾವು ಸಮರ್ಥ ವಿರೋಧ ಪಕ್ಷದ ನಾಯಕರು ಎಂಬುದನ್ನ ಇದುವರೆಗೆ ರುಜುವಾತು ಮಾಡಲು ಸಾಧ್ಯವಾಗಿಲ್ಲ. ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿ.ಎಮ್. ಕಾವಲು ಗ್ರಾಮದಲ್ಲಿ 2500 ಎಕರೆ ಅಕ್ರಮ ಮಂಜೂರಾತಿಗೆ ಸಂಬಂಧ ಪಟ್ಟಂತೆ ಗುರುತರವಾದ ಆರೋಪವನ್ನು ಎದುರಿಸುತ್ತಿರುವ ಅಶೋಕ್ ರವರು, ಈ ಪ್ರಕರಣದ ಮಾಹಿತಿಯನ್ನು ತಮ್ಮ ಚುನಾವಣಾ ಪ್ರಮಾಣ ಪತ್ರದಲ್ಲಿ ನೀಡದೆ ಪ್ರಮಾದವನ್ನು ಎಸಗಿರುತ್ತಾರೆ ಎಂದಿದ್ದಾರೆ.

**ಈ ದಿನದ ದರ** ಪೆಟ್ರೋಲ್: 103.44 ₹/L | ಡೀಸೆಲ್ : 89.97 ₹/L | ಬಂಗಾರ: ₹8,040/Gram24ct ₹7,370/Gram22ct | ಬೆಳ್ಳಿ: ₹97.00/Gram



## ಸಿದ್ದಸೂಕ್ತಿ

ಡಾ ಆರೂಢಭಾರತೀ ಸ್ವಾಮೀಜಿ
ಶ್ರೀ ಸಿದ್ಧಾರೂಢ ಮಿಷನ್ ಆಶ್ರಮ
ರಾಮೋಹಳ್ಳಿ

### ಸಾಮಾಜಿಕ ಹೊಣೆಗಾರಿಕೆ

ಮೊನ್ನೆ ಬೆಳಗಾವಿಯಿಂದ ಬಡಕುಂದ್ರಿ ಕ್ರಾಸ್‌ನತ್ತ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆ. ಪಕ್ಕದಲ್ಲಿದ್ದ ಬೆಳಗಾವಿಯ ಕನ್ನಡ ಪ್ರಾಧ್ಯಾಪಕ ಶಶಿಕಾಂತ ತಾರದಾಳೆ ಮಾತಿಗಿಳಿದರು. ನಮ್ಮಲ್ಲಿ ಧರ್ಮ ಜಾಗೃತಿ ಇನ್ನೂ ಹೆಚ್ಚಬೇಕು, ಬಹುತೇಕ ಕಡೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಪ್ರವಚನಗಳಿಗೆ ವಯೋವೃದ್ಧರೇ ಹೆಚ್ಚು ಸೇರುವವರು. ಇಂಥವರಿಗೆ ಈ ಪ್ರವಚನ ತಮ್ಮ ಸ್ವಂತ ಬದುಕಿಗೆ ಮಾತ್ರ ಲಾಭ ಎನ್ನಬಹುದು. ಏಕೆಂದರೆ ಅವರಿಗೆ ಸಮಾಜವನ್ನು ತಿದ್ದುವ ಶಕ್ತಿ ಕಡಿಮೆ. ಅದಕ್ಕೆ ಬದಲಾಗಿ ತರುಣರು ಹೆಚ್ಚು ಹೆಚ್ಚು ಸೇರಬೇಕು. ಇದರಿಂದ ತರುಣರ ಜೀವನ ರೂಪಿತವಾಗುವ ಜೊತೆಗೆ ತರುಣರು ಸಮಾಜವನ್ನು ರೂಪಿಸಲು ಸಾಧ್ಯ. ಮಠಮಾನ್ಯಗಳಿಗೆ ಜನರ ಭೇಟಿ, ಕೊಡುವ ದೇಣಿಗೆ ಕ್ಷೀಣಿಸುತ್ತಿದೆ. ಮಠಮಾನ್ಯಗಳು ಸಮಾಜದ ಆಸ್ತಿ. ಇವುಗಳ ಬೆಳವಣಿಗೆಗೆ ಜನ ಕೈ ಜೋಡಿಸಬೇಕು. ಮನೆ ಬಿಟ್ಟರೆ ಮತ್ತೊಂದು ಆಶ್ರಯ ಮಠ. ಇದು ಉಳಿದು ಬೆಳೆದರೆ ಇಂದಲ್ಲ ನಾಳೆ ನಮಗೋ ನಮ್ಮವರಿಗೋ ಆಶ್ರಯ. ನಮಸ್ಕಾರದ ಜೊತೆಗೆ ಕನಿಷ್ಠ ನೂರು ರೂಗಳ ದೇಣಿಗೆ ಇರಲಿ. ಅದು ದಾಸೋಹಕ್ಕೋ ಬಡಮಕ್ಕಳ ವಿದ್ಯೆಗೋ ಗೋಸೇವೆಗೋ ತೋಟಕ್ಕೋ ಓಡಾಟಕ್ಕೋ ಇನ್ನಾವುದೋ ಸತ್ಪಾತ್ರಕ್ಕೆ ವಿನಿಯೋಗವಾಗುವುದು. ದುಶ್ಚಟಗಳ ಖರ್ಚಿಗೆ ತೋರುವ ಆಸಕ್ತಿ ಇಂಥವುಗಳಿಗಿಲ್ಲದಿರುವುದು ಶೋಚನೀಯ. ಮಠಮಾನ್ಯಗಳ ಸೌಲಭ್ಯ ಉಪಯೋಗಿಸಿಕೊಳ್ಳಬೇಕೇ ಹೊರತು ಹೊತ್ತೊಯ್ಯಬಾರದೆಂದರು. ಕೇಳಿ ಮನದುಂಬಿ ಕಣ್ಣಲ್ಲಿ ನೀರು ಜಿನುಗಿತು.

## ಬೆಚ್ಚಿ ಬೀಳಿಸೋ ಘಟನೆ : ಯುವಕನ ಕತ್ತು ಸೀಳಿ ಭೀಕರವಾಗಿ ಕೊಂದ ಸ್ನೇಹಿತರು

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಭೀಕರವಾದಂತಹ ಕೊಲೆ ನಡೆದಿದ್ದು ಸ್ನೇಹಿತರೆ ಯುವಕನ ಕತ್ತು ಸೀಳಿ ಬರ್ಬರವಾಗಿ ಕೊಲೆ ಮಾಡಿರುವ ಘಟನೆ ಬೆಂಗಳೂರಿನ ನೆಲಮಂಗಲ ತಾಲ್ಲೂಕಿನ ಅರಿಶಿನಕುಂಟೆಯಲ್ಲಿ ಈ ಒಂದು ಕೊಲೆ ನಡೆದಿದೆ. ಹೌದು ಅರಿಶಿನಕುಂಟೆಯಲ್ಲಿ ನೇಪಾಳದ ಹೇಮರಾಜು (28) ಎನ್ನುವ ಯುವಕನ ಬರ್ಬರ ಕೊಲೆಯಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನಲ್ಲಿ ಈ ಒಂದು ಕೊಲೆ ನಡೆದಿದೆ.ಬಿಹಾರ್ ಮೂಲದ ಲಕ್ಕಿ ಹಾಗೂ ಮುಕೇಶ್ ಎಂಬವರಿಂದ ಈ ಕೃತ್ಯ ನಡೆದಿದೆ ಎನ್ನಲಾಗಿದೆ. ಬೈಕ್ ವಿಚಾರಕ್ಕೆ ಯುವಕರು ಗಲಾಟೆ ಮಾಡಿಕೊಂಡಿದ್ದರು ಎಂದು ಹೇಳಲಾಗುತ್ತಿದ್ದು, ಈ ವೇಳೆ ರಾತ್ರಿ ಮಲಗಿದ್ದ ಸಂದರ್ಭದಲ್ಲಿ ಕತ್ತು ಕೊಯ್ದು ಹೇಮರಾಜುವನ್ನು ಹತ್ಯೆ ಮಾಡಲಾಗಿದೆ. ಕೊಲೆ ಮಾಡಿ ಇಬ್ಬರು ಆರೋಪಿಗಳು ಪರಾರಿಯಾಗಿದ್ದಾರೆ. ಘಟನೆ ಕುರಿತಂತೆ ನೆಲಮಂಗಲ ಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ವಿವಿಧ ಜಿಲ್ಲೆಗಳಲ್ಲಿ 47,362 ವಕ್ಫ್ ಆಸ್ತಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ರಾಜಕಾರಣದಲ್ಲಿ ವಕ್ಫ್ ಆಸ್ತಿ ವಿವಾದವು ಸದ್ಯ ರಾಜಕೀಯ ನಾಯಕರ ದಂಗಲ್‌ಗೆ ಕಾರಣವಾಗಿದೆ. ರೈತರ ಕೃಷಿ ಜಮೀನುಗಳ ಪಹಣಿಯಲ್ಲಿ ಇತ್ತೀಚೆಗೆ ವಕ್ಫ್ ಆಸ್ತಿ ಎಂಬ ಉಲ್ಲೇಖದ ವರದಿಯು ಕಿಡಿಹೊತ್ತಿಸಿದೆ.

ವಿಜಯಪುರ, ಬೀದರ್, ಕಲಬುರಗಿ, ಹಾವೇರಿ, ಬಳ್ಳಾರಿ, ರಾಯಚೂರು, ಧಾರವಾಡ, ಚಿಕ್ಕೋಡಿ, ಬಾಲಕೋಟೆ, ಉತ್ತರ ಕನ್ನಡ, ಯಾದಗಿರಿ, ಬೆಂಗಳೂರು ನಗರ, ಗದಗ, ಬೆಳಗಾವಿ, ತುಮಕೂರು, ಕೋಲಾರ, ಮೈಸೂರು ಹೀಗೆ ವಿವಿಧ ಜಿಲ್ಲೆಗಳಲ್ಲಿ ಬರೋಬ್ಬರಿ ರಾಜ್ಯಾದ್ಯಂತ 47,362 ವಕ್ಫ್ ಆಸ್ತಿಗಳಿವೆ ಎಂದು ಎಂಬ ಹೇಳಲಾಗುತ್ತಿದೆ. ಇನ್ನು ಕಳೆದ 4 ವರ್ಷದಲ್ಲಿ ರಾಜ್ಯಾದ್ಯಂತ 1,127 ವಕ್ಫ್ ಆಸ್ತಿ ಒತ್ತುವರಿ ಆಗಿವೆ ಎಂಬ ಆರೋಪಗಳು ಕೇಳಿಬರುತ್ತಿವೆ. ದಕ್ಷಿಣ ಕರ್ನಾಟಕಕ್ಕಿಂತ ಉತ್ತರ ಕರ್ನಾಟಕದ ಭಾಗದಲ್ಲೇ ಹೆಚ್ಚು ವಕ್ಫ್ ಆಸ್ತಿಗಳಿವೆ ಎಂದು ವರದಿಯಾಗಿದೆ.

## ಸಾಲಗಾರರ ಕಿರುಕುಳಕ್ಕೆ ಬೇಸತ್ತು ನಿರ್ದೇಶಕ ಗುರುಪ್ರಸಾದ್ ಆತ್ಮಹತ್ಯೆಗೆ ಶರಣು

• ಉದಯವಾಹಿನಿ, ಬೆಂಗಳೂರು

ಸ್ಯಾಂಡಲ್ ವುಡ್ ನಟ, ನಿರ್ದೇಶಕ ಗುರುಪ್ರಸಾದ್ ಸಾಲಗಾರರ ಕಿರುಕುಳಕ್ಕೆ ಬೇಸತ್ತು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂಬುದಾಗಿ ಸ್ಫೋಟಕ ಮಾಹಿತಿ ಹೊರಬಿದ್ದಿದೆ. ಇತ್ತೀಚೆಗೆ ಎರಡನೇ ಮದುವೆ ಆಗಿದ್ದಂತ ನಟ, ನಿರ್ದೇಶಕರ ಗುರುಪ್ರಸಾದ್ ಅವರು ಸಾಲ ಮಾಡಿದ್ದರು.ಸಾಲ ತೀರಿಸಲು ಆಗದೇ ತೊಳಲಾಡುತ್ತಿದ್ದರು. ಇದೇ ಕಾರಣದಿಂದ ಬೇಸತ್ತು ಆತ್ಮಹತ್ಯೆಗೆ ಶರಣಾಗಿರುವುದಾಗಿ ತಿಳಿದು ಬಂದಿದೆ. ಪದೇ ಪದೇ ಸಾಲಗಾರರು ಮನೆಗೆ ಬರ್ತಾರೆ ಅಂತ ಮನೆ ಕೂಡ ಮೂರು ಬಾರಿ ಬೆಂಗಳೂರಲ್ಲಿ ಬದಲಾವಣೆ ಮಾಡಿದ್ದರಂತೆ. ಜಯನಗರ, ಕನಕಪುರ, ಅಶೋಕ ನಗರದಲ್ಲಿ ಮನೆ ಮಾಡಿದ್ದರು. ಕೊನೆ ಕೊನೆಗೆ ಒಂಟಿಯಾಗಿ ಕೂಡ ವಾಸವಾಗಿದ್ದರು. ಇನ್ನೂ ಗುರುಪ್ರಸಾದ್ ಈ ಬಗ್ಗೆ ನಟ ಜಗ್ಗೇಶ್ ಅವರ ಜೊತೆಗೆ ಹಂಚಿಕೊಂಡಿದ್ದರು. ಸಮಾಧಾನಿಸಿ ಕಳುಹಿಸಿದ್ದಾಗಿ ಹೇಳಿದ್ದಾರೆ.

## ಹೆಮ್ಮಿಗೆಪುರದಲ್ಲಿ ಸ್ಕೈಡೆಕ್ ನಿರ್ಮಾಣಕ್ಕೆ ಜಾಗ ಅಂತಿಮಗೊಳಿಸಿದ ಬಿಬಿಎಂಪಿ

• ಉದಯವಾಹಿನಿ, ಬೆಂಗಳೂರು

ಜನತೆಗೆ ಬಿಬಿಎಂಪಿ ಸಿಹಿ ಸುದ್ದಿಯೊಂದನ್ನು ನೀಡಿದ್ದು, ಬೆಂಗಳೂರಿನ ಅತಿ ಎತ್ತರದ ಸ್ಕೈಡೆಕ್ ನಿರ್ಮಾಣಕ್ಕೆ ಬಿಬಿಎಂಪಿ ಇದೀಗ ಜಾಗ ಅಂತಿಮಗೊಳಿಸಿದೆ. ಬೆಂಗಳೂರಿನ ಹೊರವಲಯದ ಹೆಮ್ಮಿಗೆಪುರದಲ್ಲಿ ಸ್ಕೈಡೆಕ್ ನಿರ್ಮಾಣಕ್ಕೆ ನಿರ್ಧರಿಸಿದ್ದು, ಈ ಜಾಗದಲ್ಲಿ ಗೋಪುರ ನಿರ್ಮಾಣಕ್ಕೆ ಆಕ್ಷೇಪಣೆ ಇದ್ದರೆ ಸಾರ್ವಜನಿಕರು ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಿದೆ. ಪ್ರವಾಸೋದ್ಯಮ ಉತ್ತೇಜನದ ಜೊತೆಗೆ ಬೆಂಗಳೂರು ನಗರವನ್ನು ವೀಕ್ಷಣೆ ಮಾಡುವ ಉದ್ದೇಶದಿಂದ ಆಕಾಶ ಗೋಪುರ ನಿರ್ಮಾಣ ಮಾಡಲು ಬಿಬಿಎಂಪಿ ತೀರ್ಮಾನಿಸಿತ್ತು. ಇದಕ್ಕಾಗಿ ಎನ್‌ಜಿಇಎಫ್, ಯಶವಂತಪುರ ಬಳಿಯ ಸಾಬೂನು ಕಾರ್ಖಾನೆ, ವೈಟ್‌ಫೀಲ್ಡ್, ಜಿಕೆವಿಕೆ, ರೇಸ್‌ಕೋರ್ಸ್, ಬೆಂಗಳೂರು ಅರಮನೆ ಆವರಣದ ಜಾಗಗಳನ್ನು ಗುರುತಿಸಲಾಗಿತ್ತು.



ಉದಯವಾಹಿನಿ ಚಿತ್ರ

ಆದರೆ ಇದೀಗ ರಾಜ್ಯ ಸರ್ಕಾರ ಬೆಂಗಳೂರು ನಗರಾಭಿವೃದ್ಧಿ ಇಲಾಖೆ ಬ್ರ್ಯಾಂಡ್ ಬೆಂಗಳೂರಿನಡಿ ಅತಿ ಎತ್ತರದ ಆಕಾಶ ಗೋಪುರ ನಿರ್ಮಾಣಕ್ಕೆ ಮುಂದಾಗಿದೆ. ಇದಕ್ಕೆ ಹೆಮ್ಮಿಗೆಪುರದಲ್ಲಿ ಜಾಗ ಕೂಡ ಫೈನಲ್ ಆಗಿದೆ. ಹೆಮ್ಮಿಗೆಪುರದಲ್ಲಿ ಸ್ಕೈಡೆಕ್ ನಿರ್ಮಾಣ ಮಾಡೋದಕ್ಕೆ ಆಕ್ಷೇಪಣೆ ಇದ್ದರೆ ನವೆಂಬರ್ 8ರ ಒಳಗಡೆ ಆಕ್ಷೇಪಣೆ ಸಲ್ಲಿಸಲು ಬಿಬಿಎಂಪಿ ಸಾರ್ವಜನಿಕರಿಗೆ ಮನವಿ ಮಾಡಿದೆ. ಸ್ಕೈ ಡೆಕ್ ಬೆಂಗಳೂರಿನ ವೈಮಾನಿಕ ನೋಟವನ್ನು ಒದಗಿಸುವ ಮೂಲಕ ಸಮಗ್ರ ಪ್ರವಾಸಿ ತಾಣವಾಗಲು ಸಜ್ಜಾಗಿದೆ. ಅದರ ಪ್ರಾಥಮಿಕ ಕಾರ್ಯವನ್ನು ಮೀರಿ, ವಾಹನ ನಿಲುಗಡೆ, ರೆಸ್ಟೋರೆಂಟ್‌ಗಳು, ಥಿಯೇಟರ್ ಮತ್ತು ಸ್ಕೈ ಗಾರ್ಡನ್‌ನಂತಹ ಸೌಕರ್ಯಗಳನ್ನು ಹೊಂದಿರುತ್ತದೆ. ಮೇಲಿನ ವಿಭಾಗವು ರೋಲರ್-ಕೋಸ್ಟರ್ ಸ್ಟೇಷನ್, ಎಕ್ಸಿಬಿಷನ್ ಹಾಲ್, ಸ್ಕೈ ಲಾಬಿ, ಬಾರ್ ಮತ್ತು ವಿಐಪಿಗಳಿಗಾಗಿ ವಿಶೇಷ ಸ್ಥಳ ಒಳಗೊಂಡಿರುತ್ತದೆ.

# ಬಿಎಸ್‌ವೈ, ಹೆಚ್‌ಡಿಕೆ ವಕ್ಫ್‌ಗೆ ಬದಲಾಯಿಸಿದ ದಾಖಲೆ ಬಿಡುಗಡೆ

## ಮೋದಿ ಅವರ ಬದಲಿಗೆ ತಾವೇ ಬಹಿರಂಗ ಚರ್ಚೆಗೆ ಸಿದ್ಧ, ಬೇಟಿ ಬಚಾವೋ ಬೇಟಿ ಪಡಾವೋ'' ಎಂದು ಆಗಾಗ ಘೋಷಣೆ

• ಉದಯವಾಹಿನಿ, ಬೆಂಗಳೂರು

ಶೀಘ್ರದಲ್ಲೇ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಜಗದೀಶ್ ಶೆಟ್ಟರ್ ಮತ್ತು ಈಗಿನ ನಿಮ್ಮ ಮಿತ್ರ ಪಕ್ಷವಾದ ಜೆಡಿಎಸ್ ನ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ನೂರಾರು ರೈತ ಕುಟುಂಬಗಳ ಆಸ್ತಿಗಳನ್ನು ವಕ್ಫ್ ಬೋರ್ಡ್‌ಗೆ ಖಾತೆ ಬದಲಾಯಿಸಿದ ದಾಖಲೆಗಳನ್ನು ನಾವು ಬಿಡುಗಡೆ ಮಾಡುತ್ತೇವೆ ಎಂಬುದಾಗಿ ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ. ಈ ಬಗ್ಗೆ ಮಾಧ್ಯಮ ಪ್ರಕಟಣೆ ನೀಡಿದ್ದು, ವಿಜಯೇಂದ್ರ ಅವರೇ, ಪ್ರಧಾನಿ ನರೇಂದ್ರ ಮೋದಿ ಅವರ ಬದಲಿಗೆ ತಾವೇ ಬಹಿರಂಗ ಚರ್ಚೆಗೆ ಸಿದ್ಧ ಎಂದು ನೀವು ಹಾಕಿರುವ ಸವಾಲನ್ನು ಗಮನಿಸಿದೆ. ನನ್ನ ಜೊತೆ ಚರ್ಚೆ ನಡೆಸುವ ಮೊದಲು ನಿಮ್ಮದೇ ಪಕ್ಷದ ನಾಯಕರಾಗಿರುವ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ರಮೇಶ್ ಜಾರಕಿಹೊಳಿ ಅವರ ಜೊತೆ ಒಂದು ಸುತ್ತು ಚರ್ಚೆ ಮಾಡಿಕೊಂಡು ಬನ್ನಿ ಎಂದರು.

ನಿಮ್ಮ ಪೂಜ್ಯ ತಂದೆಯವರನ್ನು ಮುಖ್ಯಮಂತ್ರಿ ಮಾಡಲು ನೀವು ಬಿಜೆಪಿ ಹೈಕಮಾಂಡ್ ಗೆ ಎರಡು ಸಾವಿರ ಕೋಟಿ ರೂಪಾಯಿ ನೀಡಿದ್ದೀರಿ..!! ನಿಮ್ಮನ್ನು ಪಕ್ಷದ ಅಧ್ಯಕ್ಷರನ್ನಾಗಿ ಮಾಡಲು

> **ಬೇಟಿ ಬಚಾವೋ ಬೇಟಿ ಪಡಾವೋ'' ಎಂದು ಆಗಾಗ ಘೋಷಣೆ ಕೂಗುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು ಈ ಘೋಷಣೆಗೆ ಬದ್ಧರಾಗಿದ್ದರೆ ಪೋಕ್ಸೋ ಆರೋಪಿ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಪಕ್ಷದ ರಾಷ್ಟ್ರೀಯ ಸಂಸದೀಯ ಮಂಡಳಿಯ ಸದಸ್ಯ ಸ್ಥಾನದಿಂದ ಮತ್ತು ಅವರನ್ನು ರಕ್ಷಿಸುತ್ತಿರುವ ನಿಮ್ಮನ್ನು ಪಕ್ಷದ ಅಧ್ಯಕ್ಷ ಸ್ಥಾನದಿಂದ ಕಿತ್ತುಹಾಕಬೇಕು ಎಂದು ಆಗ್ರಹಿಸಿದ್ದಾರೆ.**

**ಸಿಎಂ ಸಿದ್ದರಾಮಯ್ಯ ಹೇಳಿಕೆ**

ಇನ್ನೂ ಒಂದಷ್ಟು ಕೋಟಿ ರೂಪಾಯಿ ನೀಡಿದ್ದೀರಿ.. ಎಂದು ನಿಮ್ಮ ನಾಯಕರೇ ಆರೋಪಿಸಿದ್ದಾರೆ.

ಮೊದಲು ಅವರ ಜೊತೆ ಚರ್ಚೆ ಮಾಡಿ ಮುಗಿಸಿ ಬನ್ನಿ ಎಂಬುದಾಗಿ ಹೇಳಿದ್ದಾರೆ. ನೀವಿನ್ನೂ ಆಡಳಿತಕ್ಕೆ ಹೊಸಬರು, ತೆರಿಗೆ - ಅನುದಾನ - ಜಿಎಸ್‌ಟಿ ಇತ್ಯಾದಿ ವಿಚಾರಗಳೆಲ್ಲ ನಿಮ್ಮ ಪೂಜ್ಯ ತಂದೆಯವರಾದ ಬಿ.ಎಸ್ .ಯಡಿಯೂರಪ್ಪನವರಿಗೇ ಅರ್ಥವಾಗಿಲ್ಲ, ನಿಮಗೆಷ್ಟು ಅರ್ಥವಾಗಬಹುದು



> **ದೇಶದ ಒಟ್ಟು ತೆರಿಗೆ ಸಂಗ್ರಹಕ್ಕೆ ಕರ್ನಾಟಕ ರೂ.4 ಲಕ್ಷ ಕೋಟಿ ರೂಪಾಯಿಗಳನ್ನು ನೀಡುತ್ತಿದ್ದರೂ ತೆರಿಗೆ ಹಂಚಿಕೆ ರೂಪದಲ್ಲಿ ನಮಗೆ ಸಿಗುತ್ತಿರುವ ಪಾಲು ರೂ.45,000 ಕೋಟಿ ಮಾತ್ರ. ಕರ್ನಾಟಕದ ಜನತೆ, ಕೇಂದ್ರ ಸರ್ಕಾರಕ್ಕೆ ನೀಡುತ್ತಿರುವ ಪ್ರತಿಯೊಂದು ರೂಪಾಯಿಗೆ ಹಿಂದಿರುಗಿ ಬರುತ್ತಿರುವುದು ಕೇವಲ 15 ಪೈಸೆ ಮಾತ್ರ. ಏಳು ಕೋಟಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತುವ ದಮ್-ತಾಖತ್ ನಿಮಗಾಗಲಿ ನಿಮ್ಮ ಹದಿನೇಳು ಎಂಪಿಗಳಿಗಾಗಲಿ ಎಲ್ಲಿದೆ ಎಂದು ಕೇಳಿದ್ದಾರೆ.**

> **ವಕ್ಫ್ ಆಸ್ತಿ ವಿಚಾರದಲ್ಲಿ ಸುಬಗರ ಸೋಗು ಹಾಕುವುದೇನು ಬೇಡ. ನಿಮ್ಮದೇ ಪಕ್ಷದ ಬಿ.ಎಸ್.ಯಡಿಯೂರಪ್ಪ, ಡಿ.ವಿ.ಸದಾನಂದ ಗೌಡ, ಜಗದೀಶ್ ಶೆಟ್ಟರ್ ಮತ್ತು ಈಗಿನ ನಿಮ್ಮ ಮಿತ್ರ ಪಕ್ಷವಾದ ಜೆಡಿಎಸ್‌ನ ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾಗಿದ್ದಾಗ ನೂರಾರು ರೈತ ಕುಟುಂಬಗಳ ಆಸ್ತಿಗಳನ್ನು ವಕ್ಫ್ ಬೋರ್ಡ್‌ಗೆ ಖಾತೆ ಬದಲಾಯಿಸಿದ ದಾಖಲೆಗಳನ್ನು ಶೀಘ್ರದಲ್ಲಿ ನಾವು ಬಿಡುಗಡೆ ಮಾಡುತ್ತೇವೆ. ಆಗ ನಿಮ್ಮ ಪಾಪದ ಫಲವನ್ನು ನೀವೇ ಉಣ್ಣಬೇಕಾಗುವ ಸಂದರ್ಭ ಬರಬಹುದು..!! ಅದಕ್ಕೆ ಸಿದ್ಧರಾಗಿರಿ ಎಂದು ಎಚ್ಚರಿಕೆ ನೀಡಿದ್ದಾರೆ.**

ಕೇಂದ್ರದಲ್ಲಿ ಅಧಿಕಾರದಲ್ಲಿರುವ ನಿಮ್ಮದೇ ಪಕ್ಷದ ಸರ್ಕಾರ ತೆರಿಗೆ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಮಾಡುತ್ತಿರುವ ಅನ್ಯಾಯ ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗುತ್ತಿದೆ. ಇತ್ತೀಚೆಗಷ್ಟೇ 28 ರಾಜ್ಯಗಳಿಗೆ ಒಟ್ಟು 1,78,193 ಕೋಟಿ ರೂಪಾಯಿ ತೆರಿಗೆ ಪಾಲನ್ನು ಬಿಡುಗಡೆಗೊಳಿಸಿರುವ ಕೇಂದ್ರ ಸರ್ಕಾರ, ಕರ್ನಾಟಕಕ್ಕೆ ನೀಡಿರುವುದು ಕೇವಲ ರೂ.6,498 ಕೋಟಿ ಮಾತ್ರ ಎಂದಿದ್ದಾರೆ.

## ರಾಜ್ಯದಲ್ಲಿ ತಣ್ಣಗಾಗದ ವಕ್ಫ್ ವಿವಾದ

• ಉದಯವಾಹಿನಿ, ಬೆಂಗಳೂರು



ರಾಜ್ಯದಲ್ಲಿ ವಕ್ಫ್ ವಿವಾದಕ್ಕೆ ಸಂಬಂಧಪಟ್ಟಂತೆ ಸಿಎಂ ಸಿದ್ದರಾಮಯ್ಯ ಅವರು ನಿನ್ನೆ ನಡೆದ ಸಭೆಯಲ್ಲಿ ಅಧಿಕಾರಿ ಗಳಿಗೆ ರೈತರಿಗೆ ಕೊಟ್ಟಿದ್ದ ನೋಟಿಸ್‌ಗಳನ್ನು ಕೂಡಲೇ ಹಿಂಪಡೆಯಿರಿ ಎಂದು ಖಡಕ್ ಸೂಚನೆ ನೀಡಿದ್ದಾರೆ.

ಆದರೆ ಇಷ್ಟಕ್ಕೆ ತಣ್ಣಗಾಗದ ಬಿಜೆಪಿಯು ಈ ಕುರಿತಂತೆ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಲು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಮುಂದಾಗಿದ್ದಾರೆ ಎನ್ನಲಾಗಿದೆ. ಹೌದು ವಕ್ಫ್ ವಿವಾದಕ್ಕೆ ಸಂಬಂಧಿಸಿದಂತೆ ಬಿಜೆಪಿಯ ಸಂಸದ ತೇಜಸ್ವಿ ಸೂರ್ಯ ಅವರು ಹೈ ಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸೋಕೆ ಸಿದ್ಧತೆ ಮಾಡಿಕೊಂಡಿದ್ದರೆ ಎನ್ನಲಾಗಿದೆ. ಸೋಮವಾರ ತೇಜಸ್ವಿ ಸೂರ್ಯ ರಿಟ್ ಅರ್ಜಿ ಸಲ್ಲಿಸಲಿದ್ದಾರೆ. ವಕ್ಫ್ ಕಾಯ್ದೆ ತಿದ್ದುಪಡಿ ಕುರಿತ ಜೆಪಿಸಿ ಸದಸ್ಯರಾಗಿರುವ ತೇಜಸ್ವಿ ಸೂರ್ಯ ಅವರು ರೈತರ ಪಹಣಿಯಲ್ಲಿ ವಕ್ಫ್ ಎಂದು ನೋಂದಣಿ ಮಾಡಿರುವುದು ಹಾಗೂ ನಾವು ರೈತರಿಗೆ ನೋಟಿಸ್ ನೀಡಿರುವ ವಿಚಾರವಾಗಿ ರಿಟ್ ಅರ್ಜಿ ಸಲ್ಲಿಸಲಿದ್ದಾರೆ ಎಂದು ತಿಳಿದುಬಂದಿದೆ. ರಾಜ್ಯದಲ್ಲಿ ಭುಗಿಲೆದ್ದ ವಕ್ಫ್ ವಿವಾದಕ್ಕೆ ಸಂಬಂಧಿಸಿದಂತೆ ನವೆಂಬರ್ 6 ಮತ್ತು 7 ರಂದು ರಾಜ್ಯಕ್ಕೆ ಜೆಪಿಸಿ ಎಂಟ್ರಿ ಆಗಲಿದೆ. ಕೇಂದ್ರ ಸರ್ಕಾರ ರಚಿಸಿರುವ ಜಂಟಿ ಸಂಸದೀಯ ಸಮಿತಿ ರಾಜ್ಯಕ್ಕೆ ಆಗಮಿಸಲಿದೆ. ಜೆಪಿಸಿ ಅಧ್ಯಕ್ಷ ಜಗದೀಕ ಪಾಲ್ ಇದೆ ನವೆಂಬರ್ 6 ರಂದು ರಾಜ್ಯಕ್ಕೆ ಭೇಟಿ ಸಾಧ್ಯತೆ ಇದೆ ಎನ್ನುವ ಮಾಹಿತಿ ಸಿಕ್ಕಿದೆ. ನವೆಂಬರ್ 6 ರಂದು ಹುಬ್ಬಳ್ಳಿಯಲ್ಲಿ ಉತ್ತರ ಕರ್ನಾಟಕ ಭಾಗದ ರೈತರ ಭೇಟಿ ಮಾಡಲಿದ್ದು, ಬಳಿಕ ನವೆಂಬರ್ 7ಕ್ಕೆ ಬೆಂಗಳೂರಿನಲ್ಲಿ ದಕ್ಷಿಣ ಕರ್ನಾಟಕ ರೈತರ ಭೇಟಿ ಮಾಡಲಿದ್ದಾರೆ ಎಂದು ಹೇಳಲಾಗುತ್ತಿದೆ.

## ಸಾವಿರ ಸಲ ಆತ್ಮಹತ್ಯೆ ಮಾಡ್ಕೋತೇನೆ ಅಂತ ಹೇಳಿದ್ದ

• ಉದಯವಾಹಿನಿ, ಬೆಂಗಳೂರು

ಮಠ ಚಲನಚಿತ್ರದ ಖ್ಯಾತ ನಿರ್ದೇಶಕ ಗುರುಪ್ರಸಾದ್ ಅವರು ಬೆಂಗಳೂರಿನ ಉತ್ತರ ತಾಲ್ಲೂಕಿನ ಮಾದನಾಯಕನ ಹಳ್ಳಿಯ ಅಪಾರ್ಟ್ಮೆಂಟ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ.

ಈ ಒಂದು ವಿಚಾರವಾಗಿ ಹಿರಿಯ ನಟ ಜಗ್ಗೇಶ್ ಅವರು ನನಗೆ ಗುರುಪ್ರಸಾದ್, ಸಾವಿರ ಸಲ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೇಳಿದ್ದ ಎಂಬ ಶಾಕಿಂಗ್ ಮಾಹಿತಿ ಬಿಚ್ಚಿಟ್ಟರು. ಮಾಧ್ಯಮಗಳೊಂದಿಗೆ ಮಾತನಾಡಿದ ನಟ ಜಗ್ಗೇಶ್, ಗುರುಪ್ರಸಾದ್ ಯಾರ ಮಾತು ಕೂಡ ಕೇಳುತ್ತಿರಲಿಲ್ಲ. ಗುರುಪ್ರಸಾದ್ ನಮ್ಮ ಮನೆಯಲ್ಲಿ ಬೆಳೆದಿರುವ ಹುಡುಗ. ಗುರುಪ್ರಸಾದರನ್ನು ನಾನು ಹೆಚ್ಚಿಗೆ ಮಾತನಾಡಿಸುತ್ತಿರಲಿಲ್ಲ.



ಉದಯವಾಹಿನಿ ಚಿತ್ರ

> **1972ನೇ ನವೆಂಬರ್ 2 ಗುರುಪ್ರಸಾದ್ ಜನಿಸಿದ್ದರು. ರಾಮನಗರ ಜಿಲ್ಲೆಯ ಕನಕಪುರದಲ್ಲಿ ಗುರುಪ್ರಸಾದ್ ಜನಿಸಿದರು. 2006 ರಲ್ಲಿ ಮಠ ಸಿನೆಮಾ ಮೂಲಕ ಚಿತ್ರರಂಗಕ್ಕೆ ಎಂಟ್ರಿ ಆದರು. ಬಳಿಕ ಎದ್ದೇಳು ಮಂಜುನಾಥ, ಡೈರೆಕ್ಟರ್ ಸ್ಪೆಷಲ್, ರಂಗ ನಾಯಕ ಹಾಗೂ ಎರಡನೇ ಸಲ ಸೇರಿದಂತೆ ಹಲವು ಸಿನಿಮಾ ನಿರ್ದೇಶನ ಮಾಡಿದ್ದರು. ಇದೀಗ ಅಡೆಮಾ ಸಿನಿಮಾ ನಡೆಯುತ್ತಿತ್ತು. ಎದ್ದೇಳು ಮಂಜುನಾಥ ಚಲನಚಿತ್ರಕ್ಕೆ ರಾಜ್ಯ ಚಲನಚಿತ್ರ ಪ್ರಶಸ್ತಿ ಬಂದಿತ್ತು. ಅತ್ಯುತ್ತಮ ಚಿತ್ರಕಥೆಗೆ ರಾಜ್ಯ ಚಲನಚಿತ್ರ ಪ್ರಶಸ್ತಿ ಬಂದಿತ್ತು.**

ಗುರುಪ್ರಸಾದ್ ಕುಡಿತದ ಚಟಕ್ಕೆ ಬಿದ್ದು ತುಂಬಾ ಹಾಳಾಗಿದ್ದ. ಒಳ್ಳೆಯ ಬರವಣಿಗೆ ತಾಕತ್ ಹೊಂದಿರುವ ವ್ಯಕ್ತಿಯಾಗಿದ್ದ. ಗುರುಪ್ರಸಾದ್ 1000 ಸಲ ಸಾಯುತ್ತೇನೆ ಎಂದು ಹೇಳಿದ್ದ. ಗುರುಪ್ರಸಾದ್ ಗೆ ನಾನು ಈ ಕುರಿತು ಬಹಳ ಸಲ ಬುದ್ಧಿವಾದ ಹೇಳಿದ್ದೆ.ಗುರುಪ್ರಸಾದ್ ಮೊದಲ ಪತ್ನಿ ಜೊತೆಗೂ ಸರಿಯಾಗಿ ಇರಲಿಲ್ಲ ಎಂದು ಅವರ ಸಾವಿಗೆ ಸಂತಾಪ ಸೂಚಿಸಿದರು.

## ಬಿಜೆಪಿಯವರು ಗೋಸುಂಬೆಗಿಂತ ಹೆಚ್ಚು ವೇಗವಾಗಿ ಬಣ್ಣ ಬದಲಿಸುವವರು

• ಉದಯವಾಹಿನಿ, ಬೆಂಗಳೂರು

ಬಿಜೆಪಿಯವರು ಗೋಸುಂಬೆಗಿಂತ ಹೆಚ್ಚು ವೇಗವಾಗಿ ಬಣ್ಣ ಬದಲಿಸುವವರು ರೈತರಿಗೆ ವಕ್ಫ್ ಬೋರ್ಡ್ ಮಂಡಳಿ ನೋಟಿಸ್ ನೀಡಿದ್ದನ್ನು ರಾಜಕೀಯಕ್ಕೆ ಬಳಸುತ್ತಿರುವ ಬಿಜೆಪಿಗರು ತಮ್ಮ ಸರ್ಕಾರದ ಆಡಳಿತಾವಧಿಯಲ್ಲೂ ರೈತರಿಗೆ ನೋಟಿಸ್ ನೀಡಿದ್ದರು. ವಕ್ಫ್ ಮಂಡಳಿಗೆ ಬಿಜೆಪಿ ಬೆಂಬಲವಾಗಿ ನಿಂತಿತ್ತು, ರೈತರ ಭೂಮಿ ಕಸಿಯಲು ಕುಮಕ್ಕು ನೀಡಿತ್ತು ಎನ್ನುವುದಕ್ಕೆ ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಅವರ ಮಾತುಗಳೇ ಸಾಕ್ಷಿ ಎಂಬುದಾಗಿ ಸಚಿವ ಪ್ರಿಯಾಂಕ್ ಖರ್ಗೆ ಗುಡುಗಿದ್ದಾರೆ.

ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಅವರು ವಕ್ಫ್ ಭೂಮಿ ಅಲ್ಲಾನಿಗೆ ಸೇರಿದ್ದು, ಅದನ್ನು ಮರಳಿ ಪಡೆಯುವುದರಲ್ಲಿ ಯಾವುದೇ ರಾಜಿ



ಉದಯವಾಹಿನಿ ಚಿತ್ರ

ಬೇಡ, ರೂ.2000 ಕೋಟಿ ಮೊತ್ತದ ವಕ್ಫ್ ಆಸ್ತಿ ಖಾಸಗಿಯವರ ವಶದಲ್ಲಿದೆ, ಅದನ್ನು ಮರಳಿ ಪಡೆಯುವವರೆಗೂ ನೀವು ಸುಮ್ಮನೆ ಕೂರಬಾರದು ನಾವೂ ಸುಮ್ಮನೆ ಕೂರಬಾರದು, ನಿಮ್ಮ ಜೊತೆಗೆ ನಾವಿದ್ದೇವೆ ಇದು ಅಂದಿನ ಸಿಎಂ ಬೊಮ್ಮಾಯಿಯವರ ಮಾತು ಎಂದಿದ್ದಾರೆ. ಎರಡು ನಾಲಿಗೆಯ ಬಿಜೆಪಿಯವರಿಗೆ ಒಂದಷ್ಟು ಪ್ರಶ್ನೆಗಳು - ವಕ್ಫ್ ಮಂಡಳಿ ಇಂದು ನೋಟಿಸ್ ನೀಡುವುದಕ್ಕೆ ಹಿಂದಿನ ಸಿಎಂ ಅವರ ನಿರ್ದೇಶನ ಕಾರಣ ಅಲ್ಲವೇ - ವಕ್ಫ್ ಭೂಮಿ ವಿಚಾರದಲ್ಲಿ ಬಿಜೆಪಿಗರ ನಿಲುವಿನಲ್ಲಿ ದ್ವಂದ್ವ ಧೋರಣೆ ಏಕೆ ಬಿಜೆಪಿಯ ನಿಲುವು ವಕ್ಫ್ ಪರವೋ ಭೂಮಿ ಹಿಡುವಳಿದಾರರ ಪರವೋ- ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ವಕ್ಫ್ ನೋಟಿಸ್ ನೀಡಿದ್ದನ್ನು ಮರೆಮಾಚುತ್ತಿರುವುದೇಕೆ ಬೊಮ್ಮಾಯಿಯವರ ಆದೇಶದಿಂದಲೇ ವಕ್ಫ್ ಭೂಮಿ ವಶಕ್ಕೆ ಮುಂದಾಗಿರುವುದಲ್ಲವೇ ಕೊನೆಯ ಪ್ರಶ್ನೆ, ಹಿಪಾಕ್ರಸಿ ಮತ್ತು ಡಬಲ್ ಸ್ಟ್ಯಾಂಡರ್ಡ್, ಇವುಗಳು ಬಿಜೆಪಿಯ ಪಕ್ಷದ ಬೈಲಾದಲ್ಲಿ ಅಡಕವಾಗಿದೆಯೇ ಅಥವಾ ಬಿಜೆಪಿಗರ ಬುದ್ಧಿಯಲ್ಲಿ ಸೇರಿಕೊಂಡಿದೆಯೇ ಎಂದು ಪ್ರಶ್ನಿಸಿದ್ದಾರೆ.

## ಪರಭಾಷಿಕರ ಜತೆ ಕನ್ನಡದಲ್ಲೇ ವ್ಯವರಿಸುವಂತಾಗಲಿ ಭೂಪಾಳಂ ಶ್ರೀನಾಥ್ ಸಲಹೆ

• ಉದಯವಾಹಿನಿ, ಬೆಂಗಳೂರು

ದೇಶದ ಬೇರೆ ರಾಜ್ಯಗಳಿಂದ ಸಿಲಿಕಾನ್ ಸಿಟಿಗೆ ಪ್ರತಿ ವರ್ಷ ಅಂದಾಜು 4 ಲಕ್ಷ ವಲಸಿಗರು ಬರುತ್ತಿದ್ದಾರೆ. ವಲಸಿಗರ ಜತೆ ನಾವೆಲ್ಲರೂ ಕಡ್ಡಾಯವಾಗಿ ಕನ್ನಡದಲ್ಲೇ ವ್ಯವಹರಿಸುವಂತಾಗಬೇಕು ಎಂದು ಬೆಂಗಳೂರು ಟ್ರೇಡ್ಸ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಭೂಪಾಳಂ ಶ್ರೀನಾಥ್ ಸಲಹೆ ನೀಡಿದ್ದಾರೆ.



ಉದಯವಾಹಿನಿ ಚಿತ್ರ

ಬೆಂಗಳೂರು ಟ್ರೇಡ್ಸ್ ಅಸೋಸಿಯೇಷನ್ ಮಹಾತ್ಮ ಗಾಂಧಿ ರಸ್ತೆಯಲ್ಲಿ ಆಯೋಜಿಸಲಾಗಿದ್ದ 'ಕನ್ನಡ ರಾಜ್ಯೋತ್ಸವ' ಕಾರ್ಯಕ್ರಮದಲ್ಲಿ ಮಾತನಾಡಿದರು. ಪರಭಾಷಿಕರಿಗೆ ಕನ್ನಡ ಕಲಿಯಲು ಪ್ರೋತ್ಸಾಹ ನೀಡುವಂತಾಗಬೇಕು. ನಾವೆಲ್ಲರೂ ಕಡ್ಡಾಯವಾಗಿ ಕನ್ನಡ ಮಾತಾಡುವ ಮೂಲಕ ಭಾಷೆಯನ್ನು ಉಳಿಸಿ ಬೆಳೆಸಲು ಮುಂದಾಗಬೇಕಿದೆ. ಪ್ರತಿ ವರ್ಷ ತಪ್ಪದೆ ಸಂದ ಕಾರ್ಯಕ್ರಮದ ಜತೆಗೆ ರಾಜ್ಯೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಬರುವ ದಿನಗಳಲ್ಲಿ ಸಂಘ ನಡೆದುಕೊಂಡು ಬಂದಿರುವ ಹಾದಿ ಕುರಿತು 'ಕಾಫಿ ಟೇಬಲ್' ಪುಸ್ತಕ ಹೊರತರಲು ಎಲ್ಲರೂ ಶ್ರಮಿಸಬೇಕೆಂದು ಸಲಹೆ ನೀಡಿದರು.

ಸಂಘದ ಉಪಾಧ್ಯಕ್ಷ ವಿಜಯ ಶೇಖರ್ ರವಿ, ಮಾಜಿ ಅಧ್ಯಕ್ಷ ಪಳನಿಯಪ್ಪನ್, ಸಂದ ಪದಾಧಿಕಾರಿ ಸುರೇಶ್ ದೇಸಾಯಿ, ವಿಜಯಲಕ್ಷ್ಮೀ ಸಿಲ್ಕ್‌ನ ಪ್ರಸನ್ನ ಮತ್ತಿತರರಿದ್ದರು.

> **ಕನ್ನಡವನ್ನು ಉಳಿಸಿ ಬೆಳೆಸುವ ಜವಾಬ್ದಾರಿ ಸಂಘದ ಮೇಲಿದೆ. ಮಹಾತ್ಮ ಗಾಂಧಿ ರಸ್ತೆಯಲ್ಲಿ ಕನ್ನಡದ ಕಂಪು ಪಸರಿಸುವ ಜತೆಗೆ ಪರಭಾಷಿಕರಿಗೆ ಕನ್ನಡ ಕಲಿಸುವ ಕಾರ್ಯವನ್ನು ಸಂಘ ಇನ್ನಷ್ಟು ಮಾಡುವಂತಾಗಲಿ. ರಾಜ್ಯೋತ್ಸವ ಸಂಬಂಧ ಸಂಘದ ನಡೆಸುವ ಕಾರ್ಯಚಟುವಟಿಕೆಗಳಿಗೆ ನಮ್ಮ ಪತ್ರಿಕೆಯ ಸಹಕಾರ ಸದಾ ಇರಲಿದೆ. ಸಂದ ಸಹಭಾಗಿತ್ವದಲ್ಲಿ ಕನ್ನಡ ಕಾರ್ಯಕ್ರಮಗಳನ್ನು ಆಚರಿಸಲು ನಾವೆಲ್ಲರೂ ಸಿದ್ಧರಿದ್ದೇವೆ.**

## ಉಪಚುನಾವಣೆ: ಚನ್ನಪಟ್ಟಣದಲ್ಲಿ ನಿಖಿಲ್ ಗೆಲ್ಲಿಸಿ

• ಉದಯವಾಹಿನಿ, ಬೆಂಗಳೂರು

ಮೂರು ಕ್ಷೇತ್ರಗಳಿಗೆ ಉಪಚುನಾವಣೆ ಘೋಷಣೆ ಆಗಿದೆ. ಹಾಲಿ ಆಡಳಿತ ಪಕ್ಷ ಕಾಂಗ್ರೆಸ್ ಸರ್ಕಾರದ ದುರಾಳಿತ ಹೆಚ್ಚಾಗಿದೆ. ವಕ್ಫ್ ಬೋರ್ಡ್ ಮುಸ್ಲಿಮರ ಬೋರ್ಡ್ ಆಗಿದೆ. ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ನಡೆಯುತ್ತಿರುವ ಉಪ ಚುನಾವಣೆ ಇದಾಗಿದೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿದರು.

ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಚನ್ನಪಟ್ಟಣ ದಲ್ಲಿ ವ್ಯಕ್ತಿ ಹೆಸರಲ್ಲಿ ಚುನಾವಣೆ ನಡೆಯುತ್ತಿಲ್ಲ. ಇದು ಎನ್‌ಡಿಎ, ಕಾಂಗ್ರೆಸ್ ಸರ್ಕಾರದ ದುರಾಡಳಿತದ ವಿರುದ್ಧ ನಡೆಯುತ್ತಿರುವ ಚುನಾವಣೆ ಇದಾಗಿದೆ ಎಂದು ಅವರು ಹೆಸರಿಸಿರು. ಬಿಜೆಪಿ, ಜೆಡಿಎಸ್ (ಎನ್‌ಡಿಎ) ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಅವರಿಗೆ ಜನರ ಅನುಕಂಪವಿದೆ. ಅವರು ಹಿಂದೆ ಸೋತಿದ್ದರು. ಹಾಗೆಯೇ ಪ್ರಧಾನಿ ನರೇಂದ್ರ ಮೋದಿಯವರ ಸಾಧನೆಗಳನ್ನು ಜನರು ಗುರುತಿಸಲಿದ್ದಾರೆ. ಕಾಂಗ್ರೆಸ್ ಸರ್ಕಾರ ಅಧಿಕಾರ ಕ್ಕೆ ಬಂದಾಗಿನಿಂದಲೂ ಲೂಟಿ ಮಾಡುತ್ತಲೇ ಇದೆ. ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ದಲಿತರ ಹಣ ಕೊಳ್ಳೆ ಹೊಡೆಯಲಾಗಿದೆ ಎಂದು ಅವರು ದೂರಿದರು. ಗ್ಯಾರಂಟಿಗಳಿಂದಾಗಿ ಮಣ್ಣು ಎತ್ತಿ ಹಾಕಲು ಕೂಡ ಹಣವಿಲ್ಲ ಎಂದು ಭಾರತೀಯ ಕಾಂಗ್ರೆಸ್ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ. 16 ತಿಂಗಳಿಂದ ರೈತರಿಗೆ ಹಾಲಿನ ಪ್ರೋತ್ಸಾಹಧನ ನೀಡಿಲ್ಲ. ವಕ್ಫ್ ಬೋರ್ಡ್ ಮುಸ್ಲಿಮರ ಬೋರ್ಡ್ ಆಗಿ ಬದಲಾಗಿದ್ದು, ದೇವಸ್ಥಾನ, ಸ್ಮಶಾನ, ಶಾಲೆ, ರೈತರ ಭೂಮಿ ಎಂದು ನೋಡದೆ ಎಲ್ಲ ಜಮೀನುಗಳನ್ನು ಕಬಳಿಸಲಾಗುತ್ತಿದೆ ಹೇಳಿದರು.





## ಗಾಳಿ ಗುಣಮಟ್ಟ ಕುಸಿತ: ಜಿಗಣಿ, ರೈಲು ನಿಲ್ದಾಣದಲ್ಲಿ ಅಧಿಕ ಮಾಲಿನ್ಯ

• ಉದಯವಾಹಿನಿ, ಬೆಂಗಳೂರು

ದೀಪಾವಳಿ ಹಿನ್ನೆಲೆ ಪಟಾಕಿ ಸಿಡಿಸಿ ಜನರು ಸಂಭ್ರಮದ ಮುಗಿಲು ಮುಟ್ಟುತ್ತಿದ್ದು. ರಾಜಧಾನಿಯಲ್ಲಿ ಗಾಳಿ ಗುಣಮಟ್ಟ ಕುಸಿತವಾಗಿದೆ. ನಿಯಮ ಉಲ್ಲಂಘಿಸಿ ಪಟಾಕಿ ಸಿಡಿತದ ಪರಿಣಾಮ ಬಾಪುಜಿನಗರ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ, ಹೆಬ್ಬಾಳ, ಹೊಂಬೇಗೌಡ ನಗರ, ಜಯನಗರ, ಜಿಗಣಿ, ಕಸ್ತೂರಿನಗರ, ಮಲ್ಲಸಂದ್ರ, ಸಾನೇಗುರುವಹಳ್ಳಿ, ಶಿವಪುರ, ಸಿಲ್ಕ್ ಬೋರ್ಡ್ ಮೈಸೂರು ರಸ್ತೆ ಸೇರಿ ನಗರದ ಇತರೆ ಬಡಾವಣೆಗಳು ಅಧಿಕ ಮಲಿನವಾಗಿದೆ. ಪ್ರತಿ ನ ಮೀಟರ್ ಗಾಳಿಯಲ್ಲಿ 2.5 ಮೈಕ್ರಾನ್ ಗಾತ್ರದ ಮಾಲಿನ್ಯಕಾರಕ ಕಣಗಳ ಸಂಖ್ಯೆ ಶೇ.50 ಇದ್ದರೆ, ಗಾಳಿಯ ಗುಣಮಟ್ಟ ಉತ್ತಮವೆಂದು ಕರೆಯಲಾಗುತ್ತದೆ. ಆದರೆ, ಈ ಕಣಗಳ ಸಂಖ್ಯೆ ಹೆಚ್ಚಿದ್ದರೆ ಅಪಾಯಕಾರಿ, 401ರಿಂದ 500ವರೆಗೆ ಕಣಗಳ ಸಂಖ್ಯೆ ಇದ್ದರೆ ಅತಿ ಅಪಾಯಕಾರಿ ಎಂದು ವರ್ಗೀಕರಿಸಲಾಗಿದೆ. ರಾಷ್ಟ್ರ ರಾಜಧಾನಿ ದೆಹಲಿ ಸೇರಿ ದೇಶದ ವಿವಿಧ ರಾಜ್ಯಗಳಲ್ಲಿ ಗಾಳಿ ಗುಣಮಟ್ಟ ಕಳಪೆ ಹಂತಕ್ಕೆ ತಲುಪಿದೆ. ಆದರೆ, ದೆಹಲಿಯಲ್ಲಿ ಗಾಳಿಯ ಗುಣಮುಟ್ಟ ತೀವ್ರವಾಗಿ ಹದಗೆಟ್ಟಿದೆ. ರಾಜ್ಯದಲ್ಲಿಯೂ ಒಮ್ಮೆ ಕಳಪೆ ಮಟ್ಟಕ್ಕೆ ಹೋದರೂ ಉತ್ತಮ ಮಟ್ಟಕ್ಕೆ ಬಂದಿದೆ.

# ಗುರುಪ್ರಸಾದ್ ನಮ್ಮ ಕನಕಪುರದವರು: ಡಿಕೆಶಿ ಸಂತಾಪ

## ಸ್ಯಾಂಡಲ್‌ವುಡ್ ನಿರ್ದೇಶಕ ಗುರುಪ್ರಸಾದ್ ಅವರ ಮೃತದೇಹ ನೇಣು ಬಿಗಿದಿರುವ ಸ್ಥಿತಿಯಲ್ಲಿ ಅವರ ಅಪಾರ್ಟ್‌ಮೆಂಟ್‌ನಲ್ಲಿ

• ಉದಯವಾಹಿನಿ, ಬೆಂಗಳೂರು

ಸ್ಯಾಂಡಲ್‌ವುಡ್ ನಿರ್ದೇಶಕ ಗುರುಪ್ರಸಾದ್ ಅವರ ಮೃತದೇಹ ನೇಣು ಬಿಗಿದಿರುವ ಸ್ಥಿತಿಯಲ್ಲಿ ಅವರ ಅಪಾರ್ಟ್‌ಮೆಂಟ್‌ನಲ್ಲಿ ಪತ್ತೆಯಾಗಿದೆ. ಗುರುಪ್ರಸಾದ್ ಅವರ ನಿಧನಕ್ಕೆ ಗಣ್ಯರು ಸಂತಾಸ ಸೂಚಿಸುತ್ತಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೂ ಗುರುಪ್ರಸಾದ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದು, ಅವರು ನಮ್ಮ ಕನಕಪುರದವರೇ ಆಗಿದ್ದರು ಎಂದಿದ್ದಾರೆ. ಸೃಜನಶೀಲ ನಿರ್ದೇಶಕರು, ಕನಕಪುರ ಮೂಲದವರೇ ಆದ ಗುರುಪ್ರಸಾದ್ ಅವರು ನಿಧನರಾದ ಸಂಗತಿ ತಿಳಿದು ಮನಸ್ಸಿಗೆ ಅಪಾರ ನೋವುಂಟಾಗಿದೆ. ಬೆಳ್ಳಿತೆರೆ ಹಾಗೂ ಕಿರುತೆರೆಗೆ ತಮ್ಮದೇ ಶೈಲಿಯ ಕೊಡುಗೆ ನೀಡಿದ ಗುರುಪ್ರಸಾದ್ ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಮೃತರ ಕುಟುಂಬದವರು ಹಾಗೂ ಆತ್ಮೀಯರ ನೋವಿನಲ್ಲಿ ನಾನೂ ಕೂಡ ಭಾಗಿ ಎಂದು ಡಿ.ಕೆ. ಶಿವಕುಮಾರ್ ಸಂತಾಪ ಸೂಚಿಸಿದ್ದಾರೆ.

ಕನ್ನಡ ಚಿತ್ರರಂಗದ ನಟ, ನಿರ್ದೇಶಕ ಮಠ ಖ್ಯಾತಿಯ ಗುರು ಪ್ರಸಾದ್ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ.





ಉದಯವಾಹಿನಿ ಚಿತ್ರ

**ಆತ್ಮಕ್ಕೆ ಶಾಂತಿ ಸಿಗಲಿ**

ತನ್ನ ಅಪಾರ್ಟ್‌ಮೆಂಟ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಅವರ ಶವ ಪತ್ತೆಯಾಗಿದೆ. ಮಾದನಾಯಕನಹಳ್ಳಿ ಬಳಿಯ ಟಾಟಾ ನ್ಯು ಹೆವೆನ್ ಅಪಾರ್ಟ್‌ಮೆಂಟ್ ನಲ್ಲಿ ಗುರುಪ್ರಸಾದ್ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ ಎನ್ನಲಾಗಿದೆ. ಜಗ್ಗೇಶ್ ತಾರಾಗಣದ ಮಠ ಸಿನಿಮಾದಿಂದ ಗುರುಪ್ರಸಾದ್ ಹೆಚ್ಚು ಖ್ಯಾತಿ ಗಳಿಸಿದ್ದರು. ಎದ್ದೇಳು ಮಂಜುನಾಥ, ಸೂಪರ್ ರಂಗ ಸೇರಿದಂತೆ ಹಲವು ಸಿನಿಮಾಗಳಿಗೆ ಆಕ್ಷನ್ ಕಟ್ ಹೇಳುವ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಮಿಂಚಿದ್ದರು. ಬಳಿಕ ಬಿಗ್‌ಬಾಸ್ ಶೋನಲ್ಲಿ ಸ್ಪರ್ಧಿಯಾಗಿ, ವಿವಿಧ ಕಾರ್ಯಕ್ರಮಗಳ ತೀರ್ಪುಗಾರರಾಗಿಯೂ ಗುರುಪ್ರಸಾದ್ ಹೆಸರು ಮಾಡಿದ್ದರು. ಈಗ ಇದ್ದಕ್ಕಿದ್ದಂತೆ ಅವರ ಆತ್ಮಹತ್ಯೆಯ ವಿಚಾರ ಸ್ಯಾಂಡಲ್ ವುಡ್‌ನ್ನು ಬೆಚ್ಚಿಬೀಳಿಸಿದೆ.

ಗುರುಪ್ರಸಾದ್ ಆಪ್ತರು ಹೇಳುವಂತೆ ಎರಡು ವಾರಗಳ ಹಿಂದೆ ಗುರು ವಿರುದ್ಧ ಕೇಸ್ ದಾಖಲಾಗಿತ್ತು. ಪುಸ್ತಕ ಖರೀದಿ ಮಾಡಿ ಹಣ ಕೊಟ್ಟಿಲ್ಲ ಎಂದು ಪುಸ್ತಕ ಮಳಿಗೆ ಮಾಲೀಕರು ದೂರು ಕೊಟ್ಟಿದ್ದಾರೆ. ಪುಸ್ತಕಗಳಿಗೆ 65 ಸಾವಿರ ನೀಡಬೇಕಿತ್ತು ಎನ್ನಲಾಗಿದೆ. ಪುಸ್ತಕ ಖರೀದಿ ಮಾಡಿ ಹಣ ನೀಡದೇ ಇದ್ದರಿಂದ ಜಯನಗರದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ ಎಂದು ಹೇಳಿದ್ದಾರೆ. ಇದನ್ನು ಬಿಟ್ಟರೆ ಅವರ ಸಾವಿಗೆ ನಿಖರ ಕಾರಣ ಏನು ಎಂಬುದು ನಮಗೂ ಅರ್ಥವಾಗುತ್ತಿಲ್ಲ ಎಂದು ಆಪ್ತರು ಹೇಳಿಕೊಳ್ಳುತ್ತಿದ್ದಾರೆ.

> **ಮಠ ಸಿನಿಮಾದಲ್ಲಿ ನಟಿಸಿದ್ದ ನಟ ತಬಲಾ ನಾಣಿ ಕೂಡ ಆಘಾತಕ್ಕೆ ಒಳಗಾಗಿದ್ದಾರೆ. ನನಗೆ ಕನ್ನಡ ಚಿತ್ರರಂಗದಲ್ಲಿ ಜೀವನ ಕೊಟ್ಟಿದ್ದೇ ಗುರುಪ್ರಸಾದ್ ಎಂದು ನೆನೆದಿದ್ದಾರೆ. ಆತ್ಮಹತ್ಯೆ ಸುದ್ದಿ ಕೇಳಿ ಬೇಸರವಾಯ್ತು. ಹತ್ತು ಜನರಿಗಿದ್ದ ಬುದ್ಧಿ ಅವರಿಗಿತ್ತು. ಈ ರೀತಿ ಯಾಕಾಗಿದೆ ಎಂಬುದು ಈಗಲೂ ಅರ್ಥವಾಗುತ್ತಿಲ್ಲ. ಅವರಿಗೆ ಸಹವಾಸಗಳ ಸಮಸ್ಯೆ ಇತ್ತೋ ಅಥವಾ ದುಶ್ಚಟಗಳ ಸಮಸ್ಯೆ ಇತ್ತೋ ಗೊತ್ತಿಲ್ಲ. ಅದರ ಬಗ್ಗೆ ನಾವು ಮಾನಾಡಿದ್ರೂ ತಪ್ಪಾಗುತ್ತೆ. ಏಷ್ಟಾದರೂ ಅವರು ನಮಗೆ ಗುರುವಿನ ಸ್ಥಾನದಲ್ಲಿದ್ದವರು ಎಂದಿದ್ದಾರೆ.**

> **ಇನ್ನು ಗುರುಪ್ರಸಾದ್ ಅವರೊಂದಿಗೆ ಒಡನಾಟ ಹೊಂದಿಗೆ ನಟ ಜಗ್ಗೇಶ್ ಕೂಡ ಮಾತನಾಡಿದ್ದು, ಗುರು ನಿರ್ದೇಶನದ ಮಠ ಸಿನಿಮಾದಲ್ಲಿ ನಾನು ನಟಿಸಿದ್ದೆ. ಅವರೊಂದಿಗೆ ನನಗೆ ಚೆನ್ನಾಗಿ ಒಡನಾಟವಿತ್ತು. ಅವರು ಸಾವಿರಾರು ಬಾರಿ ಅವರು ಆತ್ಮಹತ್ಯೆಯ ಬಗ್ಗೆ ಮಾತನಾಡಿದ್ದರು. ಸೋಲು ಕಂಡ ತಕ್ಷಣ ಸಾವು ಎಂದು ಸಾವಿರಾರು ಬಾರಿ ಹೇಳಿದ್ದರು. ನಾನು ಅವರಿಗೆ ಬುದ್ಧಿ ಹೇಳಿದ್ದೆ. ನಾನು ನೆನಪಿಟ್ಟು ಹೋಗ್ತೀನಿ ಎಂದು ಗುರು ಹೇಳಿದ್ದರು. ಅವರ ದಾಂಪತ್ಯದಲ್ಲೂ ಬಿರುಕಿತ್ತು ಎಂದಿದ್ದಾರೆ.**

ಅಂತರಾಳದಿಂದ... EDITORIAL

# ಸಿರಿಗನ್ನಡ ಗೆಲ್ಲಲಿ, ಬಾಳಲಿ!

ಈ ಬಾರಿಯ ನವೆಂಬರ್ 1ರ ರಾಜ್ಯೋತ್ಸವ ದಿನವನ್ನು ನಾಡು ಸಂಭ್ರಮದಿಂದ ಆಚರಿಸಿದೆ. ಸುವರ್ಣ ಕರ್ನಾಟಕ ಆಚರಣೆಯ ಹಿನ್ನೆಲೆಯಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡುವುದರ ಜೊತೆಗೆ, 100ರಷ್ಟು ವಿಶೇಷ ಸಾಧಕರನ್ನು ಗುರುತಿಸಿ ಸರಕಾರ ಸನ್ಮಾನಿಸಿದೆ. ಇದೇ ಸಂದರ್ಭದಲ್ಲಿ ರಾಜಕಾರಣಿಗಳು ರಾಜ್ಯೋತ್ಸವ ಸಮಾರಂಭದಲ್ಲಿ ಕನ್ನಡ ಉಳಿಸುವ ನಿಟ್ಟಿನಲ್ಲಿ ಭರವಸೆಯ ಮಹಾಪೂರವನ್ನೇ ಹರಿಸಿದ್ದಾರೆ. ದೈನಂದಿನ ಬಳಕೆಯಲ್ಲಿ ಕನ್ನಡವನ್ನು ಅಳವಡಿಸುವ ಮಾತುಗಳು ಮತ್ತೆ ಮುನ್ನೆಲೆಗೆ ಬಂದಿವೆ. ಸರಕಾರಿ ಕಚೇರಿಗಳಲ್ಲಿ ಕನ್ನಡಕ್ಕೆ ಆದ್ಯತೆ ನೀಡಬೇಕು ಎನ್ನುವ ಮಾತುಗಳೂ ಬಲ ಪಡೆದಿವೆ. ಹಳದಿ-ಕೆಂಪು ಬಾವುಟಗಳು ನಾಡಿನುದ್ದಕ್ಕೂ ಅರಳಿವೆ. ಆದರೆ ಈ ಒಂದು ದಿನದ ಕನ್ನಡ ಪ್ರೇಮ ರಾಜ್ಯದಲ್ಲಿ ಕನ್ನಡವನ್ನು ಉಳಿಸಿ ಬೆಳೆಸುವಲ್ಲಿ ಎಷ್ಟರಮಟ್ಟಿಗೆ ಸಹಾಯ ಮಾದೀತು ಎನ್ನುವುದರ ಬಗ್ಗೆ ಅತ್ಯಾವಲೋಕನವನ್ನು ಮಾಡಬೇಕಾಗಿದೆ. ಕನ್ನಡ ಅನುಷ್ಠಾನವೆನ್ನುವುದು ರಾಜಕೀಯ ಇಚ್ಛಾಶಕ್ತಿಯಾಗಿ ಬದಲಾಗದೇ ಇದ್ದರೆ, ನಾವು ಅದೆಷ್ಟೇ ಕನ್ನಡ ಕನ್ನಡವೆಂದು ಬೀದಿಯಲ್ಲಿ ನಿಂತು ಬೊಬ್ಬಿಟ್ಟರೂ ಕನ್ನಡ ಉಳಿಯುವುದು ಕಷ್ಟ

ಕರ್ನಾಟಕ ರಾಜ್ಯ, ಬಹುಭಾಷಿಗರ ನಾಡು ಮನೆ ಭಾಷೆಯನ್ನೇ ನಾವು ಮಾತೃಭಾಷೆ'ಯೆಂದು ವ್ಯಾಖ್ಯಾನಿಸುವುದಾದರೆ, ಕನ್ನಡಿಗರಲ್ಲಿ ಶೇ. 50ಕ್ಕೂ ಅಧಿಕ ಮಂದಿ ಕನ್ನಡೇತರ ಮಾತೃಭಾಷಿಕರಿದ್ದಾರೆ. ತುಳು, ಕೊಂಕಣಿ, ಮರಾಠಿ, ಉರ್ದು, ಬ್ಯಾರಿ, ಕೊಡವ, ಅರಭಾಷೆ ಸೇರಿದಂತೆ ಹಲವು ಪ್ರಾದೇಶಿಕ ಭಾಷೆಗಳನ್ನು ಇಲ್ಲಿ ಮನೆ ಭಾಷೆಯಾಗಿ ಆಡುತ್ತಾರೆ. ಇವರೆಲ್ಲ ಕನ್ನಡವನ್ನು ತಮ್ಮದಾಗಿಸಿಕೊಳ್ಳುವುದು ಶಾಲೆಗಳಲ್ಲಿ ಮೈಸೂರು ಕರ್ನಾಟಕ ಭಾಗದಲ್ಲಿ ಕನ್ನಡವನ್ನು ಮಾತೃಭಾಷೆಯನ್ನಾಗಿಸಿಕೊಂಡವರ ಸಂಖ್ಯೆ ಬಹುದೊಡ್ಡದಿದೆ. ದಕ್ಷಿಣ ಕನ್ನಡದಲ್ಲಿ ತುಳು, ಕೊಂಕಣಿ, ಬ್ಯಾರಿ, ಉತ್ತರ ಕರ್ನಾಟಕದಲ್ಲಿ ಉರ್ದು, ಮರಾಠಿ, ತೆಲುಗು ಮಾತೃಭಾಷಿಗರನ್ನು ಕಾಣಬಹುದು ಮಾತೃಭಾಷೆ-ರಾಜ್ಯಭಾಷೆ ಇವರೆದರ ನಡುವೆ ಇವರು ಸಮನ್ವಯವನ್ನು ಸಾಧಿಸಿಕೊಳ್ಳುವುದು ಅತ್ಯಗತ್ಯ ಯಾಕೆಂದರೆ ಒಬ್ಬಳು ಹೆತ್ತ ತಾಯಿಯಾದರೆ, ಇನ್ನೊಬ್ಬಳು ಮಡಿಲಲ್ಲಿಟ್ಟು ಸಾಕಿ. ಬೆಳೆಸಿದ ತಾಯಿ. ಮತ್ತು ಈ ನಾಡಿನ ಕೋಟ್ಯಂತರ ಜನರು ಈ ಇಬ್ಬರೂ ತಾಯಂದಿರ ಹಾಲುಂಡು ಬೆಳೆದು ಕನ್ನಡದ ನೆಲಜಲಕ್ಕೆ ಋಣಿಯಾಗಿ ಬದುಕುತ್ತಾ ಬರುತ್ತಿದ್ದಾರೆ. ಕನ್ನಡವನ್ನು ಕಟ್ಟುವಲ್ಲಿ ಕನ್ನಡ ಮಾತೃಭಾಷಿಕರು ಮಾತ್ರವಲ್ಲದೆ, ರಾಜ್ಯ ಭಾಷೆಯಾಗಿ ಸ್ವೀಕರಿಸಿದವರ ಕೊಡುಗೆಯೂ ಮಹತ್ತರವಾದುದು. ಆದರೆ ಯಾವಾಗ ಶಿಕ್ಷಣ ಕ್ಷೇತ್ರದಲ್ಲಿ ಇಂಗ್ಲಿಷ್ ಮಾಧ್ಯಮ ಪ್ರಾಬಲ್ಯವನ್ನು ಸಾಧಿಸಿತೋ, ಅಲ್ಲಿಂದ ಕನ್ನಡೇತರ ಮಾತೃಭಾಷಿಗರ ಪಾಲಿಗೆ ಕನ್ನಡ ಭಾಷೆ ದೂರವಾಗುತ್ತಾ ಬರುತ್ತಿದೆ. ಒಂದನೇ ತರಗತಿಯಿಂದ ತಿದ್ದುತ್ತಾ ಕನ್ನಡ ಕಲಿತವರ ಮಕ್ಕಳು ಇಂದು, ಎಬಿಸಿಡಿ ಮೂಲಕ ಶಿಕ್ಷಣಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಇವರಿಗೆ ಕನ್ನಡ ಒಂದು ಪಠ್ಯವಾಗಿ ಮಾತ್ರ ಅಲ್ಲಿ ಪರಿಚಯ ಹೀಗೆ ಬೆಳೆದ ಮಕ್ಕಳಲ್ಲಿ ಮುಂದಿನ ದಿನಗಳಲ್ಲಿ ಕನ್ನಡ ಎಷ್ಟರಮಟ್ಟಿಗೆ ಉಳಿಯಬಹುದು. ಎನ್ನುವ ಆತಂಕ ಪೋಷಕರಲ್ಲಿದೆ. ಆದರೆ ಇಂಗ್ಲಿಷ್ ಇಲ್ಲದೆ ಆಧುನಿಕ ಬದುಕನ್ನು ತಮ್ಮದಾಗಿಸಿಕೊಳ್ಳಲು ಸಾಧ್ಯವೇ ಇಲ್ಲ ಎನ್ನುವಂತಹ ಸ್ಥಿತಿ ನಿರ್ಮಾಣವಾಗಿರುವುದರಿಂದ, ಕನ್ನಡವನ್ನು ಭವಿಷ್ಯದಲ್ಲಿ ಉಳಿಸಲು ಸರಕಾರಿ ಶಾಲೆಗಳನ್ನು ಪರಿಣಾಮಕಾರಿಯಾಗಿ ಬಳಸುವುದು ಸರಕಾರದ ಬಳಿ ಇರುವ ಏಕೈಕ ಅಡ್ಡವಾಗಿದೆ. ಕನ್ನಡ-ಇಂಗ್ಲಿಷ್ ನಡುವಿನ ಸಮನ್ವಯದಲ್ಲಿ ಮಾತ್ರ ಇದು ಸಾಧ್ಯ. ವೈದ್ಯಕೀಯ, ಇಂಜಿನಿಯರಿಂಗ್‌ನಂತಹ ಉನ್ನತ ಶಿಕ್ಷಣ ಕಲಿಕೆಯ ಸಂದರ್ಭದಲ್ಲಿ ಇದು ವಿದ್ಯಾರ್ಥಿಗಳ ಪಾಲಿಗೆ ತೊಡಕಾಗುತ್ತಿದೆ. ಈ ಎಲ್ಲ ಸ್ಥಿತಿಯ ಲಾಭಗಳನ್ನು ಖಾಸಗಿ ಶಾಲೆಗಳು ತನ್ನದಾಗಿಸಿಕೊಳ್ಳುತ್ತಿವೆ. ಕನ್ನಡ ಮಾಧ್ಯಮದ ಕಾರಣಕ್ಕಾಗಿ ಸರಕಾರಿ ಶಾಲೆಗಳು ಮುಚ್ಚಬಾರದು.

**ರಾಜ್ಯದಲ್ಲಿ ಕನ್ನಡ ಮಾಧ್ಯಮದ ಕಾರಣಕ್ಕಾಗಿಯೇ ಸರಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಇಳಿಮುಖವಾಗಿ ಅವುಗಳು ಮುಚ್ಚುತ್ತವೆ ಎನ್ನುವ ಆರೋಪಗಳಿವೆ. ಆದರೆ ಇದು ಪೂರ್ಣ ಸತ್ಯವಲ್ಲ ಒಂದೆಡೆ ಇಂಗ್ಲಿಷ್ ಬಗೆಗಿನ ಮೇಲರಿಮೆ, ಮಗದೊಂದೆಡೆ ಸರಕಾರಿ ಶಾಲೆಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಗಳಿರುವುದು ಕೂಡ ಶಾಲೆಗಳು ಮುಚ್ಚಲು ಕಾರಣವಾಗಿವೆ. ಶಿಕ್ಷಕರ ಕೊರತೆ, ಕಟ್ಟಡಗಳ ಕೊರತೆ, ಶೌಚಾಲಯ, ಗ್ರಂಥಾಲಯ ಮೊದಲಾದ ಮೂಲಭೂತ ಸೌಕರ್ಯಗಳ ಕೊರತೆಗಳು ಸರಕಾರಿ ಶಾಲೆಗಳಲ್ಲಿ ಎದ್ದು ಕಾಣುವಂತಿವೆ. ರಾಜ್ಯದ 6,400 ಸರಕಾರಿ ಶಾಲೆಗಳಲ್ಲಿ ಒಬ್ಬರೇ ಶಿಕ್ಷಕರಿದ್ದಾರೆ. ಇಂತಹ ಶಾಲೆಗಳಲ್ಲಿ ತಮ್ಮ ಮಕ್ಕಳಿಗೆ ಎಂತಹ ಗುಣಮಟ್ಟದ ಶಿಕ್ಷಣ ದೊರಕಬಹುದು ಎಂದು ಪೋಷಕರು ಆತಂಕಪಡುವುದು ಸಹಜವೇ ಆಗಿದೆ. ಇದೇ ಬದುಕಲು ಇಂಗ್ಲಿಷ್ ಅತ್ಯಗತ್ಯ ಎನ್ನುವಂತಹ ಸ್ಥಿತಿ ನಿರ್ಮಾಣವಾಗಿದೆ. ಕನ್ನಡ ಮಾಧ್ಯಮಗಳಲ್ಲಿ ಕಲಿತ ಮಕ್ಕಳ ಶಿಕ್ಷಣ ಅತ್ಯಂತ ಕಳಪೆಯಾಗಿದೆ.**

ಯಾಕೆಂದರೆ ಸರಕಾರಿ ಶಾಲೆಗಳನ್ನು ನಿರ್ಮಿಸಿರುವುದು ಶೋಷಿತ ಸಮುದಾಯದ ಶಿಕ್ಷಣದ ಹಕ್ಕನ್ನು ಪೂರೈಸಲು. ಈ ಸಂದರ್ಭದಲ್ಲಿ ಇಂಗ್ಲಿಷ್ ಮತ್ತು ಕನ್ನಡವನ್ನು ಜೊತೆಜೊತೆಯಾಗಿ ಸರಕಾರಿ ಶಾಲೆಗಳಲ್ಲಿ ಕಲಿಸುವುದು ಮಾತ್ರವಲ್ಲ ಆಧುನಿಕ ದಿನಗಳಿಗೆ ತಕ್ಕಂತೆ ಸರಕಾರಿ ಶಾಲೆಗಳಲ್ಲಿ ಮಾರ್ಪಾಡುಗಳನ್ನು ತಂದು ಇಂಗ್ಲಿಷ್ ಮಾಧ್ಯಮಗಳಲ್ಲಿ ಕಲಿಯುವ ವಿದ್ಯಾರ್ಥಿಗಳನ್ನು ತನ್ನೆಡೆಗೆ ಸೆಳೆಯುವ ಶಕ್ತಿಯನ್ನು ಸರಕಾರಿ ಶಾಲೆಗಳು ತಮ್ಮದಾಗಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಗುಣಮಟ್ಟದ ಶಿಕ್ಷಕರಿಗೆ, ಮೂಲಭೂತ ಸೌಕರ್ಯಕ್ಕೆ ಆದ್ಯತೆ ನೀಡಬೇಕು. ಇದು ರಾಜ್ಯದಲ್ಲಿ ಕನ್ನಡವನ್ನು ಉಳಿಸಲು ಸರಕಾರ ಇಡಬಹುದಾದ ಮೊದಲ ಹೆಜ್ಜೆ ಎರಡನೆಯದು, ಸರಕಾರಿ ಕಚೇರಿಗಳಲ್ಲಿ ಕನ್ನಡವನ್ನು ಕಡ್ಡಾಯಗೊಳಿಸುವುದು. ಎಲ್ಲ ಕಚೇರಿಗಳಲ್ಲಿ ಸಂವಹನ ಭಾಷೆಯಾಗಿ ಕನ್ನಡವಿರಬೇಕು. ನ್ಯಾಯಾಲಯಗಳಲ್ಲಿ ಕಲಾಪಗಳು ಕನ್ನಡದಲ್ಲೇ ಇರಬೇಕು. ಕಕ್ಷಿದಾರರ ಪರವಾಗಿ ವಕೀಲರು ಕನ್ನಡದಲ್ಲೇ ವಾದ ಮಂಡಿಸಲು ನ್ಯಾಯಾಧೀಶರು ಸೂಚನೆ ನೀಡಬೇಕು. ಕನ್ನಡ ಭಾಷೆಯನ್ನು ಆಡುವವರು ಎಲ್ಲಿ ಬೇಕಾದರೂ ಸುಲಲಿತವಾಗಿ ತಮ್ಮ ದೈನಂದಿನ ವ್ಯವಹಾರಗಳನ್ನು ಮುಗಿಸಲು ಸಾಧ್ಯ ಎನ್ನುವ ಅತ್ಮವಿಶ್ವಾಸ ಜನರಲ್ಲಿ ಬೆಳೆಯಬೇಕು. ಬ್ಯಾಂಕ್‌ಗಳಲ್ಲಿ ರೈಲ್ವೆ ಇಲಾಖೆಗಳಲ್ಲಿ ಉತ್ತರ ಭಾರತದ ಹಿಂದಿ ಭಾಷಿಗರನ್ನು ತುಂಬಿ, ಅವರನ್ನು ಕನ್ನಡಿಗರ ಮೇಲೆ ಹೇರುವ ಪ್ರಯತ್ನ ನಡೆಯುತ್ತಿದೆ. ಕರ್ನಾಟಕದಲ್ಲಿ ಯಾರೇ ಕೆಲಸ ಮಾಡಬೇಕಾದರೂ ಅವರು ಕರ್ನಾಟಕಕ್ಕೆ ಕಾಲಿಟ್ಟ ನಾಲ್ಕು ತಿಂಗಳ ಒಳಗೆ ಕನ್ನಡ ಕಡ್ಡಾಯವಾಗಿ ಮಾತನಾಡಲು ಕಲಿಯಬೇಕು ಎನ್ನುವ ಆದೇಶವನ್ನು ಸರಕಾರ ಹೊರಡಿಸಬೇಕು. ದೈನಂದಿನ ಬದುಕಿನಲ್ಲಿ ಕನ್ನಡ ಚಲಾವಣೆಯಲ್ಲಿ ಇರುವಂತೆ ಮಾಡಲು ಇಷ್ಟು ಕ್ರಮ ತೆಗೆದುಕೊಂಡರೆ, ಕನ್ನಡ ಉಳಿಸುವಲ್ಲಿ ಸರಕಾರ ಎರಡನೆಯ ಗಟ್ಟಿ ಹೆಜ್ಜೆಯೊಂದನ್ನು ಊರಿದಂತಾಗುತ್ತದೆ. ಮೂರನೆಯ ಹೆಜ್ಜೆಯಾಗಿ, ಕನ್ನಡ ಭಾಷಿಗರಿಗೆ ಖಾಸಗಿ ಮತ್ತು ಸರಕಾರಿ ಸಂಸ್ಥೆಗಳಲ್ಲಿ ಮೀಸಲಾತಿಯನ್ನು ನೀಡುವುದು.

## ರಾಮಾಯಣ



### ಸಿದ್ಧಾಶ್ರಮದ ಮಹತ್ವ

• ಹಿಂದಿನ ಸಂಚಿಕೆಯಿಂದ 19ನೆಯ ಅಧ್ಯಾಯ

ನನ್ನ ಈ ಆಶ್ರಮವು ನನಗೆ ಹೇಗೆ ಸಂತೋಷ ಮಾಡುತ್ತಿರುವುದೋ ಹಾಗೆಯೇ ನಿನಗೂ ಸಂತೋಷವನ್ನು ಮಾಡುತ್ತದೆ ಎಂದು ನುಡಿದು ಸುಪ್ರೀತನಾದ ವಿಶ್ವಾಮಿತ್ರನು ಲಕ್ಷ್ಮಣ ಸಹಿತನಾದ ರಘುನಾಥನನ್ನು ಕರೆದುಕೊಂಡು ಪುನರ್ವಸು ನಕ್ಷತ್ರಸಹಿತನಾದ ಶರತ್ಕಾಲದ ಚಂದ್ರನ ಹಾಗೆ ಅತಿ ಪ್ರಕಾಶಮಾನನಾಗಿ ತನ್ನ ಆಶ್ರಮವನ್ನು ಪ್ರವೇಶಿಸಿದನು.ಅವರನ್ನು ಕಂಡು ಸಿದ್ಧಾಶ್ರಮವಾಸಿಗಳಾದ ಸಮಸ್ತ ಋಷಿಗಳೂ ಅತಿಹರ್ಷದಿಂದ ಸಮೀಪಕ್ಕೆ ಬಂದು ವಿಶ್ವಾಮಿತ್ರಮುನೀಶ್ವರನಿಗೆ ವಿಧ್ಯುಕ್ತಪ್ರಕಾರದಲ್ಲಿ ಅಭಿನಂದಿಸಿ, ಅರ್ಘ್ಯಪಾದ್ಯಾದಿ ಸತ್ಕಾರಗಳನ್ನು ಮಾಡಿ, ರಾಮಲಕ್ಷ್ಮಣರಿಗೂ ಸತ್ಕಾರಗಳನ್ನು ಮಾಡಿದರು. ರಾಮಲಕ್ಷ್ಮಣರು ಸ್ವಲ್ಪ ವಿಶ್ರಮಿಸಿಕೊಂಡು ದಾರಿ ನಡೆದುಬಂದ ಶ್ರಮವನ್ನು ಪರಿಹರಿಸಿಕೊಂಡು ವಿಶ್ವಾಮಿತ್ರಮುನೀಶ್ವರನಿಗೆ ಕೈ ಮುಗಿದು ಮುನೀಶ್ವರರೆ, ಯಾಗದೀಕ್ಷೆಯನ್ನು ಕೈಗೊಳ್ಳಿರಿ. ಈ ಆಶ್ರಮವು ಸಿದ್ಧಾಶ್ರಮವೆಂಬುದು ಸಿದ್ಧವಾಗಲಿ ಎಂದು ನುಡಿಯಲು ಆ ಮುನೀಶ್ವರನು ದೀಕ್ಷೆಯನ್ನು ಬ್ರಹ್ಮನಿಗೆ ಪ್ರಸನ್ನನಾದನು. ಆಗ ಆತನು ಸ್ತೋತ್ರಮಾಡುತ್ತ, ನಾರಾಯಣನನ್ನು ಕುರಿತು 'ತಪಸ್ಸೇ ಮೂರ್ತಿಯಾಗಿ ಬಂದಂಥ ಸ್ವಾಮಿಯೆ, ತಪಸ್ಸುಗಳ ಆಕಾರವಾದ ಸ್ವಾಮಿಯೆ, ನಾನು ಕಷ್ಟಪಟ್ಟು ಮಾಡಿದ ತವಸ್ಸಿನಿಂದ ನಿನ್ನನ್ನು ಕಂಡೆನು. ಪುರುಷೋತ್ತಮ, ನಿನ್ನ ಶರೀರದಲ್ಲಿ ಸಮಸ್ತ ಜಗತ್ತನ್ನು ಕಾಣುತ್ತಲಿದ್ದೇನೆ. ನೀನು ಅನಾದಿವುರುಷನು. ಇಂಥ ಸ್ವರೂಪವೆಂದು ನಿನ್ನನ್ನು ಹೇಳಲು ಶಕ್ಯವಲ್ಲ. ನಾನು ನಿನ್ನ ಮರೆಹೊಕ್ಕೆನು' ಎಂದು ನುಡಿದನು.ಆ ಮಾತಿಗೆ ಸಂತುಷ್ಟನಾದ ನಾರಾಯಣನು ದೋಷರಹಿತನಾದ ಕಶ್ಯಪಬ್ರಹ್ಮನನ್ನು ಕುರಿತು ★ ಕಶ್ಯಪ ನಿನ್ನ ತಪಸ್ಸಿಗೆ ನಾನು ಸುಪ್ರೀತನಾದೆನು. ನಿನ್ನ ಇಷ್ಟಾರ್ಥವು ನೆರವೇರಲಿ. ನಿನ್ನ ಮನಸ್ಸಿಗೆ ಬಂದ ವರವನ್ನು ಬೇಡಿಕೊ ' ಎಂದು ನುಡಿದನು. ಕಶ್ಯಪನು ಆತನನ್ನು ನೋಡಿ 'ಹೇ ದೇವ, ಆದಿತಿಗೂ ಸಮಸ್ತ ದೇವತೆಗಳಿಗೂ ನನಗೂ ಸುಪ್ರೀತನಾಗಿ ಒಂದು ವರವನ್ನು ಕೊಡಬೇಕು. ನನ್ನ ಪತ್ನಿಯಾದ ಅದಿತಿಯಲ್ಲಿ ನೀನು ಮಗನಾಗಿ ಜನಿಸಿ ದೇವೇಂದ್ರನಿಗೆ ಒಡಹುಟ್ಟಿದ ತಮ್ಮನಾಗಿ ರಾಕ್ಷಸರ ಬಾಧೆಗಳಿಂದ ಕಂಗೆಟ್ಟಿರುವ ದೇವತೆಗಳಿಗೆ ಸಹಾಯವನ್ನು ಮಾಡಬೇಕು. ಈ ಆಶ್ರಮವು ನನಗೆ ತಪಸ್ಸಿದ್ಧಿಯುಂಟುಮಾಡಿದ ಕಾರಣದಿಂದ ಸಿದ್ಧಾಶ್ರಮವೆಂದು ಲೋಕದಲ್ಲಿ ಪ್ರಸಿದ್ಧ ವಾಗಲಿ ಎಂದು ಹೇಳಿದನು. ಈ ಪ್ರಕಾರದಲ್ಲಿ ಪ್ರಸಿದ್ಧವಾದ ಸಿದ್ಧಾಶ್ರಮವು ಇದು. ಬಳಿಕ ಕಶ್ಯಪನ ವಾಕ್ಯವನ್ನು ಕೇಳಿ ಪೀತಾಂಬರಧರನಾಗಿ ಸರ್ವಜ್ಞನಾದ ಪರಮಪುರುಷನು ಕಶ್ಯಪನ ಸ್ತ್ರೀಯಾದ ಅದಿತಿಯಲ್ಲಿ ವಾಮನ ಸ್ವರೂಪನಾಗಿ ದಂಡ ಕಮಂಡಲು ಛತ್ರ ಶಿಖಾಯಜ್ಞೋಪವೀತಸಹಿತನಾಗಿ ಅವತರಿಸಿದನು.

ಮುಂದುವರಿಯುವುದು...

# ಕಾಂಗ್ರೆಸ್ ಪ್ರಭಾವಿ ಸಚಿವರಿಂದ ಸ್ಫೋಟಕ ಹೇಳಿಕೆ!

## ಶಿಗ್ಗಾಂವಿ ಉಪಚುನಾವಣೆ ಕಣ ರಂಗೇರುತ್ತಿದ್ದು, ಪದಾಧಿಕಾರಿಗಳಿಗೆ ಸಹ ಕೆಲವು ಸೂಚನೆ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ವಕ್ಫ್ ಬೋರ್ಡ್ ವಿವಾದ ಸದ್ಯಕ್ಕೆ ತಣ್ಣಗಾಗುವ ಲಕ್ಷಣ ಕಾಣಿಸುತ್ತಿಲ್ಲ. ಈ ನಡುವೆ ಕಾಂಗ್ರೆಸ್ ಹಾಗೂ ಬಿಜೆಪಿಯ ನಡುವೆ ವಾಕ್ಸಮರ ತೀವ್ರವಾಗುತ್ತಿದೆ. ಇದರ ಬೆನ್ನಲ್ಲೇ ವಕ್ಫ್ ಬೋರ್ಡ್, ವಿವಾದದ ಬಗ್ಗೆ ಪ್ರಭಾವಿ ಸಚಿವರೊಬ್ಬರು ಸ್ಫೋಟಕ ಹೇಳಿಕೆ ಕೊಟ್ಟಿದ್ದಾರೆ.

ರಾಜ್ಯದ ಮೂರು ವಿಧಾನಸಭೆ ಕ್ಷೇತ್ರಗಳಲ್ಲಿ ಉಪ ಚುನಾವಣೆ ನಡೆಯುವ ಸಂದರ್ಭದಲ್ಲೇ ವಕ್ಫ್ ಆಸ್ತಿ ವಿವಾದ ತೀವ್ರವಾಗಿದೆ.

ಇದೀಗ ಕಾಂಗ್ರೆಸ್ ನಾಯಕರು ವಕ್ಫ್ ಬೋರ್ಡ್ ವಿವಾದಕ್ಕೆ ಸಂಬಂಧಿಸಿದಂತೆ ಬಿಜೆಪಿ ಕಡೆಯೇ ಬೊಟ್ಟು ಮಾಡಿದ್ದಾರೆ.

**ವಕ್ಫ್ ಬೋರ್ಡ್ ವಿವಾದ**

ವಕ್ಫ್ ಬೋರ್ಡ್ ವಿವಾದ ಹಾಗೂ ಶಿಗ್ಗಾಂವಿ ಉಪ ಚುನಾವಣೆಯ ಬಗ್ಗೆ ಮಾತನಾಡಿರುವ ಎಚ್.ಕೆ ಪಾಟೀಲ್ ಅವರು, ಶಿಗ್ಗಾಂವಿ ಉಪಚುನಾವಣೆ ಕಣ ರಂಗೇರತಿದೆ. ಕಾಂಗ್ರೆಸ್ ಕಾರ್ಯಕರ್ತರು ಹಾಗೂ ನಾಯಕರಿಗೆ ಈ ಬಾರಿ ಗೆಲ್ತೀವಿ ಅನ್ನೋ ವಿಶ್ವಾಸ ಇದೆ. ಭಾನುವಾರ ಹುಬ್ಬಳ್ಳಿಯಲ್ಲಿ ಸಭೆ ಮಾಡಿದ್ದೇವೆ. ನಾವು ಈ ಬಾರಿ ಉಪಚುನಾವಣೆಯಲ್ಲಿ ಗೆಲ್ಲಬೇಕು ಎಂದಿದ್ದಾರೆ. ಮುಂದುವರಿದು ವಕ್ಫ್ ಬೋರ್ಡ್ ವಿಷಯಕ್ಕೆ ಸಂಬಂಧಿಸಿದಂತೆ ಮಾತನಾಡಿರುವ ಅವರು, ವಕ್ಫ್ ವಿಚಾರವಾಗಿ ಮೊದಲು ಪತ್ರ ಬರೆದಿದ್ದೇ. ಬಿಜೆಪಿಯವರೇ ಇದೀಗ ಉಪ ಚುನಾವಣೆ ಇದೆ ಎಂದು ನಾಟಕವಾಡ್ತಿದ್ದಾರೆ. ಹಿಂದೂ ರೈತರ ಅಲ್ಲ, ಮುಸ್ಲಿಂ ರೈತರ ಜಮೀನಿಗೂ ನೋಟಿಸ್ ಕೊಡಲಾಗಿದೆ. ಆದರೆ, ಗದಗ ಜಿಲ್ಲೆಯಲ್ಲಿ ಯಾರಿಗೂ ನೋಟಿಸ್ ಕೊಟ್ಟಿಲ್ಲ. ವಕ್ಫ್ ಎಂದರೆ ದಾನ, ಅದು ಕೂಡಾ ಸರ್ಕಾರದ ಒಂದು ಭಾಗ ಆಗಿದೆ. ದಾನ ಕೊಟ್ಟ ಜಮೀನು ವಿಚಾರವಾಗಿ ಮೇಲ್ವಿಚಾರಣೆ ಮಾಡ್ತಾರೆ ಎಂದು ವಿವರಿಸಿದರು.

**ಈ ಸಭೆಯಲ್ಲಿ ಹಿರಿಯರ ಜೊತೆ ಸಭೆ ಮಾಡಿದ್ದೇವೆ. ಪದಾಧಿಕಾರಿಗಳಿಗೆ ಸಹ ಕೆಲವು ಸೂಚನೆ ಕೊಟ್ಟಿದ್ದೇವೆ. ನಮ್ಮ ಪ್ರಕಾರ, ಶಿಗ್ಗಾಂವಿಯಲ್ಲಿ ನಾವೇ ಗೆಲ್ತೀವಿ. ಶಿಗ್ಗಾಂವಿಯಲ್ಲಿ ಬೊಮ್ಮಾಯಿ ವಿರೋಧಿ ಅಲೆ ಇದ್ದು, ಇದು ನಮಗೆ ಅನುಕೂಲಕರವಾಗಿದೆ. ನಾನು ಬಿಜೆಪಿಯವರನ್ನು ಬಹಳ ಹತ್ತರದಿಂದ ನೋಡಿದ್ದೇನೆ. ಅವರು ಏನೋ ಒಂದು ಸತ್ತು ಹೋಗಿದೆ ಅಂದರೂ ಹಲ್ಲು ಕಿಸಿಯುತ್ತಾರೆ. ಹಾಗೆ ವಕ್ಫ್ ಮುಗಿದು ಹೋಗಿದೆ. ಉಪಚುನಾವಣೆ ಇರೋ ಕಾರಣಕ್ಕೆ ಗೊಂದಲ ಸೃಷ್ಟಿ ಮಾಡುತ್ತಿದ್ದಾರೆ ಎಂದು ಹೇಳಿದರು.**

**ಶಿಗ್ಗಾಂವಿ ಉಪಚುನಾವಣೆ ವಿಚಾರವಾಗಿ ಸಭೆ ಮಾಡಿದ್ದೇವೆ. ಇನ್ನು ಮೂರು ಪುರಸಭೆ, ಆರು ಜಿಲ್ಲಾ ಪಂಚಾಯಿತಿ ಹಾಗೂ 23 ತಾಲ್ಲೂಕು ಪಂಚಾಯಿತಿ ಸಭೆ ಮಾಡಿದ್ದೇವೆ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದ್ದಾರೆ.**

ನಾವು ನಿಮ್ಮ ಭೂಮಿ ತೆಗೆದುಕೊಳ್ಳಲು ಬರಲ್ಲ. ಇನ್ನು ವಕ್ಫ್ ಗೆಜೆಟ್ ನೋಟಿಫಿಕೇಶನ್ ಮಾಡಿರೋದರಲ್ಲಿ ಬಿಜೆಪಿ ಪಾಲಿದೆ. ನೀವೇ ಮೊದಲು ನೋಟಿಸ್ ಕೊಡಿ ಅಂದಿದ್ದು. ಇದು ರಾಜಕೀಯ ಕಪಟ ನಾಟಕ ಎಂದು ಕಿಡಿಕಾರಿದ್ದಾರೆ. ಮುಂದುವರಿದು ವಕ್ಫ್ ವಿಚಾರವಾಗಿ ಜನರಿಗೆ ದಾರಿ ತಪ್ಪಿಸುವ ಕೆಲಸವನ್ನು ಬಿಜೆಪಿ ಮಾಡುತ್ತಿದೆ ಎಂದರು.



ಸಾಮಾಜಿಕ ಕಳಕಳಿ
ಹೆಚ್.ಎಸ್.ಪ್ರತಿಮಾ ಹಾಸನ್
ಸಾಹಿತಿ,ಶಿಕ್ಷಕಿ,ಸಾಮಾಜಿಕ ಚಿಂತಕಿ.ಹಾಸನ

# ಪಟಾಕಿ ಇಲ್ಲದೆ ದೀಪಾವಳಿ ಹಬ್ಬವಿಲ್ಲ


• ಉದಯವಾಹಿನಿ, ವಿಶೇಷ

ದೀಪವನು ಬೆಳಗಿಸುತ ಹಬ್ಬವನು ಆಚರಿಸು
ಮಾಪನವ ಮಾಡುತಲಿ ಬದುಕಿನಲ್ಲಿ
ಶಾಪವನು ಕಳೆಯೆಂದು ಕೇಳುತಲಿ ಪೂಜಿಸುತ
ಕಾಪಿಡುತ ಸಾಗುತಿರು ಲಕ್ಷ್ಮಿ ದೇವಿ.....

ನಮ್ಮ ಹಿಂದೂ ಸಂಪ್ರದಾಯದಲ್ಲಿ ದೀಪಕ್ಕೆ ವಿಶೇಷವಾದ ಅರ್ಥವಿದೆ. ಇಂತಹ ದೀಪವನ್ನು ದೇವರ ಮುಂದೆ ಹಚ್ಚುವಾಗ ನಮ್ಮ ಹೆಣ್ಣು ಮಕ್ಕಳು ಮನೆಗೆ ಒಳ್ಳೆಯದಾಗಲಿ ಎಂದು ಕೇಳಿಕೊಳ್ಳುತ್ತಾರೆ. ಆ ಸೇವೆಯಲ್ಲಿ ಯಾವುದೇ ರೀತಿಯ ಮಾಪನವನ್ನು ಮಾಡದೆ ನಿಷ್ಕಲ್ಮಶವಾಗಿ ಪೂಜೆಯನ್ನು ಮಾಡುತ್ತಾರೆ. ಯಾವುದೇ ರೀತಿಯ ಶಾಪಗಳಿದ್ದರೂ ಸಹ ಅವುಗಳಿಂದ

**ದಿನಕ್ಕೊಂದು ಮುಕ್ತಕ -14**

ನಮ್ಮನ್ನು ಮುಕ್ತಿಗೊಳಿಸು ಎಂದು ಭಕ್ತಿಯಲ್ಲಿ ಪೂಜಿಸುತ್ತಾರೆ.ಪ್ರತಿಯೊಬ್ಬರು ಪೂಜಿಸುವಾಗ ದೇವರಲ್ಲಿ ಕೇಳಿಕೊಳ್ಳುತ್ತಾರೆ. ಅಂತಹದರಲ್ಲಿ ದೀಪದ ಹಬ್ಬವೆಂದು ಹೆಸರುವಾಸಿಯಾಗಿರುವ ನಮ್ಮ ದೀಪಾವಳಿ ಹಬ್ಬದಲ್ಲಿ ದೀಪಕ್ಕೆ ವಿಶೇಷ ಸ್ಥಾನವಿದೆ. ಈ ಹಬ್ಬದಲ್ಲಿ ಪುಟ್ಟ ಪುಟ್ಟ ಮಕ್ಕಳು ಸಂಭ್ರಮಿಸಲು ಸಿದ್ದರಾಗಿದ್ದಾರೆ. ಇಂದಿನ ಪ್ರಸ್ತುತ ದಿನಮಾನಗಳಲ್ಲಂತೂ ಪಟಾಕಿ ಹಚ್ಚಿ ವಾತಾವರಣವನ್ನು ಹಾಳು



ಮಾಡದಂತೆ ಹಸಿರನ್ನು, ವಾಯು ಮಾಲಿನ್ಯವನ್ನು ತಡೆಯುವುದಕ್ಕಾಗಿ ಪಟಾಕಿ ಹಚ್ಚುವುದನ್ನು ಕಡಿಮೆ ಮಾಡಿ ದೀಪವನ್ನು ಬೆಳಗುವುದರ ಮುಖಾಂತರ ಹಬ್ಬವನ್ನು ಆಚರಣೆ ಮಾಡುವುದು ಉತ್ತಮ. ಪಟಾಕಿ ಇಲ್ಲದೆ ದೀಪಾವಳಿಯಂತೂ ಹಬ್ಬವೆನಿಸುವುದಿಲ್ಲ. ನಮ್ಮ ಆಸೆ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು

ಪರಿಸರವನ್ನು ಹಾಳು ಮಾಡುವುದು ಒಳಿತಲ್ಲ. ದೀಪ ಹಚ್ಚುತ್ತಾ ದೀಪಾವಳಿ ಹಬ್ಬದಲ್ಲಿ ಹೊಸ ಉಡುಪುಗಳನ್ನು ಧರಿಸಿ ಮಡಿ ಮೈಲಿಗೆಯಲ್ಲಿ ಲಕ್ಷ್ಮಿ ಪೂಜೆ ಮಾಡುವುದು ವಿಶೇಷ ಎಂಬುದು ಪ್ರತಿಯೊಬ್ಬರಿಗೂ ತಿಳಿದಿದೆ. ಬೆಳಕಿನ ಹಬ್ಬವೆಂದು ಹೆಸರಾಗಿರುವ ದೀಪಾವಳಿ ಹಬ್ಬದಲ್ಲಿ ದೀಪಗಳನ್ನು ಹಚ್ಚುತ್ತ ಕತ್ತಲೆಯನ್ನು ಹೋಗಿಸುತ್ತ ಬಾಳಲ್ಲಿ ಬೆಳಕು ಮೂಡಲಿ ಎಂಬುದನ್ನು ಆಶಿಸುತ್ತಾ ಪ್ರತಿಯೊಬ್ಬರು ಪೂಜಿಸುತ್ತಾರೆ. ಅಷ್ಟೈಶ್ವರ್ಯಗಳು ಮನೆಗೆ ಆಗಮಿಸಲೆಂದು ಬಯಸುತ್ತಾರೆ.ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು ಶುಭವಾಗಲಿ.

# ಮಳೆ ತುಸು ಕ್ಷೀಣ: ಕೆಲವೆಡೆ ಮಂಜು ಕವಿದ ವಾತಾವರಣ

• ಉದಯವಾಹಿನಿ, ಬೆಂಗಳೂರು


ರಾಜ್ಯದ ವಿವಿಧೆಡೆ ಸುರಿಯುತ್ತಿರುವ ಮಳೆ ಮುಂದಿನ 2 ದಿನ ದಕ್ಷಿಣ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಗುಡುಗು ಮಿಂಚು ಸಹಿತ ಧಾರಾಕಾರವಾಗಿ ಸುರಿಯಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ಕೊಟ್ಟಿದೆ.

ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಕೊಡಗಿನ ಗೋಣಿಕೊಪ್ಪ, ಮೈಸೂರಿನ ಹುಣಸೂರು, ಯಾದಗಿರಿ ಸೇರಿ ರಾಜ್ಯದ ಹಲವು ಭಾಗಗಳಲ್ಲಿ ರಾತ್ರಿ, ಭಾನುವಾರ ವರ್ಷಧಾರೆಯಾಗಿದೆ. ಕೆಲವೆಡೆ ಮಳೆ ಸುರಿದ ಕಾರಣ ಪಟಾಕಿ ಸಿಡಿಸಲು ತೊಂದರೆಯಾಯಿತು. ಬೆಂಗಳೂರು ನಗರ, ಬೆಂ.ಗ್ರಾಮಾಂತರ, ರಾಮನಗರ, ಮಂಡ್ಯ, ಮೈಸೂರು, ಕೊಡಗು, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಮುಂದಿನ 2 ದಿನ ಗುಡುಗು ಮಿಂಚು ಸಹಿತ ಬಿರುಸಾಗಿ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ, ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ. ನ.6ರಿಂದ ರಾಜ್ಯದಲ್ಲೆಡೆ ಮಳೆ ಕ್ಷೀಣವಾಗಲಿದೆ ಎಂದು ಇಲಾಖೆ ಮಾಹಿತಿ ನೀಡಿದೆ.

**ಮಂಜು ಕವಿದ ವಾತಾವರಣ:** ಹಿಂಗಾರು ಕ್ಷೀಣವಾಗುತ್ತಿರುವ ಬೆನ್ನಲ್ಲೇ ಮೈಸೂರು ಸೇರಿ ರಾಜ್ಯದ ಕೆಲ ಜಿಲ್ಲೆಗಳಲ್ಲಿ ಮಂಜು ಕವಿದ ವಾತಾವರಣ ಕಾಣಿಸಿಕೊಳ್ಳುತ್ತಿದೆ. ನಸುಕಿನ ವೇಳೆ ದಟ್ಟವಾದ ಮಂಜಿನ ವಾತಾ ವರಣ ಇರುತ್ತಿದೆ. ಇದರಿಂದಾಗಿ ವಾಹನ ಸವಾರರು ನಿಧಾನವಾಗಿ ವಾಹನಗಳನ್ನು ಚಲಾಯಿಸುತ್ತಿದ್ದಾರೆ. ಪ್ರತಿ ನಿತ್ಯ ವಾಗಿಂಗ್ ತೆರಳುವವರಿಗೆ ಅಡಚಣೆಯಾಗುತ್ತಿದೆ. ರಾಜ್ಯಾದ್ಯಂತ ಈಗಾಗಲೇ ಮಳೆ ಇಳಿಮುಖವಾಗಿದೆ. ದಕ್ಷಿಣ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಮಾತ್ರ ತುಸು ಬಿರುಸಾಗಿ ಸುರಿಯಲಿದೆ. ಬಹುತೇಕ ಜಿಲ್ಲೆಗಳಲ್ಲಿ ಗರಿಷ್ಠ ತಾಪಮಾನದಲ್ಲಿ 30-31 ಡಿಗ್ರಿ ಸೆಲ್ಸಿಯಸ್ ದಾಖಲಾಗುತ್ತಿದೆ. ಬೆಳಗ್ಗಿನ ಜಾವ ಚಳಿ ಜೊತೆಗೆ ಮಂಜು ಕವಿದ ವಾತಾವರಣವೂ ಕಾಣಿಸಿಕೊಳ್ಳುತ್ತಿದೆ.

# 123 ವರ್ಷ ಬಳಿಕ ಅಕ್ಟೋಬರ್‌ನಲ್ಲಿ ಬೆಚ್ಚಗಿನ ವಾತಾವರಣ

• ಉದಯವಾಹಿನಿ, ಬೆಂಗಳೂರು



ಉದಯವಾಹಿನಿ ಚಿತ್ರ

ದೇಶದಲ್ಲಿ 2024ರ ಅಕ್ಟೋಬರ್‌ನಲ್ಲಿ ವಾಡಿಕೆಗಿಂತ ಅಧಿಕ ಉಷ್ಣಾಂಶ ದಾಖಲಾಗಿದೆ. ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಛತ್ತೀಸ್‌ಗಢದಲ್ಲಿ ವಾಡಿಕೆಗಿಂತ ಹೆಚ್ಚು ತಾಪಮಾನ ವರದಿಯಾಗಿದೆ.ಈ ಮೂಲಕ 1951ರ ಅಕ್ಟೋಬರ್‌ನಲ್ಲಿ ವರದಿಯಾಗಿದ್ದ ತಾಪಮಾನ ದಾಖಲೆಯನ್ನು ಮುರಿದಿದೆ.

1901ರ ಅಕ್ಟೋಬರ್‌ನಲ್ಲಿ ದೇಶದಲ್ಲಿ ಅತಿ ಹೆಚ್ಚು ತಾಪಮಾನ ವರದಿಯಾಗಿತ್ತು.123 ವರ್ಷ ಬಳಿಕ ದೇಶದಲ್ಲಿ ಅಕ್ಟೋಬರ್‌ನಲ್ಲಿ ಅತಿ ಉಷ್ಣಾಂಶ ಕಂಡುಬಂದಿದೆ. ಇದಕ್ಕೆ ಹವಾಮಾನ ವೈಪರೀತ್ಯವೇ ಕಾರಣ ಎನ್ನುತ್ತಾರೆ ಹವಾಮಾನ ತಜ್ಞರು. ಪ್ರಸಕ್ತ ತಿಂಗಳ ಎರಡು ವಾರವರೆಗೆ ದೇಶದ ಕೆಲ ರಾಜ್ಯಗಳಲ್ಲಿ ವಾಡಿಕೆಗಿಂತ ಹೆಚ್ಚು ತಾಪಮಾನ ಕಾಣಿಸಿಕೊಳ್ಳುವ ಸಾಧ್ಯತೆ ಇದೆ.

ಈ ಬಾರಿ ನೈಋತ್ಯ ಮಾನ್ಸೂನ್( ಮುಂಗಾರು) ತಡವಾಗಿ ವಾಪಸ್ ಪಡೆದಿರುವುದು ಸೇರಿ ಇತರೆ ಕಾರಣಗಳಿಂದ ಕೆಲ ರಾಜ್ಯಗಳಲ್ಲಿ ಅಕ್ಟೋಬರ್‌ನಲ್ಲಿ ತಾಪಮಾನ ಜಾಸ್ತಿಯಾಗಿದೆ.ಅಲ್ಲದೆ, ದೇಶದ ಈಶಾನ್ಯ, ಮಧ್ಯ ರಾಜ್ಯಗಳಲ್ಲಿ ವಾಡಿಕೆಗಿಂತ ಅಧಿಕ ತಾಪಮಾನ ಉಂಟಾಗುವ ಸಾಧ್ಯತೆ ಇರುವುದರಿಂದ ಬೆಚ್ಚಗಿನ ವಾತಾವರಣ ಇರಲಿದೆ. ಬಳಿಕ ಕ್ರಮೇಣವಾಗಿ ಉಷ್ಣಾಂಶ ಇಳಿಕೆಯಾಗಲಿದೆ. ಪ್ರಸಕ್ತ ತಿಂಗಳ ಕೊನೆಯ ವಾರ ಅಥವಾ ಡಿಸೆಂಬರ್‌ನಲ್ಲಿ 'ಲಾ-ನಿನಾ' ಆರಂಭವಾದರೆ ಈ ಬಾರಿ ತೀವ್ರ ಚಳಿ ಕಾಣಿಸಿಕೊಳ್ಳಲಿದೆ. ಆದರೆ, ಲಾನಿನಾ ಈವರೆಗೆ ಆರಂಭವಾಗಿಲ್ಲ. ಇತ್ತೀಚಿನ ಜಾಗತಿಕ ತಾಪಮಾನ ಮುನ್ಸೂಚನೆ ಮೇರೆಗೆ ಡಿಸೆಂಬರ್‌ನಲ್ಲಿ 'ಲಾ ನಿನಾ' ಉಂಟಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ಬಾರಿ ಚಳಿಗಾಲದ ಸ್ವರೂಪ ಯಾವ ರೀತಿಯಲ್ಲಿ ಇರಲಿದೆ ಎಂಬುದರ ಬಗ್ಗೆ ಭಾರತೀಯ ಹವಾಮಾನ ಇಲಾಖೆ(ಐಎಂಡಿ) ಸಂಶೋಧನೆಯಲ್ಲಿ ತೊಡಗಿದೆ ಎನ್ನುತ್ತಾರೆ ಹವಾಮಾನ ತಜ್ಞರು.

# ಸರ್ವಾರ್ಥ ಸಿದ್ಧಿ ಯೋಗ: ಶಿವನ ಕೃಪೆಯಿಂದ ಈ ರಾಶಿಗಳ ಭವಿಷ್ಯ

• ಉದಯವಾಹಿನಿ, ಬೆಂಗಳೂರು

ನವೆಂಬರ್ ತಿಂಗಳ ಮೊದಲ ಸೋಮವಾರದಂದು ಕೆಲ ಮಂಗಳಕರ ಯೋಗಗಳು ರೂಪಗೊಳ್ಳಲಿವೆ. ಈ ದಿನ ಚಂದ್ರ ಗ್ರಹ ವೃಶ್ಚಿಕ ರಾಶಿಗೆ ಸಂಚಾರ ಮಾಡುವುದರಿಂದ ವೇಶಿ ಯೋಗ ಉಂಟಾಗುತ್ತಿದೆ. ಇದರೊಂದದಿಗೆ ಸರ್ವಾರ್ಥ ಸಿದ್ಧಿ ಯೋಗ ಕೂಡ ರೂಪಗೊಳ್ಳುತ್ತಿದೆ. ನವೆಂಬರ್ 4 ಅನುರಾಧಾ ನಕ್ಷತ್ರದ ಶುಭ ಸಂಯೋಗದಲ್ಲಿ ಕೆಲ ರಾಶಿಯವರ ಎಲ್ಲಾ ಕೆಲಸಗಳು ಶಿವನ ಕೃಪೆಯಿಂದ ನೆರವೇರುತ್ತವೆ. ಕಾರ್ತಿಕ ಮಾಸದ ಶುಕ್ಲ ಪಕ್ಷದ ತೃತೀಯಾ ತಿಥಿಯಂದು ಕೆಲ ರಾಶಿಯವರ ಜಾತಕದಲ್ಲಿ ಚಂದ್ರನ ಸ್ಥಾನ ಬಲಗೊಳ್ಳುತ್ತದೆ. ಅವರು ಶಿವನ ಆಶೀರ್ವಾದವನ್ನು ಸಹ ಪಡೆಯುತ್ತದೆ. ಇದರಿಂದ ಕೆಲ ರಾಶಿಯವರಿಗೆ ಮಾನಸಿಕ ಶಾಂತಿ ಸಿಗಲಿದೆ. ಮತ್ತು ಅವರ ಕೆಲಸದಲ್ಲಿ ಯಶಸ್ಸು. ನವೆಂಬರ್ 4 ಯಾವ ರಾಶಿಯವರಿಗೆ ಅದೃಷ್ಟ ಒಲಿಯಲಿದೆ ಎಂಬುದನ್ನು ತಿಳಿಯೋಣ.

**ಮೇಷ ರಾಶಿ:** ಮೇಷ ರಾಶಿಯವರಿಗೆ ವೇಶಿ ಯೋಗ ಉತ್ತಮ ಫಲ ನೀಡಲಿದೆ. ಮೇಷ ರಾಶಿಯ ಜನರು ಈ ದಿನ ತಮ್ಮ ಜೀವನದಲ್ಲಿ ಉತ್ಸಾಹದಿಂದ ಇರುತ್ತಾರೆ. ಆರೋಗ್ಯದಿಂದ ಸಂತೋಷವನ್ನು ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಹೂಡಿಕೆ ಮಾಡಲು ಬಯಸಿದರೆ, ನಾಳೆ ನೀವು ಮಂಗಳಕರ ಯೋಗದ ಲಾಭವನ್ನು ಪಡೆಯುತ್ತೀರಿ. ಇದರಿಂದಾಗಿ ಭವಿಷ್ಯದಲ್ಲಿ ಆದಾಯ ಹೆಚ್ಚಾಗಲಿದೆ. ಉದ್ಯೋಗವನ್ನು ಹುಡುಕುತ್ತಿರುವ ಯುವಕರು ಒಳ್ಳೆಯ ಸುದ್ದಿ ಇದೆ. ಸಂಗಾತಿಯೊಂದಿಗಿನ ಜಗಳ ಮತ್ತು ಗದ್ದಲವೂ ಕಡಿಮೆಯಾಗುತ್ತದೆ.

**ಸಿಂಹ ರಾಶಿ:** ಸಿಂಹ ರಾಶಿಯವರಿಗೆ ನಾಳೆ ರೂಪಗೊಳ್ಳುವ ವೇಶಿ ಯೋಗದಿಂದ ಆರ್ಥಿಕ ಜೀವನ ಸುಧಾರಿಸಲಿದೆ. ಉದ್ಯೋಗ, ಪ್ರಯಾಣ ಅಥವಾ ವಿದ್ಯಾಭ್ಯಾಸಕ್ಕಾಗಿ



ಉದಯವಾಹಿನಿ ಚಿತ್ರ

ವಿದೇಶಕ್ಕೆ ಹೋಗಲು ಬಯಸುವ ಈ ರಾಶಿಚಕ್ರದ ಜನರು ತಮ್ಮ ಆಸೆಯನ್ನು ಈಡೇರಿಸಿಕೊಳ್ಳಬಹುದು. ನೀವು ಹಣ ಸಂಪಾದಿಸಲು ಹೊಸ ಮಾರ್ಗಗಳನ್ನು ಕಂಡುಕೊಳ್ಳುವಿರಿ. ಆಸ್ತಿ ಮತ್ತು ಭೂಮಿಯಲ್ಲಿ ಹೂಡಿಕೆ ಮಾಡಲು ಉತ್ತಮ ಅವಕಾಶವನ್ನು ಸಹ ನೀವು ಪಡೆಯುತ್ತೀರಿ. ಸಿಂಹ ರಾಶಿಯವರು ಪ್ರತಿಯೊಂದು ಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತದೆ. ಬೌದ್ಧಿಕ ಬೆಳವಣಿಗೆಯಿಂದಾಗಿ ಜೀವನದಲ್ಲಿ ಅನೇಕ ಸಕಾರಾತ್ಮಕ ಬದಲಾವಣೆಗಳನ್ನು ಕಾಣುವಿರಿ.

**ವೃಶ್ಚಿಕ ರಾಶಿ:** ವೃಶ್ಚಿಕ ರಾಶಿಯವರಿಗೆ ಹೊಸ ಭರವಸೆಯ ಕಿರಣ ತರಲಿದೆ. ವೃಶ್ಚಿಕ ರಾಶಿಯವರಿಗೆ ಮಹಾದೇವನ ಕೃಪೆಯಿಂದ ಆದಾಯ ಹೆಚ್ಚಾಗಲಿದೆ. ನಿಮ್ಮ ಸಂಗಾತಿಯೊಂದಿಗೆ ಹೊಸ ವ್ಯವಹಾರವನ್ನು ಪ್ರಾರಂಭಿಸಲು ನೀವು ಬಯಸಿದರೆ ಈ ಸಮಯ ಅದ್ಭುತವಾಗಿದೆ. ಸರ್ಕಾರಿ ಉದ್ಯೋಗಕ್ಕೆ ತಯಾರಿ ನಡೆಸುತ್ತಿರುವ ವಿದ್ಯಾರ್ಥಿಗಳು ಶಿಕ್ಷಣದಲ್ಲಿ ಉತ್ತಮ ಫಲಿತಾಂಶಗಳನ್ನು ಪಡೆಯುತ್ತಾರೆ. ಶಿಕ್ಷಕರಿಗೆ ನಿಮ್ಮ ಮೇಲಿನ ವಿಶ್ವಾಸವೂ ಹೆಚ್ಚಾಗುತ್ತದೆ. ನೀವು ಬಹಳ ದಿನಗಳಿಂದ ಚಿಂತಿಸುತ್ತಿದ್ದ ಕಾರ್ಯಗಳು ಸಹ ಪೂರ್ಣಗೊಳ್ಳುವ ಸಾಧ್ಯತೆ ಇದೆ.

**ಮಕರ ರಾಶಿ:** ಮಕರ ರಾಶಿಯವರಿಗೆ ಯಶಸ್ಸಿನ ದಿನ ಇದಾಗಿದೆ. ಮಕರ ರಾಶಿಯವರು ನಾಳೆ ಅದೃಷ್ಟದ ಸಂಪೂರ್ಣ ಬೆಂಬಲವನ್ನು ಪಡೆಯುತ್ತಾರೆ. ಇದರಿಂದಾಗಿ ನಿಮ್ಮ ಅನೇಕ ಅಪೂರ್ಣ ಕಾರ್ಯಗಳು ಪೂರ್ಣಗೊಳ್ಳುತ್ತವೆ. ನಿಮ್ಮ ಹೆತ್ತವರ ಆಶೀರ್ವಾದದಿಂದ, ನೀವು ಬಹಳ ದಿನಗಳಿಂದ ಕಾಯುತ್ತಿರುವ ಅಮೂಲ್ಯವಾದದ್ದನ್ನು ನಾಳೆ ಪಡೆಯಬಹುದು. ಕುಟುಂಬ ಸದಸ್ಯರ ವಿವಾಹವು ನಾಳೆ ನಿಶ್ಚಯವಾಗಬಹುದು, ಇದು ಕುಟುಂಬದಲ್ಲಿ ಸಂತೋಷವನ್ನು ತರುತ್ತದೆ. ನಿಮ್ಮ ಆರ್ಥಿಕ ಸ್ಥಿತಿಯು ಸಹ ಬಲಗೊಳ್ಳುತ್ತದೆ.

**ಮೀನ ರಾಶಿ:** ನವೆಂಬರ್ 4 ಮೀನ ರಾಶಿಯವರಿಗೆ ಆಹ್ಲಾದಕರ ಫಲಿತಾಂಶಗಳನ್ನು ತರುತ್ತದೆ. ಮೀನ ರಾಶಿಯ ಜನರು ಇಂದು ಕೆಲವು ಒಳ್ಳೆಯ ಸುದ್ದಿಗಳನ್ನು ಕೇಳಬಹುದು. ನೀವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಬುದ್ಧಿವಂತಿಕೆ ಮತ್ತು ವಿವೇಚನೆಯಿಂದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೀರಿ. ಆಗ ಮಾತ್ರ ನೀವು ಯಶಸ್ಸನ್ನು ಸಾಧಿಸಲು ಸಾಧ್ಯವಾಗುತ್ತದೆ. ನೀವು ನಿಮ್ಮ ವ್ಯಾಪಾರಕ್ಕಾಗಿ ಕೆಲವು ಯೋಜನೆಗಳನ್ನು ಮಾಡಬೇಕು ಮತ್ತು ಅವುಗಳನ್ನು ಮುಂದಕ್ಕೆ ಕೊಂಡೊಯ್ಯಬೇಕು, ಆಗ ಮಾತ್ರ ನೀವು ಅವುಗಳ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ.

# ಅಶ್ವಿನಿ ಪುನೀತ್ ರಾಜ್‌ಕುಮಾರ್‌ರವರಿಂದ ಕನ್ನಡ ರಾಜ್ಯೋತ್ಸವಕ್ಕೆ ಚಾಲನೆ

## ನಾಡಿನ ಸಾಧಕ ಸಾಧಕಿಯರಿಗೆ ಕರ್ನಾಟಕ ರತ್ನ ಡಾ. ಪುನೀತ್ ರಾಜ್‌ಕುಮಾರ್ ಪ್ರಶಸ್ತಿ ಪ್ರದಾನ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು




ಉದಯವಾಹಿನಿ ಚಿತ್ರ



ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ಪಾಲಿಕೆ ಕೇಂದ್ರ ಕಛೇರಿಯ ಆವರಣದಲ್ಲಿ 69ನೇ ಕನ್ನಡ ರಾಜ್ಯೋತ್ಸವ ಆಚರಣೆ, ಸಾಧಕ/ ಸಾಧಕಿಯರಿಗೆ ಡಾ||ಪುನೀತ್ ರಾಜ್ ಕುಮಾರ್ ಪ್ರಶಸ್ತಿ ಪ್ರಧಾನ ಸಮಾರಂಭ, ಸಾಂಸ್ಕೃತಿಕ ಕಾರ್ಯಕ್ರಮವನ್ನು ದಿನಾಂಕ 6-11-2024ರ ಸಂಜೆ 4ಗಂಟೆಗೆ ಜರುಗಲಿದೆ.

ಉದ್ಘಾಟನೆ ಮತ್ತು ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಆಡಳಿತಗಾರರಾದ ಎಸ್.ಆರ್ ಉಮಾಶಂಕರ್, ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ರವರು ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್ ಕುಮಾರ್ ,ವಿಶೇಷ ಆಯುಕ್ತರಾದ ಸುರಳ್ಕರ್ ವಿಕಾಸ್ ಕಿಶೋರ್, ಡಾ. ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ಪ್ರೀತಿ ಗೆಹ್ಲೋಟ್, ವಲಯ ಆಯುಕ್ತರಾದ ಸ್ನೇಹಲ್ ಆರ್., ಉಪ ಆಯುಕ್ತರಾದ ಮಂಜುನಾಥ ಸ್ವಾಮಿ, ಪ್ರಧಾನ ಅಭಿಯಂತರರಾದ ಪ್ರಹ್ಲಾದ್, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್, ಬಿಬಿಎಂಪಿ ನೌಕರರ ಕನ್ನಡ ಸಂಘದ ಗೌರವಾಧ್ಯಕ್ಷರಾದ ಜೆ.ಹುಚ್ಚಪ್ಪ, ಅಧ್ಯಕ್ಷರಾದ ಸಾಯಿಶಂಕರ್ ರವರು ಚಾಲನೆ ನೀಡಲಿದ್ದಾರೆ.ಇದೇ ಸಂದರ್ಭದಲ್ಲಿ ಎ.ಅಮೃತ್ ರಾಜ್ ರವರು ಮಾತನಾಡಿ ಬಿಬಿಎಂಪಿ ನೌಕರರ ಕನ್ನಡ ಸಂಘದ ವತಿಯಿಂದ ಅದ್ದೂರಿಯಾಗಿ 69ನೇ ಕನ್ನಡ ರಾಜ್ಯೋತ್ಸವ ಮತ್ತು ಸಾಧಕ/ಸಾಧಕಿಯರಿಗೆ ಡಾ||ಪುನೀತ್ ರಾಜ್ ಕುಮಾರ್ ನೆನಪಿನಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಗುತ್ತಿದೆ. ಚಲನಚಿತ್ರ, ರಂಗಭೂಮಿ, ಸಾಹಿತ್ಯ ಮತ್ತು ಸಮಾಜಸೇವೆ ಪತ್ರಿಕೋದ್ಯಮ ಮತ್ತು ಬಿಬಿಎಂಪಿ ಅಧಿಕಾರಿ ನೌಕರರಿಗೆ ಸೇವೆಯಲ್ಲಿ ಗಣನೀಯ ಸೇವೆ ಪ್ರಶ್ರಸ್ತಿ ಪ್ರಧಾನ ಮಾಡಲಾಗುತ್ತಿದೆ.

ಕರ್ನಾಟಕ ರತ್ನ ಡಾ ಪುನೀತ್ ರಾಜ್ ಕುಮಾರ್ ಪ್ರಶಸ್ತಿ ಭಾಜನರಾದವರು ಈ ಕೆಳಕಂಡವರು ಹೆಸರುಗಳು ಇಂದ್ರಜಿತ್ ಲಂಕೇಶ್ ಚಲನಚಿತ್ರ ನಿರ್ಮಾಪಕರು, ಲಂಕೇಶ್ ಪತ್ರಿಕೆ ಪ್ರಕಾಶಕರು, ಖ್ಯಾತ ಬರಹಗಾರರು, ಪತ್ರಕರ್ತರು,ಡಾ. ರಾಜಶೇಖರ ಮಠಪತಿ, ವಿಮರ್ಶಕರು, ಲೇಖಕರು ಡಾ. ಸತ್ಯಮಂಗಲ ಮಹದೇವ, ಕವಿಗಳು, ಲೇಖಕರು ವ.ಚ. ಚನ್ನೇಗೌಡ, ಅಧ್ಯಕ್ಷರು, ಕರ್ನಾಟಕ ವಿಕಾಸರಂಗ ನಾ. ಶ್ರೀಧರ್, ಕನ್ನಡಪರ ಚಿಂತಕರು ಹಾಗೂ ಹೋರಾಟಗಾರರು ಆರ್.ಎ. ಪ್ರಸಾದ್, ಕನ್ನಡಪರ ಜನಪರ ಚಿಂತಕರು ಹಾಗೂ ಅಧ್ಯಕ್ಷರು, ಕನ್ನಡ ಅನುಷ್ಠಾನ ಮಂಡಳಿ, ಡಾ. ಜಿ. ಸುಕುಮಾರನ್, ವಕೀಲರು ಸಿ.ಎಂ. ಶಿವಕುಮಾರ್ ನಾಯ್ಕ್, ಅಧ್ಯಕ್ಷರು, ವಂದಮಾತರಂ ಸರ್ವ ಸಂಘಟನೆಗಳ ಒಕ್ಕೂಟ ಶ್ರೀಮತಿ ಗಿರಿಜಾ ಲೋಕೇಶ್, ಹಿರಿಯ ಚಲನಚಿತ್ರ ನಟಿ ಅಭಿಜಿತ್, ಹಿರಿಯ ಚಲನಚಿತ್ರ ನಟರು,ಮಂಡ್ಯ ರಮೇಶ್, ಹಿರಿಯ ಚಲನಚಿತ್ರ ಹಾಸ್ಯ ಕಲಾವಿದರು ಮಿಮಿತ್ರಿ ಗೋಪಿ, ಹಾಸ್ಯ ಕಲಾವಿದರು, ಶಿವರಾಜ್ ಕುಮಾರ್, ಟಿ.ವಿ 9 ಮೆಟ್ರೋ ಚೀಫ್ ಶ್ರೀಮತಿ ದಿವ್ಯ ರಘುನಾಥ್, ನಿರೂಪಕಿ, ವಿಸ್ತಾರ ನ್ಯೂಸ್ ಈರಣ್ಣ ಎನ್. ಛಾಯಗ್ರಾಹಕರು, ಬಿ.ಟಿವಿ, ಶ್ರೀನಿವಾಸಲು ಜಿ.ಹೆಚ್., ಛಾಯಗ್ರಾಹಕರು, ನ್ಯೂಸ್ 18 ಕನ್ನಡ, ಚಂದ್ರು, ಛಾಯಗ್ರಾಹಕರು, ಟಿವಿ.ರಘು, ಛಾಯಗ್ರಾಹಕರು, ಟಿವಿ9 ಮುನಿರಾಜು, ಛಾಯಗ್ರಾಹಕರು, ಪಬ್ಲಿಕ್ ಟಿವಿ ಅವಿರಾಜ್, ಛಾಯಗ್ರಾಹಕರು, ನ್ಯೂಸ್ ಫಸ್ಟ್, ವೆಂಕಟೇಶ್ ಎಲ್., ಛಾಯಗ್ರಾಹಕರು, ಸುವರ್ಣ ನ್ಯೂಸ್, ಗಂಗಾಧರ್, ಛಾಯಗ್ರಾಹಕರು, ಪ್ರಜಾ ಟಿವಿ ಚಂದ್ರಕಾಂತ, ಛಾಯಗ್ರಾಹಕರು, ವಿಸ್ತಾರ ನ್ಯೂಸ್ ಶ್ರೀನಿವಾಸ್, ಛಾಯಗ್ರಾಹಕರು, ರಾಜ್ ಟಿವಿ ರವಿಚಂದ್ರು, ಬಿ.ವಿ.. ಛಾಯಗ್ರಾಹಕರು, ವಿಸ್ತಾರ ನ್ಯೂಸ್ ಮಂಜುನಾಥ್, ಛಾಯಗ್ರಾಹಕರು, ರಿಪಬ್ಲಿಕ್ ಟಿವಿ

**ಬಿಬಿಎಂಪಿ ಅಧಿಕಾರಿ, ನೌಕರರ ಕ್ಷೇಮಾಭಿವೃದ್ಧಿ ಸಂಘ ಮತ್ತು ಬಿಬಿಎಂಪಿ ನೌಕರರ ಕನ್ನಡ ಸಂಘದ ಸಹಯೋಗದಲ್ಲಿ ನವಂಬರ್ 16ನೇ ತಾರೀಖು ಹರಿದ್ವಾರ, ಋಷಿಕೇಶ ಗಂಗಾತೀರದಲ್ಲಿ ರಾಷ್ಟ್ರೀಯ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಗುತ್ತಿದೆ, ಸಾವಿರಾರು ರಾಜ್ಯ ಮತ್ತು ಹೊರ ರಾಜ್ಯದ ಕನ್ನಡಿಗರು ಭಾಗವಹಿಸಲಿದ್ದಾರೆ ಎಂದು ಹೇಳಿದರು.**

# ಉಪಚುನಾವಣೆ ಫಲಿತಾಂಶ ಕಾಂಗ್ರೆಸ್ ಪರ: ಜಮೀರ್ ವಿಶ್ವಾಸ

## ಶಿಗ್ಗಾಂವಿಯ ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಅಸಮಾಧಾನಗಳು ಇಲ್ಲ. ಖಾದ್ರಿ ನಾಮಪತ್ರ ವಾಪಸ್

• **ಉದಯವಾಹಿನಿ, ಕಲಬುರಗಿ**

**ನಮಗೆ ಗೆಲ್ಲಲು ಬಹಳಷ್ಟು ಅವಕಾಶ**

ರಾಜ್ಯದಲ್ಲಿ ನಡೆಯುತ್ತಿರುವ ಮೂರು ಉಪಚುನಾವಣೆಗಳಲ್ಲಿ ಕಾಂಗ್ರೆಸ್ ಗೆಲುವು ಖಚಿತ ಎಂದು ವಕ್ಫ್ ಖಾತೆ ಸಚಿವ ಜಮೀರ್ ಅಹ್ಮದ್ ಖಾನ್ ವಿಶ್ವಾಸ ವ್ಯಕ್ತಪಡಿಸಿದರು. ನಗರಕ್ಕೆ ಭೇಟಿ ನೀಡಿರುವ ಅವರು ಸುದ್ದಿಗಾರರೊಂದಿಗೆ ಮಾತನಾಡುತ್ತಾ, ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪೂರಕವಾದ ವಾತಾವರಣವಿದೆ. ಅಲ್ಲಿ ನಮಗೆ ಗೆಲ್ಲಲು ಬಹಳಷ್ಟು ಅವಕಾಶಗಳಿವೆ.

ಅಷ್ಟೇ ಅಲ್ಲ; ನಾವು ಚನ್ನಪಟ್ಟಣದಲ್ಲಿ 25 ರಿಂದ 30 ಸಾವಿರ ಮತಗಳ ಅಂತರದಿಂದ ಗೆಲ್ಲುತ್ತೇವೆ ಎಂದರು. ನಿಖಿಲ್ ಕುಮಾರಸ್ವಾಮಿ ಅವರನ್ನು ಜನರೇ ಸೋಲಿಸುತ್ತಾರೆ. ಆ ನಿಟ್ಟಿನಲ್ಲಿ ತೀರ್ಮಾನ ಮಾಡಿಯಾಗಿದೆ ಎಂದು ನುಡಿದರು. ಕುಮಾರಸ್ವಾಮಿ ಮತದಾರರ ಅಭಿಪ್ರಾಯ ಕೇಳದೆ ಸಂಸತ್ತಿಗೆ ಹೋಗಿದ್ದಾರೆ. ಹಾಗಾಗಿ, ಚನ್ನಪಟ್ಟಣದ ಜನರು ಈಗ ಬದಲಾವಣೆ ಬಯಸುತ್ತಿದ್ದಾರೆ. ಇದಕ್ಕೆ ಪೂರಕವಾಗಿ ಸಿ.ಪಿ. ಯೋಗೇಶ್ವರ್ ಆ ತಾಲ್ಲೂಕಿಗೆ ಬಹಳಷ್ಟು ಕೆಲಸ ಮಾಡಿದ್ದಾರೆ. ಹಾಗಾಗಿ ಅವರು ನೂರಕ್ಕೆ ನೂರರಷ್ಟು ಗೆದ್ದೇ ಗೆಲ್ಲುತ್ತಾರೆ ಎನ್ನುವ ವಿಶ್ವಾಸವಿದೆ ಎಂದು ಹೇಳಿದರು. ಶಿಗ್ಗಾಂವಿಯ ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಅಸಮಾಧಾನಗಳು ಇಲ್ಲ. ಖಾದ್ರಿ ನಾಮಪತ್ರ ವಾಪಸ್ ಪಡೆದುಕೊಂಡಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಯ ಗೆಲುವಿಗಾಗಿ ಖಾದ್ರಿ ಟೊಂಕ ಕಟ್ಟಿ ನಿಂತಿದ್ದಾರೆ ಎಂದು ವಿವರಿಸಿದರು. ಮಹಾರಾಷ್ಟ್ರ ಉಪಚುನಾವಣೆ ನಡೆಯುತ್ತಿದೆ ಎನ್ನುವ ಕಾರಣಕ್ಕಾಗಿ ಬಿಜೆಪಿ ವಕ್ಫ್



ನ್ಯಾಯಾಂಗ ಹೋರಾಟದ ಕುರಿತು ಸೂಚನೆ ನೀಡಿದರು. ರೈತರಷ್ಟೇ ಅಲ್ಲ ಸಾಮಾನ್ಯ ಜನರ ಆಸ್ತಿಗಳನ್ನೂ ಸಹ ವಕ್ಫ್ ಪಡೆದುಕೊಳ್ಳುವುದಿಲ್ಲ. ಕಳೆದ ಹತ್ತಾರು ವರ್ಷಗಳಿಂದ ವಕ್ಫ್ ಆಸ್ತಿಗಳಲ್ಲಿ ಹಲವರು ಮನೆ ಕಟ್ಟಿಕೊಂಡಿದ್ದಾರೆ. ಆದರೂ, ಅಂಥವರಿಗೆ ತೊಂದರೆ ಕೊಡಬಾರದು ಎಂದು ನಾನು ಹೇಳಿದ್ದೇನೆ ಎಂದು ಮಾಹಿತಿ ನೀಡಿದರು.

ಆಸ್ತಿ ಕುರಿತು ಇಲ್ಲಸಲ್ಲದ ವದಂತಿಗಳನ್ನು ಹಬ್ಬಿಸುವ ಯತ್ನ ಮಾಡುತ್ತಿದೆ. ಇದರಿಂದ ಬಿಜೆಪಿಗೆ ಯಾವುದೇ ರೀತಿಯ ಲಾಭ ಆಗುವುದಿಲ್ಲ. ವಾಸ್ತವದಲ್ಲಿ ಜನರಿಗೆ ಬಿಜೆಪಿ ಹೇಳುತ್ತಿರುವುದು ಅರ್ಥವೇ ಆಗುತ್ತಿಲ್ಲ ಎಂದು ಲೇವಡಿ ಮಾಡಿದರು. ವಕ್ಫ್ ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚಿನಿಂದಲೂ ಇದೆ. ವಕ್ಫ್ ಬಳಿ ಇರುವುದು ಸರ್ಕಾರ ಕೊಟ್ಟಿರುವ ಜಮೀನಲ್ಲ. ದಾನಿಗಳು ಕೊಟ್ಟಿರುವ ಜಮೀನು ಮಂಡಳಿ ಬಳಿಯಿದೆ. ಇಷ್ಟಾದರೂ ಕೇಂದ್ರ ಸರ್ಕಾರ ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಹೊರಟಿದೆ. ಅದಕ್ಕಾಗಿಯೇ ಇಷ್ಟೆಲ್ಲಾ ಮಾಡಲಾಗುತ್ತಿದೆ. ವಕ್ಫ್ ಕಾಯಿದೆ ಜಾರಿಗೆ ತಂದ ನಂತರ ಮುಂದೆ ಏನು ಮಾಡಬೇಕೋ ಅದನ್ನು ಮಾಡುತ್ತೇವೆ.

**ಐದು ವರ್ಷ ಕಂಪ್ಲೀಟ್ ಮಾಡ್ತೀವಿ**

**ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮೊದಲಿನಿಂದಲೂ ರಾಜ್ಯದ ಕಾಂಗ್ರೆಸ್ ಸರಕಾರ ಆಗ ಬೀಳುತ್ತೆ, ಈಗ ಬೀಳುತ್ತೆ ಅನ್ನುತ್ತಲೇ ಬರುತ್ತಿದ್ದಾರೆ. ಅವರು ಏನೇ ಪ್ರಯತ್ನ ಮಾಡಿದರೂ ನಾವು ಐದು ವರ್ಷ ಕಂಪ್ಲೀಟ್ ಮಾಡುತ್ತೇವೆ ಎಂದು ಸಚಿವ ಜಮೀರ್ ಅಹ್ಮದ್ ನುಡಿದರು. ಕುಮಾರಸ್ವಾಮಿ ಮೊದಲಿನಿಂದಲೂ ಅದನ್ನೇ ಹೇಳಿಕೊಂಡು ಬರುತ್ತಿದ್ದಾರೆ. ಆದರೆ ಅವರು ಹೇಳಿದ ರೀತಿ ಸರ್ಕಾರ ಬಿದ್ದಿಲ್ಲವಲ್ಲ ಎಂದು ಲೇವಡಿ ದನಿಯಲ್ಲಿ ಟಾಂಗ್ ನೀಡಿದರು. ಸರ್ಕಾರ ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇನ್ನು ಬೇರೆಯವರ ಸರ್ಕಾರ ಹೇಗೆ ಅವರಿಂದ ಉರುಳಿಸಲು ಸಾಧ್ಯ ಎಂದು ಪ್ರಶ್ನಿಸಿದರು. ಕರ್ನಾಟಕದ ಜನರು ಬಿಜೆಪಿಗೆ ಯಾವತ್ತೂ ಬಹುಮತ ನೀಡಿಲ್ಲ ಎಂದು ಸಹ ಅವರು ಇದೇವೇಳೆ ಒತ್ತಿ ಹೇಳಿದರು.**

## ವಕ್ಫ್ ಬೋರ್ಡ್ ರೈತರಿಗೆ ಸಿದ್ದರಾಮಯ್ಯ ಶಾಶ್ವತ ಪರಿಹಾರ ಕಲ್ಪಿಸಲಿ

• **ಉದಯವಾಹಿನಿ, ಸಿಂಧನೂರು**



ಸಿದ್ದರಾಮಯ್ಯ ಸರ್ಕಾರ ವಕ್ಫ್ ಬೋರ್ಡ್ ತಿದ್ದುಪಡಿಯ ಸ್ವಾಗತಾರ್ಹ ಆದರೆ ಕಾಯ್ದೆ ಪ್ರಕಾರ ಕಠಿಣವಾಗಿತ್ತು. 1974ರಲ್ಲಿ ನಿಯಮ ಅನುಸಾರವಾಗಿ ನಡೆಯದೇ ತಾತ್ಕಾಲಿಕ ತಿದ್ದುಪಡಿ ರೈತರ ತಲೆಯ ಮೇಲೆ ವಕ್ಫ್ ಬೋರ್ಡ್ ಕತ್ತಿ ತೂಗಾಡುತ್ತದೆ ಎಂದು ಹೇಳಿದರು.

ನಗರದ ತಮ್ಮ ನಿವಾಸದಲ್ಲಿ ಸುದ್ದಿಗೋಷ್ಠಿ ಕರೆದು ಮಾತನಾಡಿದ ಮಾಜಿ ಸಂಸದರು ಕೆ ವಿರೂಪಾಕ್ಷಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಉಪ ಚುನಾವಣೆ ಹಿನ್ನೆಲೆಯಲ್ಲಿ ಜನರು ಮೈಂಡ್ ತಿರುಗಿಸಿ ಈಗ ರಾಜಕೀಯ ಬಣ್ಣ ಹೆಚ್ಚಿರುವುದು. ರೈತರ ಆನಂದ ಸಾಲಿನಲ್ಲಿ ಇದ್ದಾರೆ ಎಂದು ಹೇಳು ಸಿದ್ದರಾಮಯ್ಯ ಅದನ್ನೇ ಪಟ್ಟಿಯಲ್ಲಿ ಸೇರಿಸಲಿ ಸಿದ್ದರಾಮಯ್ಯನವರ ವರ್ತನೆ ಅನುಮಾನದಿಂದ ಕೊಡದೆ.ಒಂದು ಕಡೆ ಜಮೀರ್ ಅಹ್ಮದ್ ಹೇಳುತ್ತಾರೆ .ಮುಖ್ಯ ಮಂತ್ರಿ ಹೇಳಿದ ಮೇಲೆ ಮಾಡಿದ್ದೇನೆ ಹೇಳುತ್ತಾರೆ. ಇದನ್ನೇ ನೋಡಿದರೆ ತೊಟ್ಟಿನಲ್ಲಿರುವ ಮಗುವಿಗೆ ಚುಟ್ಟಿ ಸುಮ್ಮನೆ ಇರಿಸುವುದು ಸಿದ್ದರಾಮಯ್ಯನವರು ನಡೆಯಾಗದೆ. ಜಮೀರ್ ಅಹ್ಮದ್ ಅವರು ರಾಜ್ಯದ ರೈತರಲ್ಲಿ ಗೊಂದಲಕ್ಕೆ ತೆರೆ ಎಳೆದಿದ್ದಾರೆ ಎಂದು ಆರೋಪಿಸಿದರು.

ರೈತರ ನೋಟಿಸ್ ಹಿಂದೆ ತೆಗೆದು ಕೊಂಡಿದ್ದು. ತಾತ್ಕಾಲಿಕ ಇದು ಪರ್ಮಿಟ್ ವ್ಯವಸ್ಥೆ ಆಗಬೇಕಾಗಿದೆ. ಜಮೀರ್ ಅಹ್ಮದ್ ಹೇಳುತ್ತಾರೆ ರೈತರು ಜಮೀನು ನಾವು ತೆಗೆದುಕೊಳ್ಳುವುದಿಲ್ಲ ವಕ್ಫ್ ಬೋರ್ಡ್ ಭೂಮಿ ಇದ್ದರೆ ಬಿಡುವುದಿಲ್ಲ. ರೈತರು ಭೂಮಿ ಜಮೀರ್ ಅಹ್ಮದ್ ಅವರು ತಾತ ಮುತ್ತಾತಿಂದ.

ಯಾವ ಅಧಿಕಾರದ ಮೇಲೆ ರೈತರು ಪಾಣಿ ವಕ್ಫ್ ಬೋರ್ಡ್‌ಗೆ ಸೇರಿಸಿದ್ದೀರಿ. ಎಂದು ಕಿಡಿಕಾರಿದರು. 1974ರ ಕಾಯ್ದೆ ಅಡಿಯಲ್ಲಿ ಸರ್ಕಾರ ರದ್ದು ಮಾಡಿತ್ತು. ಈಗ ಕೇಂದ್ರ ಸರ್ಕಾರ ವಕ್ಫ್ ಬೋರ್ಡ್ ತಿದ್ದುಪಡಿ ಮಾಡಿದರೆ ಮಾತ್ರ ರೈತರಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಸಾಧ್ಯವಾಗು ತ್ತದೆ ಅದರಿಂದ ತಾಲ್ಲೂಕಿನ ರೈತರು ಒಂದೇ ಕಡೆ ಸೇರಿಸಿ ಶೀಘ್ರದಲ್ಲೇ ರೈತರು ಸಭೆ ಕರೆಯಲಾಗಿದೆ ಎಂದು ಹೇಳಿದರು.

**ಪತ್ರಕರ್ತರು ಪ್ರಶ್ನೆ**

**ಡಿ.ಕೆ. ಶಿವಕುಮಾರ್ ಅವರು ಹಿಂದೆ ಬಿಜೆಪಿ ಸರ್ಕಾರ ಇದ್ದಾಗಲೇ ರೈತರ ಭೂಮಿಯನ್ನು ವಕ್ಫ್ ಬೋರ್ಡ್ ಹೆಸರಿಗೆ ಭೂಮಿ ಸೇರಿಸಿದ್ದಾರೆ ಎಂದು ಪತ್ರಕರ್ತರು ಪ್ರಶ್ನೆ .. ಡಿ. ಕೆ. ಶಿವಕುಮಾರ್ ಸತ್ಯ ಸತ್ಯತೆಯನ್ನು ಅರಿತು ಎಂದಿಗೂ ಮಾತನಾಡುವುದಿಲ್ಲ. ಅವರದು ಏನೇ ಇದ್ದರೂ ಬರಿ ಗಾಳಿಯಲ್ಲಿ ಉಪ್ಪಿ ಗುಂಡು ಹಾರಿಸುವುದು ಅವರು ಕಾಯಕ ವಾಗಿದೆ ಎಂದು ಗುಡಿಗಿದರು.**

## ವಿಜಯಪುರದಲ್ಲಿ ರೈಲ್ವೆ ಸಿಬ್ಬಂದಿ ವಿಜೃಂಭಣೆಯಿಂದ ಕನ್ನಡ ರಾಜ್ಯೋತ್ಸವ ಆಚರಣೆ


• **ಉದಯವಾಹಿನಿ, ವಿಜಯಪುರ**

ಜಿಲ್ಲೆಯಲ್ಲಿ ರೈಲ್ವೆ ಸಿಬ್ಬಂದಿಗಳು ವಿಜೃಂಭಣೆಯಿಂದ ಕನ್ನಡ ರಾಜ್ಯೋತ್ಸವವನ್ನು ಆಚರಿಸಿದರು. ಈ ಮೂಲಕ ಕನ್ನಡಮ್ಮನ ಡಿಂಢಿಮದ ಕಹಳೆ ಮೊಳಗಿಸಿದರು.

ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗದ ವಿಜಯಪುರ ರೈಲ್ವೆ ನಿಲ್ದಾಣದಲ್ಲಿ ವಿಜಯಪುರ ರೈಲ್ವೆ ಸಿಂಬ್ಬಂದಿಗಳಿಂದ ತಾಯಿ ಭುವನೇಶ್ವರಿಯ 69ನೇ ಕನ್ನಡ ರಾಜೋತ್ಸವವನ್ನು ಸಡಗರ, ಸಂಭ್ರಮದಿಂದ ಅದ್ದೂರಿಯಾಗಿ ಆಚರಿಸಲಾಯಿತು.

ಎಲ್ಲರೂ ಒಗ್ಗಟಾಗಿ ಕನ್ನಡವೇ ಸತ್ಯ, ಕನ್ನಡವೇ ನಿತ್ಯ, ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ, ಕನ್ನಡವೇ ಜಾತಿ, ಕನ್ನಡವೇ ಧರ್ಮ ಹೀಗೆ ಹಲವಾರು ಘೋಷಣೆಯನ್ನು ಕೂಗುವ ಮೂಲಕ ಇಡೀ ನಿಲ್ದಾಣಕ್ಕೆ ಕಳೆಗಟ್ಟುವಂತೆ ಮಾಡಿದರು.

ಈ ಸಂದರ್ಭದಲ್ಲಿ ನಿಲ್ದಾಣದ ವ್ಯವಸ್ಥಾಪಕರಾದ ಎಂ. ವೈ. ಪಾಟೀಲ, ಸಹಾಯಕ ವಿಭಾಗೀಯ ಇಂಜಿನಿಯರ್ ಚಂದನ್ ಕುಮಾರ್ ಝಾ, ಹಿರಿಯ ಸೆಕ್ಷನ್ ಎಂಜಿನಿಯರ್ ರಾಜಕುಮಾರ್ ಜಾಧವ್, ಆರ್ ಪಿಎಫ್ ಪುಟ್ಟಸ್ವಾಮಿ ಗೌಡ, ನೈಋತ್ಯ ರೈಲ್ವೆ ಮಜ್ದೂರ್ ಸಂಘದ ಕಾರ್ಯದರ್ಶಿ ಎಂ. ಡಿ. ಆತ್ತಾರ್, ಗೂಡ್ಸ್ ಟ್ರೈನ್ ಮ್ಯಾನೇಜರ್ ಪರಶುರಾಮ ಚವ್ಹಾಣ ಭಾಗವಹಿಸಿದರು.



**ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಜಯಪುರ ರೈಲ್ವೆ ಕನ್ನಡ ಬಳಗದ ವತಿಯಿಂದ ಸತತವಾಗಿ ಐದು ದಿನಗಳ ಕಾಲ ಕ್ರಿಕೆಟ್, ಚೆಸ್, ವಾಲಿಬಾಲ್, ಕೇರಂ ಮತ್ತು ರಂಗೋಲಿ ಸ್ಪರ್ಧೆಯನ್ನು ಆಯೋಜಿಸುವ ಮೂಲಕ ಎಲ್ಲರ ಗಮನ ಸೆಳೆಯಲಾಗಿತ್ತು. ಈ ಸ್ಪರ್ಧೆಗಳಲ್ಲಿ ಭಾಗವಹಿಸಿ ವಿಜೇತರಾದವರಿಗೆ ಬಹುಮಾನ ನೀಡಲಾಯಿತು.**

## ಬಳ್ಳಾರಿ ಬೀಜಿಂಗ್‌ನಂತೆ ಆಗಬೇಕು; ಜನಾರ್ದನರೆಡ್ಡಿ

• **ಉದಯವಾಹಿನಿ, ಬಳ್ಳಾರಿ**

ರಾಜ್ಯದಲ್ಲೂ ಬಳ್ಳಾರಿ ಜಿಲ್ಲೆ ಚೀನಾದ ಬೀಜಿಂಗ್ ನಂತೆ ಆಗಬೇಕೆಂಬುದು ನಮ್ಮ ಬಯಕೆ ಎಂದು ಶಾಸಕ ಜನಾರ್ಧನರೆಡ್ಡಿ ಹೇಳಿದ್ದಾರೆ.

ಅವರು ಭಾನುವಾರ ಜಿಲ್ಲೆಯ ಸಂಡೂರು ತಾಲ್ಲೂಕಿನ ಚೋರನೂರಿನಲ್ಲಿ ಹಮ್ಮಿಕೊಂಡಿದ್ದ ಯುವ ಸಮಾವೇಶದಲ್ಲಿ ಮಾತನಾ ಡುತ್ತಿದ್ದರು. ಸಂಡೂರು ಹೊಸಪೇಟೆ ಬಳ್ಳಾರಿ ನಡು ವೆ 50 ಸಾವಿರ ಎಕರೆಯಲ್ಲಿ ಜಿಂದಾಲ್ ನಂತಹ ಹತ್ತು ಕಾರ್ಖಾನೆಗಳು ಬರಬೇಕು. ಚೀನಾದ ಬೀ ಜಿಂಗ್ ನಂತೆ ಬಳ್ಳಾರಿ ಆಗಬೇಕು. ಸ್ಥಳೀಯ ವಾಗಿ ಅ ದಿರು ಬಳಕೆ ಆಗಬೇಕು ಎಂಬುದು ನನ್ನ ಕನ ಸಾಗಿತ್ತು. ಇದರಿಂದ ಯುವ ಜನತೆಗೆ ಉದ್ಯೋಗ ದೊರಕುವಂತಾಗಬೇಕು ಎಂಬುದಾಗಿತ್ತು.

ಆದರೆ ದುರಾದೃಷ್ಟವಶಾತ್ ನನ್ನನ್ನು ಕಾಂಗ್ರೆಸ್ ನವರು ಗಣಿಗಾರಿಕೆ ಆರೋಪ ಮಾಡಿ 14 ವರ್ಷ ಜಿಲ್ಲೆಯಿಂದ ಹೊರಗಿಟ್ಟರು.



ನನಗೆ ತೊಂದರೆ ಕೊಟ್ಟವರು ನನ್ನಂತೆ ಕರ್ಮ ಅನುಭವಿಸುವ ದಿನ ಹತ್ತಿರ ಇದೆ. ಬಿಜೆಪಿಯನ್ನು ಈ ಬಾರಿ ಗೆಲ್ಲಿಸಿ ಕ್ಷೇತ್ರದ ಹಳ್ಳಿಗಳ ಅಭಿವೃದ್ಧಿ ಕಾಣಿರಿ ಎಂದರು. ಸಂಡೂರು ಠಾಣೆಯ ಸಿಪಿಐ ಮಹೇಶಗೌಡ ಕಾಂಗ್ರೆಸ್ ಪರ ಪ್ರಚಾರ ಮಾಡುತ್ತಿದ್ದಾರೆ. ಸಿಬಿಐ ಅಧಿಕಾರಿಗಳನ್ನೇ ನೋಡಿರುವ ನಾನು ಇಂತಹ ಅಧಿಕಾರಿಗಳ ಕುತಂತ್ರ ಬಲ್ಲೆ.

ಅವರಿಗೆ ಹೇಳಿರುವೆ ನಿಮ್ಮ ಈ ನಡೆ ಸರಿಯಲ್ಲ ಎಂದು. ಅವರು ಎಚ್ಚೆತ್ತುಕೊಳ್ಳಬೇಕು ಎಂದರು.

## ರಾಬರಿ ಮಾಡಿದ ಆರೋಪಿಗಳ ಬಂಧನ: 24 ಲಕ್ಷ ಮೌಲ್ಯದ ಸ್ವತ್ತು ಜಪ್ತಿ

• **ಉದಯವಾಹಿನಿ, ಹುಮನಾಬಾದ್**

ಚಿನ್ನಾಭರಣಗಳು, ಜಾನುವಾರು ಕಳವು ಪ್ರಕರಣ ಭೇದಿಸುವಲ್ಲಿ ಹುಮನಾಬಾದ್ ಪೊಲೀಸ್ ಠಾಣೆ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ ಎಂದು ಹೆಚ್ಚುವರಿ ವರಿಷ್ಠಾಧಿಕಾರಿ ಮಹೇಶ ಮೇಘಣ್ಣನವರ ತಿಳಿಸಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಶನಿವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇದೇ ವರ್ಷ ಜನವರಿಯಿಂದ ಹುಮನಾಬಾದ್ ಉಪ ವಿಭಾಗದ ವ್ಯಾಪ್ತಿಯಲ್ಲಿ ನಡೆದ ಬಂಗಾರದ ಆಭರಣಗಳು, ಕುರಿ, ಎಮ್ಮೆ, ಆಕಳು, ವಿದೇಶಿ ನೋಟುಗಳು, ವಿದ್ಯುತ್ ವೈರ್, ವಾಹನಗಳು ಸೇರಿ ಇತರೆ ಪ್ರಕರಣಗಳು ಪತ್ತೆಗಾಗಿ ನಿರಂತರ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸ್ ಸಿಬ್ಬಂದಿಗಳು ಯಶಸ್ವಿಯಾಗಿದ್ದಾರೆ ಎಂದು ತಮಾಹಿತಿ ನೀಡಿದರು. ಕಳವು ಪ್ರಕರಣದಲ್ಲಿ ಜಾನುವಾರು ಗಳನ್ನು ಕಳವು ಮಾಡಿದ್ದ ಆರೋಪಿಗಳಿಗೆ ಬಂಧಿಸಿ ಅವರಿಗೆ ದಂಡ ವಿಧಿಸಿ ಕಾನೂನು ಚೌಕಟ್ಟಿನಲ್ಲಿ ಜಾನುವಾರುಗಳನ್ನು ಕಳೆದು ಕೊಂಡ ರೈತರಿಗೆ ಹಣದ ರೂಪದಲ್ಲಿ ಹಿಂದಿರುಗಿಸುವ ಕಾರ್ಯ ಪೊಲೀಸ್ ಇಲಾಖೆಯಿಂದ ಮಾಡಲಾಗಿತ್ತಿದೆ ಎಂದರು.



ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರ್ ಮಾತನಾಡಿ, ರೈತರು ತಮ್ಮ ಹೊಲಗಳಲ್ಲಿ ದನ, ಕರುಗಳು ಸೇರಿದಂತೆ ಇತರೆ ಜಾನುವಾರುಗಳು ಮೇಯಿಸಲು ಹೊಲಗಳಲ್ಲಿ ಹೋದಾಗ ಯಾರು ಇಲ್ಲದ ಸಂದರ್ಭದಲ್ಲಿ ಅವುಗಳನ್ನು ಗಿಡ, ಮರಗಳಿಗೆ ಕಟ್ಟಿ ಹೋಗಬೇಡಿ, ಜಾಗೃತರಾಗಿ ತಮ್ಮ ತಮ್ಮ ಜಾನುವಾರಗಳನ್ನು ಸಂರಕ್ಷಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸಿಪಿಐ ಗುರುಪಾಟೀಲ್, ಅಲಿಸಾಬ್, ಅಂಬ ರೀಸ್, ನಾಗೇಂದ್ರ, ಮಹೇಂದ್ರಕುಮಾರ, ಭಾಷುಮಿಯ್ಯಾ, ವಿಜಯಕುಮಾರ ನಾಯಕ, ಸುರೇಶಕುಮಾರ, ಸುರ್ಯಕಾಂತ, ಚನ್ನಬಸವ, ರಮೇಶ ಅನೇಕರಿದ್ದರು.

**ಬೀದರ್ ಎಸ್ಪಿ ಪ್ರದೀಪ ಗುಂಟಿ ಅವರ ಮಾರ್ಗದರ್ಶದಂತೆ ಹುಮಾನಾಬದ್, ಬಸವಕಲ್ಯಾಣ ಹಾಗೂ ಚಿಟಗುಪ್ಪ ಸೇರಿದಂತೆ ಹುಮನಾಬಾದ್ ಉಪ ವಿಭಾಗದದ ಪೊಲೀಸರು ಬಿರುಸಿನ ಕಾರ್ಯರಣೆ ನಡೆಸಿ ಪ್ರಕರಣಗಳು ಭೇದಿಸಿರುವುದು ಶ್ಲಾಘನೀಯ ಕಾರ್ಯವಾಗಿದೆ.**

**–ಮಹೇಶ ಮೇಘಣ್ಣವರ**
**ಹೆಚ್ಚುವರಿ ವರಿಷ್ಠಾಧಿಕಾರಿ, ಬೀದರ್**

## ಸಂಡೂರಿನಲ್ಲಿ ಹೆಚ್ಚುತ್ತಿರುವ ಪ್ರಚಾರದ ಕಾವು

• **ಉದಯವಾಹಿನಿ, ಬಳ್ಳಾರಿ**

ನಡೆಯುತ್ತಿರುವ ಸಂಡೂರು ವಿಧಾನಸಭಾ ಕ್ಷೇತ್ರದ ಚುನಾವಣೆಯ ಬಹಿರಂಗ ಪ್ರಚಾರಕ್ಕೆ 8 ದಿನ ಬಾಕಿ ಇದ್ದು. ಚುನಾವಣಾ ಪ್ರಚಾರದ ಕಾವು ಹೆಚ್ಚತೊಡಗಿದೆ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದೆ. ಉಳಿದಂತೆ ನಾಲ್ಕು ಜನರು ಪಕ್ಷೇತರರಿದ್ದು ಅವರು ಪ್ರಚಾರದಲ್ಲಿ ಹೆಚ್ಚಾಗಿ ಕಾಣಿಸುತ್ತಿಲ್ಲ.

ದೀಪಾವಳಿ ಹಬ್ಬದ ಅಂಗವಾಗಿ ಒಂದಿಷ್ಟು ಕಡಿಮೆಯಾಗಿದ್ದ ಪ್ರಚಾರ ಕಾರ್ಯ ಇಂದಿನಿಂದ ಬಿರುಸು ಪಡೆಯಲಿದೆ. ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಬಂಗಾರು ಹನುಮಂತ ಪರವಾಗಿ ಬಿಜೆಪಿಯ ರಾಜ್ಯ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಯುವ ಸಮಾವೇಶ ನಡೆಸಿ ಪಕ್ಷದ ಅಭ್ಯರ್ಥಿಗೆ ಮತ ನೀಡುವಂತೆ ಮನವಿ ಮಾಡಿದರು.

ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಒಂದು ಕೋಮಿನ ತುಷ್ಟೀಕರಣಕ್ಕಾಗಿ ತಲಾ ತಲಾಂತರದಿಂದ ಬಂದ ರೈತರ ಜಮೀನನ್ನು ವಕ್ಫ್‌ಗೆ ಸೇರಿದ್ದು ಎಂದು ರೈತರನ್ನು ವಕ್ಕಲೆಬ್ಬಸಲು ಮುಂದಾಗಿದೆ. ಸಧ್ಯ ಇದನ್ನು ಹಿಂದಕ್ಕೆ ಪಡೆಯುವುದಾಗಿ ಹೇಳಿದ್ದರೂ ಚುನಾವಣೆ ನಂತರ ಮುಂದುವರೆಯುವ ಸಾಧ್ಯತೆ ಇದೆ. ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲು ಕೇಂದ್ರದ ಬಿಜೆಪಿ ಸರ್ಕಾರ ನಿರ್ಧರಿಸಿದ್ದು. ರೈತ ಸಮೂಹ ಇದಕ್ಕೆ ಬೆಂಬಲವಾಗಿ ನಿಂತು ಪಕ್ಷದ ಅಭ್ಯರ್ಥಿಗೆ ಮತ ನೀಡಿ ಎಂದು ಮನವಿ ಮಾಡಿದರು.




ಸಮಾರಂಭದಲ್ಲಿ ಪಕ್ಷದ ಅಭ್ಯರ್ಥಿ, ಶಾಸಕ ಅರವಿಂದ ಬೆಲ್ಲದ, ಜನಾರ್ಧನರೆಡ್ಡಿ, ಮಾಜಿ ಸಚಿವ ಶ್ರೀರಾಮುಲು ಪಕ್ಷದ ಮಾಜಿ ಸಂಸದ ಸಣ್ಣ ಪಕ್ಕೀರಪ್ಪ, ಪಕ್ಷದ ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು, ಮುಖಂಡರುಗಳಾದ ಗುತ್ತಿಗನೂರು ವಿರೂಪಾಕ್ಷಗೌಡ, ಎರ್ರಂಗಳಿ ತಿಮ್ಮಾರೆಡ್ಡಿ ಚೋರನೂರಿನ ಹೆಚ್.ಎಂ.ಮಂಜುನಾಥ ಹಿರೇಮಠ, ನರೇಂದ್ರ ಪಾಟೀಲ್, ಅಡಿವೆಪ್ಪ, ಕಾರ್ತಿಕ್, ಗಂಡಿಮಾರೆಪ್ಪ, ಮಲ್ಲಿಕಾರ್ಜುನ, ಜೆ.ನಾಗ ರಾಜ್, ರಾಮಾಂಜಿನಪ್ಪ, ಕುಮಾರಸ್ವಾಮಿ, ಪ್ರಕಾಶ ಬೊಮ್ಮಗಟ್ಟ, ಮೊದಲಾದವರು ಇದ್ದರು.

ಸಂಜೆ ಸಂಡೂರಿನಲ್ಲಿ ರೋಡ್ ಶೋ ಹಮ್ಮಿಕೊಂಡಿದ್ದಾರೆ. ಸಂಸದ ತುಕರಾಂ ನಾಲ್ಕು ಬಾರಿ ತಮ್ಮನ್ನು ಆಯ್ಕೆ ಮಾಡಿದಂತೆ ಶಾಸಕರು ಸಂಸದರು ಒದೇ ಮನೆಯಲ್ಲಿ ನಿಮ್ಮ ಸೇವೆ ಮಾಡಲು ಅನ್ನಪೂರ್ಣಗೆ ಮತ ನೀಡಿ ಎಂದರು. ನಿಮ್ಮ ಹಳ್ಳಿಗಳಿಗೆ ತಮಗಭದ್ರ ಜಲಾಶಯದಿಂದ ಕುಡಿಯುವ ನೀರು ತರುವ ಯೋಜನೆ ಚುನಾವಣೆ ನಂತರ ಜಾರಿಗೆ ಬರಲಿದೆಂದು ಹೇಳಿದರು.

**ಬಡ ವಾಲ್ಮೀಕಿ ಜನಾಂಗದ ಯುವ ಸಮುದಾಯ ಸ್ವಯಂ ಉದ್ಯೋಗ ಕೈಗೊಳ್ಳಲು ಮೀಸಲಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಣವನ್ನು ದುರ್ಬಳಕೆ ಮಾಡಿಕೊಂಡು ಕಳೆದ ಎಂಪಿ ಚುನಾವಣೆಯಲ್ಲಿ ಗೆದ್ದಿದ್ದಾರೆ ಇಂತಹವರನ್ನು ಅಧಿಕಾರದಿಂದ ದೂರವಿಡಿ ಎಂದರು.**

## ನಾಗಠಾಣದಲ್ಲಿ ಜಾತ್ರೆ: ಭಂಡಾರದಲ್ಲಿ ಮಿಂದೆದ್ದ ಭಕ್ತಗಣ

• **ಉದಯವಾಹಿನಿ, ವಿಜಯಪುರ**



ಉತ್ತರ ಕರ್ನಾಟಕದ ಜಾತ್ರೆಗಳು ವಿಶೇಷತೆಯಿಂದ ಕೂಡಿರುತ್ತವೆ. ಅದರಲ್ಲಿ ದೀಪಾವಳಿ ಹಬ್ಬದ ನಿಮಿತ್ತ ವಿಜಯಪುರ ತಾಲ್ಲೂಕಿನ ನಾಗಠಾಣ ಗ್ರಾಮದಲ್ಲಿ ಶ್ರೀ ಭೀರದೇವರ, ಶ್ರೀ ಪರಮಾನಂದ ದೇವರ ಜಾತ್ರೆಗೆ ಕರ್ನಾಟಕ ಮಾತ್ರವಲ್ಲದೇ ಮಹಾರಾಷ್ಟ್ರ, ಗೋವಾ ಸೇರಿದಂತೆ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಇಲ್ಲಿಗೆ ಆಗಮಿಸಿ ಭಕ್ತಿಭಾವದಲ್ಲಿ ಮಿಂದೇಳುವ ದೃಶ್ಯ ಮನಮೋಹಕವಾಗಿತ್ತು.

ಇದು ಭಂಡಾರದೊಡೆಯನ ಜಾತ್ರೆ ಎಂದೇ ಪ್ರಸಿದ್ಧಿಯಾಗಿದೆ. ದೀಪಾವಳಿ ಅಮವಾಸ್ಯೆ ದಿನ ಭೀರದೇವರ ಹಾಗೂ ಪಾಡ್ಯ ದಿನ ಪರಮಾನಂದ ದೇವರ ಶೃಂಗಾರ ಚೌಕಿಯೊಂದಿಗೆ ಸಾರವಾಡ ಗೊಂಬೆ ಕುಣಿತ, ಕರಡಿ ಮಜಲು, ಡೊಳ್ಳು ವಾದ್ಯದೊಂದಿಗೆ ಭಕ್ತರ ಮನೆಗೆ ದರ್ಶನ ಕೊಡುತ್ತಾ, ಗಂಗೆ ಸೀತಾಳದಲ್ಲಿ ಪೂಜೆ ಮುಗಿಸಿ, ಬಜಾರಕ್ಕೆ ಆಗಮನವಾಗಿ, ಅಲ್ಲಿ ಭಕ್ತರಿಗೆ ದರ್ಶನ ಕೊಟ್ಟು ನಂತರ ಗುಡಿಗೆ ಬರುವ ಸಂದರ್ಭದಲ್ಲಿ ಭಕ್ತರು ಚೌಕಿ ಮತ್ತು ಪಲ್ಲಕ್ಕಿಗಳ ಮೇಲೆ ರಾಶಿ ರಾಶಿಗಟ್ಟಲೆ ಭಂಡಾರ, ಖಾರಿಕ, ಕುರಿ ಉಣ್ಣೆಯನ್ನು ಹಾರಿಸುವುದು ವಾಡಿಕೆ ಎನ್ನುತ್ತಾರೆ ಜಾತ್ರಾ ಕಮೀಟಿಯ ಅಧ್ಯಕ್ಷ ಪ್ರಭುಲಿಂಗ ಹಂಡಿ. ಈ ಜಾತ್ರೆಯಲ್ಲಿ ಡೊಳ್ಳಿನ ಹಾಡಿಕೆ, ಭಾರ ಎತ್ತುವದು, ಜಂಗಿ ಕುಸ್ತಿ, ಕಬಡ್ಡಿ, ಕ್ರಿಕೆಟ್, ಗುಡ್ಡಗಾಡು ಓಟ, ಸಾಮಾಜಿಕ ನಾಟಕದಂತಹ ಕಾರ್ಯಕ್ರಮಗಳು ಭಕ್ತರ ಮನ ಗೆದ್ದಿವೆ.

ಭಕ್ತರು ದೇವರ ಬಳಿ ಬೇಡಿಕೊಂಡ ಹರಕೆಗಳನ್ನು ತೀರಿಸುವ ದೃಶ್ಯ ಸಾಮಾನ್ಯವಾಗಿತ್ತು.

ಜಾತ್ರಾ ಕಮೀಟಿ ಹಾಗೂ ಪರಮಾನಂದ ದಾಸೋಹ ಸಮಿತಿ ವತಿಯಿಂದ ನಿರಂತರ ಅನ್ನ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಯಾವುದೇ ಜಾತಿ, ಮತ, ಪಂಥ ಭೇದವಿಲ್ಲದೇ ಎಲ್ಲರೂ ಈ ಜಾತ್ರೆಯಲ್ಲಿ ಭಾಗಿಯಾಗುವುದು ವಿಶೇಷ. ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಭಕ್ತರು ಭಂಡಾರವನ್ನು ದೇವಾಲಯ ಹಾಗೂ ದೇವರ ಮೇಲೆ ಎಸೆಯುವುದು ಇಲ್ಲಿನ ಸಂಪ್ರದಾಯ. ಭಂಡಾರದಲ್ಲಿ ಮಿಂದೆದ್ದ ಭಕ್ತರು ತಮ್ಮ ಜೀವನ ಪಾವನವಾಯಿತು ಎಂಬುದು ಭಕ್ತರ ನಂಬಿಕೆ. ಬೀರಪ್ಪ ಮತ್ತು ಪರಮಾನಂದ ದೇವರು ಭಕ್ತರ ಪಾಲಿಗೆ ಕಲ್ಪವೃಕ್ಷ.ಜಾತ್ರೆಯಲ್ಲಿ ಕಮೀಟಿಯ ಸರ್ವ ಪದಾಧಿಕಾರಿಗಳು, ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

# ಕುಮಾರಸ್ವಾಮಿಗೆ ಕಣ್ಣೀರು ಬರುವುದು ಚುನಾವಣೆ ಇದ್ದಾಗ ಮಾತ್ರ

## ಚನ್ನಪಟ್ಟಣ, ರಾಮನಗರದ ಜನ ಅವರನ್ನು ಶಾಸಕರನ್ನಾಗಿ ಆರಿಸಿದರೂ, ಜಿಲ್ಲೆಗೆ ರಾಷ್ಟ್ರ ಧ್ವಜ, ಕನ್ನಡಧ್ವಜ ಹಾರಿಸಲು ಏಕೆ ಬರಲಿಲ್ಲ

• **ಉದಯವಾಹಿನಿ, ಮಂಗಳೂರು**

ಎಚ್.ಡಿ. ಕುಮಾರಸ್ವಾಮಿ ಅವರಿಗೆ ಕಣ್ಣೀರು ಬರುವುದು ಚುನಾವಣೆ ಇದ್ದಾಗ ಮಾತ್ರ. ಚನ್ನಪಟ್ಟಣದ ಜನರು ಕಣ್ಣೀರು ಹಾಕಿದಾಗ ಅವರು ಎಲ್ಲಿಗೆ ಹೋಗಿದ್ದರು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದ್ದಾರೆ. ಮಂಗಳೂರಿನ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚನ್ನಪಟ್ಟಣ ಅಥವಾ ರಾಮನಗರದ ಜನ ಅವರನ್ನು ಶಾಸಕರನ್ನಾಗಿ ಆರಿಸಿದರೂ, ಜಿಲ್ಲೆಗೆ ರಾಷ್ಟ್ರ ಧ್ವಜ, ಕನ್ನಡಧ್ವಜ ಹಾರಿಸಲು ಏಕೆ ಬರಲಿಲ್ಲ.

ಚನ್ನಪಟ್ಟಣದ ಜನರ ಅಭಿವೃದ್ಧಿಗೆ ಯಾವುದಾದರೂ ಒಂದು ಕೆಲಸ ಮಾಡಿದ್ದಾರಾ ಕುಮಾರಸ್ವಾಮಿ ಅಲ್ಲಿನ ಯಾವ ಕೆರೆಗೆ ನೀರು ತುಂಬಿಸಿದ್ದಾರೆ ಚನ್ನಪಟ್ಟಣ ಕ್ಷೇತ್ರದ ಕೆರೆಗಳಿಗೆ ನೀರು ತುಂಬಿಸಿದ್ದು ಯೋಗೇಶ್ವರ್ ಅವರು. ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗಲೇ ಆ ಕ್ಷೇತ್ರಕ್ಕೆ ಸಣ್ಣ ಕೆಲಸವನ್ನೂ ಮಾಡಿಲ್ಲ. ಕೇವಲ ಶಾಸಕರಾಗಿದ್ದಾಗ ಬಿಜೆಪಿ ಜತೆ ಹೊಂದಾಣಿಕೆ ಮಾಡಿಕೊಂಡಿದ್ದ ಕುಮಾರಸ್ವಾಮಿ ಅನುದಾನ ತಂದು ಕೆಲಸ ಮಾಡಬೇಕಿತ್ತಲ್ಲವೇ ಏಕೆ ಮಾಡಲಿಲ್ಲ' ಎಂದು ಪ್ರಶ್ನಿಸಿದ್ದಾರೆ.'ಚನ್ನಪಟ್ಟಣದಲ್ಲಿ ಕುಮಾರಸ್ವಾಮಿ ಹಾಗೂ ಅವರ ಪತ್ನಿ ಪ್ರತಿನಿಧಿಸಿದ್ದರು. ಈಗಿನ ಅಭ್ಯರ್ಥಿಗೂ ಚನ್ನಪಟ್ಟಣಕ್ಕೂ ಸಂಬಂಧವಿಲ್ಲ. ಅವರು ಮಂಡ್ಯ ಹಾಗೂ ರಾಮನಗರದಲ್ಲಿ ಸೋತಿದ್ದಾರೆ' ಎಂದು ನಿಖಿಲ್ ವಿರುದ್ಧ ಡಿಕೆಶಿ ವಾಗ್ದಾಳಿ ನಡೆಸಿದ್ದಾರೆ.



ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರಕ್ಕೆ ಏನು ಮಾಡಿದ್ದಾರೆ ಎಂದು ಹೇಳಬೇಕು. ಯೋಗೇಶ್ವರ್ ಪಕ್ಷಾಂತರಿ ಇರಬಹುದು, ಇಲ್ಲ ಎಂದು ಹೇಳುವುದಿಲ್ಲ. ಕಾಂಗ್ರೆಸ್‌ನಲ್ಲಿ ಇದ್ದವರು ಸಮಾಜವಾದಿ ಪಕ್ಷ, ಬಿಜೆಪಿ ಪಕ್ಷಕ್ಕೆ ಹೋಗಿದ್ದರು. ಎನ್ಡಿಎ ಮೈತ್ರಿ ಸರಿಯಿಲ್ಲ, ಕುಮಾರಸ್ವಾಮಿ ಸರಿಯಿಲ್ಲ. ಕ್ಷೇತ್ರಕ್ಕೆ ಕಾಂಗ್ರೆಸ್ ಸರ್ಕಾರದಿಂದ ಒಳ್ಳೆಯದಾಗಲಿದೆ ಎಂದು ಈಗ ಮತ್ತೆ ನಮ್ಮ ಪಕ್ಷಕ್ಕೆ ಬಂದಿದ್ದಾರೆ. ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ. ಈ ಬಗ್ಗೆ ಮಂತ್ರಿಗಳ ಜತೆ ಚರ್ಚೆ ಮಾಡುತ್ತೇವೆ ಎಂದು ನಾನು ಹೇಳಿದ್ದೆ. ನಮ್ಮ ಯಾವುದೇ ಗ್ಯಾರಂಟಿ ಯೋಜನೆಗಳನ್ನು ಹಿಂಪಡೆಯುವ ಪ್ರಶ್ನೆಯೇ ಇಲ್ಲ. ಈ ಯೋಜನೆಯನ್ನು ನಾವು ಮಂಗಳೂರಿನಲ್ಲೇ ಘೋಷಣೆ ಮಾಡಿದ್ದು, ಇದನ್ನು ನಿಲ್ಲಿಸುವುದಿಲ್ಲ. ಮುಂದಿನ ಅವಧಿಯ ಐದು ವರ್ಷವೂ ಈ ಯೋಜನೆ ಮುಂದುವರಿಯಲಿದೆ. ಕಾಂಗ್ರೆಸ್ ಸರ್ಕಾರ ನೀಡುತ್ತಿರುವ ವೃದ್ಧಾಪ್ಯವೇತನ, ವಿಧವಾ ಪಿಂಚಣಿ, ಉಳುವವನಿಗೆ ಭೂಮಿ, ಬಡವರಿಗೆ ನಿವೇಶನ, ಮನೆ ನೀಡುವ ಕಾರ್ಯಕ್ರಮ ಜಾರಿ ಮಾಡಿದ್ದು, ಇಂದಿಗೂ ಈ ಯೋಜನೆಗಳು ಜಾರಿಯಲ್ಲಿವೆ. ಯಾವುದನ್ನೂ ನಾವು ಹಿಂಪಡೆದಿಲ್ಲ. ಬಿಜೆಪಿ ಅಧಿಕಾರದಲ್ಲಿದ್ದಾಗಲೂ ನಮ್ಮ ಕಾರ್ಯಕ್ರಮ ನಿಲ್ಲಿಸಲು ಆಗಿಲ್ಲ. ನಮ್ಮ ಕಾರ್ಯಕ್ರಮಗಳು ಬದುಕು ಕಟ್ಟುವ ಕಾರ್ಯಕ್ರಮ. ಬಿಜೆಪಿಯವರು ಕೇವಲ ಭಾವನೆ ಮೇಲೆ ರಾಜಕೀಯ ಮಾಡುತ್ತಾರೆ' ಎಂದು ಗುಡುಗಿದ್ದಾರೆ.

ಚನ್ನಪಟ್ಟಣ ತಾಲ್ಲೂಕಿನ ಜನ ವಿದ್ಯಾವಂತರು, ಪ್ರಜ್ಞಾವಂತರಿದ್ದಾರೆ. ನಮ್ಮ ಸರ್ಕಾರ ಅವರ ಸೇವೆ ಮಾಡಲು ಮನೆ ಬಾಗಿಲಿಗೆ ಹೋಗಿದೆ. 22 ಸಾವಿರ ಜನ ತಮ್ಮ ಕಷ್ಟವನ್ನು ನಮ್ಮ ಬಳಿ ಹೇಳಿಕೊಂಡಿದ್ದಾರೆ. ನೂರಾರು ಕೋಟಿ ಅಭಿವೃದ್ಧಿ ಕೆಲಸ ಪ್ರಾರಂಭವಾಗಿದೆ. ಬಡವರಿಗೆ ನಿವೇಶನ ನೀಡಲಾಗುತ್ತಿದೆ' ಎಂದಿದ್ದಾರೆ.ನಮ್ಮ ಸರ್ಕಾರ ರಾಜ್ಯದ ಎಲ್ಲಾ ವರ್ಗದ ಜನರಿಗೆ ಐದು ಗ್ಯಾರಂಟಿ ಯೋಜನೆ ನೀಡುತ್ತಿದ್ದೇವೆ.

ನಮ್ಮ ಗ್ಯಾರಂಟಿ ಯೋಜನೆಗಳು ದೇಶಕ್ಕೆ ಮಾದರಿ. ಜನತಾದಳದಲ್ಲಿ ಭವಿಷ್ಯವಿಲ್ಲ ಎಂದು ಅನೇಕ ಕಾರ್ಯಕರ್ತರು ಕಾಂಗ್ರೆಸ್ ಪಕ್ಷ ಸೇರುತ್ತಿದ್ದಾರೆ.

**ಅಧಿಕಾರಿಗಳ ತಪ್ಪು ಸರಿಮಾಡುತ್ತೇವೆ**

**ವಕ್ಫ್ ಆಸ್ತಿ ರಾಷ್ಟ್ರೀಕರಣ ಮಾಡಬೇಕು ಎಂಬ ಯತ್ನಾಳ್ ಅವರ ಪತ್ರದ ಬಗ್ಗೆ ಕೇಳಿದಾಗ, 'ಮಾನಸಿಕ ಅಸ್ವಸ್ಥರ ಹೇಳಿಕೆ ಬಗ್ಗೆ ಮಾತನಾಡುವುದಿಲ್ಲ. ಈ ವಿಚಾರವಾಗಿ ರೈತರಿಗೆ ಮೊದಲು ನೋಟಿಸ್ ನೀಡಿದ್ದು ಬಿಜೆಪಿ ಸರ್ಕಾರ. ನಾವು ಯಾವುದೇ ರೈತರಿಗೆ ಅನ್ಯಾಯವಾಗಲು ಬಿಡುವುದಿಲ್ಲ. ಅಧಿಕಾರಿಗಳು ಮಾಡಿರುವ ತಪ್ಪನ್ನು ನಾವು ಸರಿಪಡಿಸುತ್ತೇವೆ' ಎಂದು ತಿಳಿಸಿದ್ದಾರೆ.**

**ಗ್ಯಾರಂಟಿ ಬಗ್ಗೆ ಟೀಕೆ**

**ಗ್ಯಾರಂಟಿ ಯೋಜನೆ ಬಗ್ಗೆ ಪ್ರಧಾನಿ ಮೋದಿ ಅವರು ಟೀಕಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಡಿಕೆಶಿ, 'ಮೋದಿಯವರು ಚುನಾವಣೆಗಾಗಿ ಏನು ಬೇಕಾದ್ರೂ ಹೇಳಲಿ. ಅವರ ಆರೋಪದಲ್ಲಿ ಯಾವುದೇ ಉರುಳಿಲ್ಲ. ನಮ್ಮ ಗ್ಯಾರಂಟಿ ಯೋಜನೆಗಳು ಜನರ ಹೊಟ್ಟೆ ತುಂಬಿಸಿ, ಬದುಕು ಕಟ್ಟುತ್ತಿವೆ. ಆಮೂಲಕ ದೇಶದ ಅಭಿವೃದ್ಧಿಗೆ ಕಾರಣವಾಗಿವೆ. ಆರ್ಥಿಕವಾಗಿ ಸಬಲವಾಗಿರುವವರು ದೊಡ್ಡ ಕಂಪನಿಯ ಉದ್ಯೋಗಸ್ಥ ಮಹಿಳೆಯರು ನಮಗೆ ಸಾರಿಗೆ ಭತ್ಯೆ ಸಿಗುತ್ತಿದೆ. ನಮಗೆ ಶಕ್ತಿ ಯೋಜನೆ ಅಗತ್ಯವಿಲ್ಲ ಎಂದು ಹೇಳಿದ್ದಾರೆ.**

## ಮಿನಿ ನ್ಯೂಸ್

### ಅಥಣಿ ರೈತರಿಗೂ ಶಾಕ್ ಕೊಟ್ಟ ವಕ್ಫ್ ಬೋರ್ಡ್..!

• **ಉದಯವಾಹಿನಿ, ಬೆಳಗಾವಿ**

ಅಥಣಿ ತಾಲ್ಲೂಕಿನ ರೈತರಿಗೂ ವಕ್ಫ್ ಬೋರ್ಡ್ ಶಾಕ್ ಕೊಟ್ಟಿದೆ. ಶಿರಹಟ್ಟಿ ಗ್ರಾಮದ ರೈತ ಬಸವರಾಜ ಅಡಿವೆಪ್ಪ ಕೊಹಳ್ಳಿ ಅವರ ಜಮೀನನ್ನು ವಕ್ಫ್ ತನ್ನದು ಎಂದಿದೆ. 7 ಎಕರೆ 31 ಗುಂಟೆ ಜಮೀನು ಹೊಂದಿ ರುವ ಬಸವರಾಜ, ಅವರ ಅಣ್ಣತಮ್ಮಂದಿರ ಹೆಸರಿನಲ್ಲಿರುವ ಪಹಣಿ ಪತ್ರದಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದೆ. ಈ ಹಿನ್ನೆಲೆಯಲ್ಲಿ ರೈತನ ಕುಟುಂಬಕ್ಕೆ ಆತಂಕ ಎದುರಾಗಿದೆ. ಸದ್ಯ ಸರ್ಕಾರ ಪಹಣಿಯಲ್ಲಿ ನಮೂದಾಗಿರುವ ವಕ್ಫ್ ಆಸ್ತಿಯನ್ನು ತಕ್ಷಣ ತೆಗೆದು ಹಾಕುವಂತೆ ರೈತರು ಆಗ್ರಹಿಸಿದ್ದಾರೆ.

### ಲಾರಿಗೆ ಡಿಕ್ಕಿ ಹೊಡೆದ ಟೂರಿಸ್ಟ್ ಬಸ್ 17 ಪ್ರವಾಸಿಗರಿಗೆ ಗಾಯ

• **ಉದಯವಾಹಿನಿ, ಉಡುಪಿ**

ಕೊಲ್ಲೂರು ಮೂಕಾಂಬಿಕೆ ದೇವಸ್ಥಾನಕ್ಕೆ ಪ್ರವಾಸಿಗರ ಬಸ್ ಒಂದು ತೆರಳುತ್ತಿತ್ತು. ಈ ವೇಳೆ ನಸುಕಿನ ಜಾವ ರಸ್ತೆ ಬದಿಗೆ ನಿಂತಿದ್ದ ಲಾರಿಗೆ ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ ಬಸ್ ನಲ್ಲಿದ್ದ 17 ಪ್ರವಾಸಿಗರಿಗೆ ಗಾಯಗಳಾಗಿರುವ ಘಟನೆ ಉಡುಪಿ ಜಿಲ್ಲೆಯ ಕಾಪು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ. ಹೌದು ಲಾರಿಗೆ ಟೂರಿಸ್ಟ್ ಬಸ್ ಡಿಕ್ಕಿ ಹೊಡೆದು 17 ಪ್ರವಾಸಿಗರು ಗಂಭೀರವಾಗಿ ಗಾಯಗೊಂಡಿದ್ದಾರೆ. ಉದ್ಯಾವರ ಬಳಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಈ ಒಂದು ಅಪಘಾತ ನಡೆದಿದೆ. ಪ್ರವಾಸಿಗರ ಬಸ್ ಕೊಲ್ಲೂರು ದೇವಾಲಯಕ್ಕೆ ತೆರಳುತ್ತಿತ್ತು.

ನಸುಕಿನ ವೇಳೆ ರಸ್ತೆ ಬದಿ ನಿಂತಿದ್ದ ಲಾರಿಗೆ ಪ್ರವಾಸಿಗರ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಪ್ರವಾಸಿಗರ ಬಸ್ ನುಜ್ಜುಗುಜ್ಜಾಗಿದೆ ತಕ್ಷಣ ಗಾಯಾಳುಗಳನ್ನ ಉಡುಪಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆ ಕುರಿತಂತೆ ಕಾಪು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ವಕ್ಫ್ ವಿವಾದ: ಸ್ಲಂ ಬೋರ್ಡ್ ನಿವೇಶನ ಹಕ್ಕು ಪತ್ರ ವಿತರಣೆ ಕಾರ್ಯಕ್ರಮ ರದ್ದು

• **ಉದಯವಾಹಿನಿ, ರಾಯಚೂರು**

ರಾಜ್ಯದಲ್ಲಿ ವಕ್ಫ್ ವಿವಾದ ಭುಗಿಲೆದ್ದ ಹಿನ್ನೆಲೆಯಲ್ಲಿ ನಿನ್ನೆ ವಕ್ಫ್ ಮಂಡಳಿ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ರೈತರಿಗೆ ನೀಡಿದ ನೋಟಿಸ್‌ಗಳನ್ನು ಕೂಡಲೇ ಹಿಂಪಡೆಯಿರಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಇದರ ಬೆನ್ನಲ್ಲೆ, ರಾಯಚೂರಲ್ಲಿ ಸ್ಲಂ ಬೋರ್ಡ್ ನಿವೇಶನ ಹಕ್ಕು ವಿತರಣಾ ಕಾರ್ಯಕ್ರಮ ರದ್ದಾಗಿದೆ. ಹೌದು ರಾಯಚೂರಿನ ಮಸ್ಕಿಯಲ್ಲಿ ಈ ಒಂದು ಕಾರ್ಯಕ್ರಮ ನಡೆಯಬೇಕಿತ್ತು. 263 ಜನರ ನಿವೇಶನ ಹಕ್ಕು ಪತ್ರ ವಿತರಣೆಗೆ ಕಾರ್ಯಕ್ರಮ ನಿಗದಿ ಮಾಡಲಾಗಿತ್ತು. ವಸತಿ ಇಲಾಖೆ, ಸ್ಲಂ ಬೋರ್ಡ್ ಈ ಒಂದು ಸಮಾರಂಭ ಆಯೋಜನೆ ಮಾಡಿತ್ತು. ಸ್ಲಂ ಬೋರ್ಡ್ ಕೆಲವು ನಿವೇಶನಗಳು ವಕ್ಫ್ ಆಸ್ತಿ ಎಂದು ನಮೂದಾಗಿದ್ದರಿಂದ ಸದ್ಯ ಕಾರ್ಯಕ್ರಮವನ್ನು ರದ್ದುಗೊಳಿಸಲಾಗಿದೆ.

ವಕ್ಫ್ ಆಸ್ತಿ ಅಂತ ನಿವೇಶನ ಹಂಚಿಕೆ ಕಾರ್ಯಕ್ರಮ ರದ್ದಾಗಿದೆ. ಕಾಂಗ್ರೆಸ್ ಶಾಸಕ ಬಸನಗೌಡ ತುರುವಿಹಾಳ ಅಧ್ಯಕ್ಷತೆಯಲ್ಲಿ ಒಂದು ಕಾರ್ಯಕ್ರಮ ನಡೆಯಬೇಕಿತ್ತು. ಆದರೆ ಇದೀಗ ಕಾರ್ಯಕ್ರಮ ರದ್ದಾಗಿದೆ. ಹಕ್ಕು ಪತ್ರ ವಿತರಣೆಗಾಗಿ ಆಹ್ವಾನ ಪತ್ರಿಕೆ ಇಲಾಖೆಯು ಮುದ್ರಿಸಿತ್ತು. ವಕ್ಫ್ ಆಸ್ತಿ ಎಂಬ ಕಾರಣದಿಂದ ಸಚಿವ ಜಮೀರ್ ಅಹ್ಮದ್ ಕಾರ್ಯಕ್ರಮ ರದ್ದು ಮಾಡಿದ ಆರೋಪ ಕೇಳಿ ಬಂದಿದೆ.

### ರಾಜ್ಯೋತ್ಸವದಂದು ಕರಾಳ ದಿನ 46 ಎಂಇಎಸ್ ಮುಖಂಡರ ವಿರುದ್ಧ ದೂರು

• **ಉದಯವಾಹಿನಿ, ಬೆಳಗಾವಿ**

ಕರಾಳ ದಿನಾಚರಣೆ ಮಾಡಿದ ಹಿನ್ನೆಲೆಯಲ್ಲಿ ಎಂಇಎಸ್‌ನ 46 ಎಂಇಎಸ್ ಮುಖಂಡರ ವಿರುದ್ಧ ಬೆಳಗಾವಿ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಎಂಇಎಸ್ ಕಾರ್ಯಕರ್ತರು ನವೆಂಬರ್ 1 ಕನ್ನಡ ರಾಜ್ಯೋತ್ಸವ ದಿನದಂದು ಜಿಲ್ಲಾಡಳಿತ ಅನುಮತಿ ಇಲ್ಲದೇ ಕರಾಳ ದಿನ ಮೆರವಣಿಗೆ ಮಾಡಿದ್ದರು. ನಗರದ ಧರ್ಮವೀರ ಸಂಭಾಜಿ ಮೈದಾನದಿಂದ ಮರಾಠಾ ಮಂದಿರವರೆಗೂ ಮೆರವಣಿಗೆ ಮಾಡಿದ್ದರು.

ಈ ವೇಳೆ ಎಂಇಎಸ್ ಕಾರ್ಯಕರ್ತರು ಕರ್ನಾಟಕ ಸರ್ಕಾರದ ಸಾರ್ವಭೌಮತ್ವ, ಕನ್ನಡಿಗರ ಭಾವನೆಗಳಿಗೆ ಧಕ್ಕೆ ಉಂಟು ಮಾಡಿದ್ದರು ಕಿಡಿಕಾರಿದ್ದರು. ಮಹಾರಾಷ್ಟ್ರ ಸರ್ಕಾರದ ಪರವಾಗಿ ಘೋಷಣೆ ಕೂಗಿದ್ದರು. ಕಾರ್ಯಕರ್ತರು ಬೆಳಗಾವಿ ಗಡಿ ಪ್ರದೇಶಗಳನ್ನು ಮಹಾರಾಷ್ಟ್ರ ಸೇರಿಸುವಂತೆ ಘೋಷಣೆ ಹಾಕಿದ್ದರು. ಈ ಹಿನ್ನೆಲೆಯಲ್ಲಿ ಮಾಜಿ ಶಾಸಕ ಮನೋಹರ ಕಿಣೇಕರ, ಎಮ್ಇಡಿ ಮುಖಂಡ ಶುಭಂ ಶಳಕೆ, ರಮಾಕಾಂತ ಕೊಂಡುಸ್ಕರ, ವಿಕಾಸ ಕಲಘಟಗಿ ಶಿವಸೇನೆ ಮುಖಂಡ ಪ್ರಕಾಶ ಮರಗಾಳೆ ಸೇರಿದಂತೆ 46 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

### ಗೃಹಲಕ್ಷ್ಮಿ ಹಣದಲ್ಲಿ ಮಿರ್ಚಿ ಮಿಕ್ಸರ್ ಮಷಿನ್ ಖರೀದಿ, ಯಂತ್ರ ಉದ್ಘಾಟನೆ



• **ಉದಯವಾಹಿನಿ, ಬೆಳಗಾವಿ**

ರಾಜ್ಯ ಸರ್ಕಾರದ ಗೃಹಲಕ್ಷ್ಮಿ ಯೋಜನೆಯಡಿ ಮನೆಯ ಯಜಮಾನಿಗೆ ಮಾಸಿಕ 2 ಸಾವಿರ ರೂಪಾಯಿ ಸಿಗುತ್ತಿದ್ದು, ಹಲವು ಮಹಿಳೆಯರು ಆ ಹಣವನ್ನು ಕೂಡಿಟ್ಟು ಫ್ರಿಡ್ಜ್, ಮೊಬೈಲ್, ಟಿವಿ ಇತ್ಯಾದಿ ಖರೀದಿಸುತ್ತಿದ್ದಾರೆ.

ಇದೀಗ ಯೋಜನೆಯ ಹಣದಿಂದ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಕುಕಡೊಳ್ಳಿ ಗ್ರಾಮದ ತಾಯವ್ವ ಲಕಮೋಜಿ ಎಂಬ ಮಹಿಳೆಯು ಕೂಡಿಟ್ಟು ಯೋಜನೆಯ ಹಣವನ್ನು ಉಪಯೋಗಿಸಿ ಮಿರ್ಚಿ ಮಿಕ್ಸರ್ ಮಷಿನ್ ಖರೀದಿಸಿದ್ದಾರೆ. ಈ ಬಗ್ಗೆ ಸಂತಸ ವ್ಯಕ್ತಪಡಿಸಿರುವ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು, 'ಗೃಹಲಕ್ಷ್ಮಿ' ಯೋಜನೆ ಲಕ್ಷಾಂತರ ಬಡ ಕುಟುಂಬಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಣೆಗೊಳಿಸಿದೆ. ಸಾಕಷ್ಟು ಬಡ ಕುಟುಂಬಗಳು ಗೃಹಲಕ್ಷ್ಮಿ ಯೋಜನೆಯ ಮೂಲಕ ಬದುಕು ಕಟ್ಟಿಕೊಂಡಿರುವುದು ಖುಷಿ ನೀಡಿದೆ ಎಂದರು. ಇನ್ನು ಫಲಾನುಭವಿ ತಾಯವ್ವ ಅವರ ಮನೆಗೆ ಭೇಟಿ ನೀಡಿ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಮಿರ್ಚಿ ಮಿಕ್ಸರ್ ಮಷಿನ್ ಅನ್ನು ಉದ್ಘಾಟಿಸಿ, ಮಹಿಳೆಯ ನೂತನ ಉದ್ಯೋಗಕ್ಕೆ ಶುಭ ಕೋರಿದರು.

# 5.37 ಲಕ್ಷ ಫಾಲೋವರ್ಸ್ ಇದ್ದ 'ಸೆಲೆಬ್ರಿಟಿ' ಅಳಿಲಿಗೆ ದಯಾಮರಣ

## ಅಕ್ರಮವಾಗಿ ಇದನ್ನು ಸಾಕಲಾಗಿದೆ ಎಂದು ಆರೋಪಿಸಿ ಅಳಿಲನ್ನು ವಶಕ್ಕೆ ಪಡೆದಿದ್ದ ಅಧಿಕಾರಿಗಳು



**ಅಮೆರಿಕ ಅಧಿಕಾರಿಗಳ ನಡೆಗೆ ಆಕ್ರೋಶ**

**ನ್ಯೂಯಾರ್ಕ್:** ಪೀನಟ್ ಹೆಸರಿನ ಅಳಿಲೊಂದು ಸುದ್ದಿಯಲ್ಲಿದೆ. ಆದರೆ, ದುಃಖದ ಸಂಗತಿ ಎಂದರೆ ಅದು ಈಗಾಗಲೇ ಇಹಲೋಕ ತ್ಯಜಿಸಿದೆ. ಇನ್ಸ್ಟಾಗ್ರಾಮ್‌ನಲ್ಲಿ 5,37,000 ಫಾಲೋವರ್ಸ್ ಹೊಂದಿದ್ದ, ಇಂಟರ್‌ನೆಟ್ ಸೆನ್ಸೇಷನ್' ಎನಿಸಿಕೊಂಡಿದ್ದ ಈ ಅಳಿಲಿಗೆ ನ್ಯೂಯಾರ್ಕ್‌ನ ಸರಕಾರಿ ಅಧಿಕಾರಿಗಳೇ ದಯಾಮರಣ ಕಲ್ಪಿಸಿದ್ದಾರೆ.

**ಅಷ್ಟಕ್ಕೂ ಯಾಕೀ ದಯಾಮರಣ, ಏನಿದರ ಕಥೆ?:** ಆರಂಭದಿಂದ ಬರೋಣ... ಕಾರು ಅಪಘಾತವೊಂದರಲ್ಲಿ ಇದರ ತಾಯಿ ಸಾವನ್ನಪ್ಪಿತ್ತು. ನಂತರ ಇದನ್ನು ನ್ಯೂಯಾರ್ಕ್ ನಿವಾಸಿ ಮಾರ್ಕ್ ಲಾಂಗೋ ರಕ್ಷಿಸಿ ಸಾಕಲು ಆರಂಭಿಸಿದ್ದರು. ಆಗಿನ್ನು ಇದು ಹಾಲು ಕುಡಿಯುವ ಪುಟ್ಟ ಅಳಿಲು. ಆರಂಭದಲ್ಲಿ ಬಾಟಲಿ ಮೂಲಕ ಇದಕ್ಕೆ ಹಾಲುಣಿಸಿ, ದೊಡ್ಡದು ಮಾಡಿದ್ದರು ಲಾಂಗೋ. ದಷ್ಟಪುಷ್ಟಗೊಂಡು ದೊಡ್ಡದಾದ ಬಳಿಕ ಅವರು ಅದನ್ನು ಕಾಡಿನಲ್ಲಿ ಬಿಟ್ಟಿದ್ದರು. ಆದರೆ, ಸ್ವಲ್ಪ ಸಮಯದ ನಂತರ ಅಳಿಲು ಪುನಃ ಲಾಂಗೋ ಬಳಿಗೆ ಬಂತು. ಬರುವಾಗ ಬಾಲ ಸ್ವಲ್ಪ ತುಂಡಾಗಿತ್ತು. ಹಾಗೆ ಬಂದ ಅಳಿಲು ಲಾಂಗೋ ಜೊತೆಗೇ ಕಳೆದ 7 ವರ್ಷಗಳಿಂದ ವಾಸವಿತ್ತು. ಈ ಅವಧಿಯಲ್ಲಿ ಅಳಿಲಿನ ವಿಡಿಯೋ, ಫೋಟೋಗಳನ್ನು ಲಾಂಗೋ ಇನ್‌ಸ್ಟಾಗ್ರಾಮ್‌ನಲ್ಲಿ ಹಾಕಲಾರಂಭಿಸಿದರು. ಅದಕ್ಕೆಂದೇ peanut_the_squirrel12 ಎಂಬ ಖಾತೆಯೂ ಇತ್ತು.

ಲಾಂಗೋ ಅಳಿಲಿಗೆ ಪೀನಟ್ ಎಂದು ಹೆಸರಿಟ್ಟಿದ್ದರು. ಇದರ ಮುದ್ದಾಗಿ ಬಿಸ್ಕೆಟ್ ತಿನ್ನುವ, ಸಣ್ಣ ಸಣ್ಣ ಬಟ್ಟೆ ಧರಿಸಿದ ವಿಡಿಯೋಗಳು ಭಾರೀ ಜನಪ್ರಿಯತೆ ಗಳಿಸಿದ್ದವು. ಜಗತ್ತಿನಾದ್ಯಂತ ಪೀನಟ್‌ಗೆ ಅಭಿಮಾನಿಗಳು ಹುಟ್ಟಿಕೊಂಡಿದ್ದರು.

**ಅಳಿಲಿನಲ್ಲಿ ರೇಬಿಸ್ ಪತ್ತೆ**

**ಇನ್‌ಸ್ಟಾಗ್ರಾಮ್‌ನಲ್ಲಿ 5,37,000 ಫಾಲೋವರ್ಸ್ ಹೊಂದಿದ್ದ, ಇಂಟರ್‌ನೆಟ್ ಸೆನ್ಸೇಷನ್' ಎನಿಸಿಕೊಂಡಿದ್ದ ಪೀನಟ್ ಹೆಸರಿನ ಅಳಿಲಿಗೆ ನ್ಯೂಯಾರ್ಕ್‌ನ ಸರಕಾರಿ ಅಧಿಕಾರಿಗಳೇ ದಯಾಮರಣ ಕಲ್ಪಿಸಿದ್ದಾರೆ. ಅಕ್ರಮವಾಗಿ ಇದನ್ನು ಸಾಕಲಾಗಿದೆ ಎಂದು ಆರೋಪಿಸಿ ವಶಕ್ಕೆ ಪಡೆದಿದ್ದ ಅಧಿಕಾರಿಗಳು, ಪರೀಕ್ಷೆ ನಡೆಸಿದಾಗ ಅಳಿಲಿನಲ್ಲಿ ರೇಬಿಸ್ ಪತ್ತೆಯಾಗಿತ್ತು. ಹೀಗಾಗಿ ಇದನ್ನು ಕೊಂದಿದ್ದಾರೆ. ಅಧಿಕಾರಿಗಳ ನಡೆಗೆ ಇದನ್ನು ಸಾಕುತ್ತಿದ್ದ ಮಾರ್ಕ್ ಲಾಂಗೋ ಆಕ್ರೋಶ ವ್ಯಕ್ತಪಡಿಸಿದ್ದಾರೆ.**

ಆದರೆ, ಕೊನೆಗೊಂದು ದಿನ ಈ ಅಳಿಲಿಗೆ ಇಹಲೋಕ ತ್ಯಜಿಸುವ ದಿನ ಬಂತು. ಅಳಿಲಿನ ಜೊತೆಗೆ ರಕೂನ್ (ಅಮೆರಿಕದ ಒಂದು ನಿಶಾಚರಿ ಪ್ರಾಣಿ) ಮಾರ್ಕ್ ಲಾಂಗೊದೊಂದಿಗೆ ವಾಸಿಸುತ್ತಿರುವುದು ಚೆಮಂಗ್ ಕೌಂಟಿಯ ಆರೋಗ್ಯ ಇಲಾಖೆ ಮತ್ತು ನ್ಯೂಯಾರ್ಕ್ ಸ್ಟೇಟ್ ಡಿಪಾರ್ಟ್ಮೆಂಟ್ ಆಫ್ ಎನ್ವಿರಾನ್ಮೆಂಟಲ್ ಕನ್ಸರ್ವೇಶನ್ ಗಮನಕ್ಕೆ ಬಂತು. ಅಲ್ಲಿಂದ ಅಳಲಿಗೆ ಕೊನೆಗಾಲ ಶುರುವಾಯಿತು.

ಎರಡೂ ಪ್ರಾಣಿಗಳನ್ನು ಅಕ್ರಮವಾಗಿ ಸಾಕಲಾಗುತ್ತಿದೆ. ಇದರಿಂದ ಮನುಷ್ಯರು ರೇಬಿಸ್ ರೋಗಕ್ಕೆ ತುತ್ತಾಗುವ ಅಪಾಯ ಇದೆ ಎಂದು ಹೇಳಿ ಡಿಪಾರ್ಟ್ಮೆಂಟ್ ಆಫ್ ಎನ್ವಿರಾನ್ಮೆಂಟಲ್ ಕನ್ಸರ್ವೇಶನ್ ರಕೂನ್, ಅಳಿಲನ್ನು ಅಕ್ಟೋಬರ್ 30ರಂದು ವಶಕ್ಕೆ ಪಡೆದಿತ್ತು. ಈ ವೇಳೆ ರೇಬಿಸ್ ಪರೀಕ್ಷೆಯನ್ನೂ ನಡೆಸಲಾಗಿತ್ತು. ಈ ವೇಳೆ ರೇಬಿಸ್ ಇರುವುದು ಪತ್ತೆಯಾಗಿತ್ತು. ತನಿಖೆ ವೇಳೆ ಅಧಿಕಾರಿಗೂ ಅಳಿಲು ಕಚ್ಚಿದೆ. ಪರೀಕ್ಷೆ ನಡೆಸಿದಾಗ ಎರಡೂ ಪ್ರಾಣಿಗಳಿಗೆ ರೇಬಿಸ್ ಇರುವುದು ಖಚಿತಪಟ್ಟಿದೆ. ಈ ಹಿನ್ನೆಲೆಯಲ್ಲಿ ಅಳಿಲು, ರಕೂನ್‌ಗೆ ದಯಾಮರಣ ನೀಡಲಾಗಿದೆ, ಎಂದು ಚೆಮಂಗ್ ಕೌಂಟಿಯ ಆರೋಗ್ಯ ಇಲಾಖೆ, ನ್ಯೂಯಾರ್ಕ್ ಸ್ಟೇಟ್ ಡಿಪಾರ್ಟ್ಮೆಂಟ್ ಆಫ್ ಎನ್ವಿರಾನ್ಮೆಂಟಲ್ ಕನ್ಸರ್ವೇಶನ್ ಹೇಳಿಕೆಯಲ್ಲಿ ತಿಳಿಸಿದೆ. ಅಷ್ಟೇ ಅಲ್ಲದೆ ಈ ಪ್ರಾಣಿಗಳ ಸಂಪರ್ಕದಲ್ಲಿದ್ದವರು ದಯವಿಟ್ಟು ವೈದ್ಯರನ್ನು ಸಂಪರ್ಕಿಸಬೇಕು ಎಂದು ಇಲಾಖೆ ಹೇಳಿದೆ.

**ಮಾರ್ಕ್ ಲಾಂಗೊ ಆಕ್ರೋಶ:** ಅಳಿಲನ್ನು ಕೊಂದಿದ್ದಕ್ಕೆ, ಅದನ್ನು ಸಾಕುತ್ತಿದ್ದ ಮಾರ್ಕ್ ಲಾಂಗೋ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನಿಮ್ಮ ಸ್ವಾರ್ಥದಿಂದಾಗಿ ಅತ್ಯಂತ ಅದ್ಭುತವಾದ ಪ್ರಾಣಿಗಳಲ್ಲಿ ಒಂದನ್ನು ನನ್ನಿಂದ ನೀವು ದೂರಮಾಡಿದ್ದೀರಿ. (ನ್ಯೂಯಾರ್ಕ್ ಸ್ಟೇಟ್ ಡಿಪಾರ್ಟ್ಮೆಂಟ್ ಆಫ್ ಎನ್ವಿರಾನ್ಮೆಂಟಲ್ ಕನ್ಸರ್ವೇಶನ್) ಕರೆ ಮಾಡಿದ ಜನರೇ, ನರಕದಲ್ಲಿ ನಿಮಗಾಗಿ ವಿಶೇಷ ಸ್ಥಾನವಿದೆ, ಎಂದು ಇನ್ಸ್ಟಾಗ್ರಾಮ್ ಪೋಸ್ಟ್‌ನಲ್ಲಿ ಕಿಡಿಕಾರಿದ್ದಾರೆ. ಅಳಿಲಿನ ಸಾವಿನಿಂದ ಆಘಾತವಾಗಿದ್ದು, ನನಗೆ ಅಸಹ್ಯ ಅನಿಸುತ್ತಿದೆ ಕಳೆದ ಏಳು ವರ್ಷಗಳಿಂದ ಪೀನಟ್ ನನ್ನ ಉತ್ತಮ ಸ್ನೇಹಿತನಾಗಿದ್ದ ಎಂದು ಅಳಲು ತೋಡಿಕೊಂಡಿದ್ದಾರೆ. ನನ್ನ ಹೋರಾಟ ಮುಂದು ವರಿಯುತ್ತದೆ ಎಂದಿರುವ ಲಾಂಗೋ, ಕಾನೂನು ಹೋರಾಟ, ಪ್ರಾಣಿಗಳ ಅಭಯಾರಣ್ಯ ಯೋಜನೆಗಳಿಗೆ ದೇಣಿಗೆ ನೀಡುವಂತೆ ಬೆಂಬಲಿಗರಲ್ಲಿ ಮನವಿ ಮಾಡಿದ್ದಾರೆ.

# ಟ್ರಂಪ್ ಪ್ರಜಾಪ್ರಭುತ್ವಕ್ಕೆ ಮಾರಕ: ಮಿಖಿಜಾ



**ಫಿಲಡೆಲ್ಫಿಯಾ:** ಭಾರತ-ಅಮೆರಿಕ ಪಾಲುದಾರಿಕೆ ಜಾಗತಿಕವಾಗಿ ಅತ್ಯಂತ ಪ್ರಮುಖವಾದ ವಿಚಾರವಾಗಿದೆ, ಕಮಲಾ ಹ್ಯಾರಿಸ್ ಅವರು ಅಧ್ಯಕ್ಷರಾದರೆ ಸಹಕಾರವು ಮತ್ತಷ್ಟು ಅಭಿವೃದ್ಧಿ ಹೊಂದುತ್ತದೆ ಎಂದು ಭಾರತೀಯ ಮೂಲದ ಪ್ರಮುಖ ಡೆಮಾಕ್ರಟಿಕ್ ನಾಯಕ ನೀಲ್ ಮಖಿಜಾ ಹೇಳಿದ್ದಾರೆ.

ಪಿಟಿಐಗೆ ನೀಡಿದ ವಿಶೇಷ ಸಂದರ್ಶನದಲ್ಲಿ, ಹ್ಯಾರಿಸ್‌ಗೆ ಆಪ್ತ ಎಂದು ಪರಿಗಣಿಸಲಾದ ಯುವ ನಾಯಕ ನೀಲ್ ಅವರು ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ವಲಸೆ ನೀತಿಗಾಗಿ ಭಾರತೀಯ-ಅಮೆರಿಕನ್ನರು ಸೇರಿದಂತೆ ಯುಎಸ್ ನಲ್ಲಿರುವ ವಲಸಿಗ ಸಮುದಾಯಗಳಲ್ಲಿ ಕೆಲವು ಕಳವಳಗಳನ್ನು ಉಂಟುಮಾಡಿದ್ದಕ್ಕಾಗಿ ತೀವ್ರವಾಗಿ ಟೀಕಿಸಿದರು. ಅವರು ಪ್ರಜಾಪ್ರಭುತ್ವಕ್ಕೆ ಮಾರಕ ಎಂದಿದ್ದಾರೆ.

ಭಾರತ-ಯುಎಸ್ ಸಹಭಾಗಿತ್ವದ ಕುರಿತು, ಇದು ಭವಿಷ್ಯದ ಪ್ರಮುಖ ಸಂಬಂಧವಾಗಿದೆ ಎಂದು ಮಖಿಜಾ ಹೇಳಿದರು. ಚೀನಾದೊಂದಿಗೆ ಯುಎಸ್ ಹೊಂದಿರುವ ಸ್ಪರ್ಧೆಯ ಬಗ್ಗೆ ನೀವು ಯೋಚಿಸಿದಾಗ, ಯುಎಸ್ ಮತ್ತು ಅದರ ಮಿತ್ರರಾಷ್ಟ್ರಗಳ ಹಿತಾಸಕ್ತಿಗಳಿಗೆ ವಿರುದ್ಧವಾದ ರಷ್ಯಾ ತೆಗೆದುಕೊಳ್ಳುತ್ತಿರುವ ಕ್ರಮಗಳ ಬಗ್ಗೆ ಯೋಚಿಸಿದಾಗ, ಭಾರತವು ನಿಜವಾಗಿಯೂ ಯುಎಸ್‌ಗೆ ಅತ್ಯಂತ ಪ್ರಮುಖ ದೇಶವಾಗಿದೆ ಎಂದಿದ್ದಾರೆ.

ಭಾರತವು ಅನೇಕ ವಿಧಗಳಲ್ಲಿ ಯುಎಸ್‌ಗೆ ಅತ್ಯಂತ ನಿರ್ಣಾಯಕ ಪಾಲುದಾರ ಎಂದು ಮುಂದಿನ ಯುಎಸ್ ಅಧ್ಯಕ್ಷರು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ ಎಂದು ಮಖಿಜಾ ಹೇಳಿದರು. ನಮ ರಕ್ಷಣೆಯಂತಹ ಜಾಗತಿಕ ಆದ್ಯತೆಗಳ ವಿಷಯಕ್ಕೆ ಬಂದಾಗ, ಹವಾಮಾನ ಬದಲಾವಣೆಯಂತಹ ಜಾಗತಿಕ ಸಮಸ್ಯೆಗಳನ್ನು ನಿಭಾಯಿಸುವುದು. ಯುಎಸ್ ಮತ್ತು ಭಾರತ ಒಟ್ಟಿಗೆ ಕೆಲಸ ಮಾಡಿದರೆ ದಾರಿಯನ್ನು ಮುನ್ನಡೆಸಬಹುದು. ಆದ್ದರಿಂದ ನಮಗೆ ಅದನ್ನು ಗುರುತಿಸುವ ಅಧ್ಯಕ್ಷರ ಅಗತ್ಯವಿದೆ ಮತ್ತು ಕಮಲಾ ಹ್ಯಾರಿಸ್ ಆ ವ್ಯಕ್ತಿ ಎಂದು ಅವರು ಹೇಳಿದರು. ಟ್ರಂಪ್ ಪ್ರಜಾಪ್ರಭುತ್ವಕ್ಕೆ ಅಪಾಯ ಎಂದು ಮಖಿಜಾ ಕರೆದಿದ್ದಾರೆ.

**ವಿಶ್ವ ಇತಿಹಾಸದಲ್ಲಿ ಕೆಲವು ಕರಾಳ ಕ್ಷಣಗಳಲ್ಲಿ ನಾವು ನೋಡಿದ ಅದೇ ರೀತಿಯ ನಡವಳಿಕೆಯಲ್ಲಿ ಅವರು ತೊಡಗಿಸಿಕೊಂಡಿದ್ದಾರೆ, ಅಲ್ಲಿ ನಾಯಕರು ಮತದಾನದ ಹಕ್ಕನ್ನು ಹೊಂದಿರದ ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಬಲಿಪಶು ಮಾಡಿದ್ದಾರೆ ಎಂದು ಅವರು ಹೇಳಿದರು.**

# ಎಸ್‌ಐನನ್ನು ಗುಂಡಿಕ್ಕಿ ಕೊಂದ ಕಾನ್‌ಸ್ಟೇಬಲ್



**ಇಂಫಾಲ:** ಸಬ್ ಇನ್ಸ್‌ಪೆಕ್ಟರ್ ಒಬ್ಬರನ್ನು ಪೊಲೀಸ್ ಗುಂಡಿಕ್ಕಿ ಕೊಲೆ ಮಾಡಿರುವ ಘಟನೆ ಮಣಿಪುರದಲ್ಲಿ ನಡೆದಿದೆ. ಮಣಿಪುರ ಪೊಲೀಸ್ ಪೇದೆಯೊಬ್ಬರು ಮಾತಿನ ಚಕಮಕಿಯ ನಂತರ ತನ್ನ ಹಿರಿಯ ಸಹೋದ್ಯೋಗಿ, ಸಬ್ ಇನ್ಸ್‌ಪೆಕ್ಟರ್ ಶ್ರೇಣಿಯ ಪೊಲೀಸ್ ಅಧಿಕಾರಿಯ ಮೇಲೆ ಮಾರಣಾಂತಿಕವಾಗಿ ಗುಂಡು ಹಾರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಾನ್‌ಸ್ಟೇಬಲ್ ಬಿಕ್ರಮ್‌ಜಿತ್ ಸಿಂಗ್ ಅವರಿಂದ ಕೊಲೆಯಾದ ಎಸ್‌ಐ ಅನ್ನು ಪಹಜಹಾನ್ ಎಂದು ಗುರುತಿಸಲಾಗಿದೆ.

ಮಣಿಪುರದ ಹಿಂಸಾಚಾರ ಪೀಡಿತ ಜಿರಿಬಾಮ್ ಜಿಲ್ಲೆಯಲ್ಲಿ ಇಬ್ಬರ ನಡುವೆ ಸಂಭವಿಸಿದ ಜಗಳದ ಕಾರಣವನ್ನು ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ಪ್ರಸ್ತುತ ಹೆಚ್ಚಿನ ಭದ್ರತೆಯಲ್ಲಿರುವ ಪ್ರದೇಶವಾದ ಮೊಂಗ್‌ಬಂಗ್ ಗ್ರಾಮ ಪೊಲೀಸ್ ಪೋಸ್ಟ್‌ನಲ್ಲಿ ಈ ಘಟನೆ ಸಂಭವಿಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

**ಜಿಲ್ಲೆಯಲ್ಲಿ ಗುಂಪು ಘರ್ಷಣೆ**

**ಎರಡೂ ಕಡೆಯವರಿಂದ ಬೆಂಕಿ ಹಚ್ಚಿದ ಘಟನೆಗಳಿಂದ ಸಾವಿರಾರು ಜನರು ತಮ ಮನೆಗಳನ್ನು ತೊರೆದು ಪರಿಹಾರ ಶಿಬಿರಗಳಿಗೆ ಸ್ಥಳಾಂತರಿಸಬೇಕಾಯಿತು. ಅಂದಿನಿಂದ ಜಿಲ್ಲೆಯಲ್ಲಿ ಗುಂಪು ಘರ್ಷಣೆ ಮಾಮೂಲಾಗಿದೆ.**

ತಕ್ಷಣ ಆರೋಪಿ ಕಾನ್‌ಸ್ಟೇಬಲ್‌ನನ್ನು ಇತರ ಪೊಲೀಸರು ಬಂಧಿಸಿದ್ದಾರೆ. ಇಂಫಾಲ್ ಕಣಿವೆ, ಪಕ್ಕದ ಬೆಟ್ಟಗಳಲ್ಲಿ ಜನಾಂಗೀಯ ಹಿಂಸಾಚಾರದಿಂದ ಹೆಚ್ಚಾಗಿ ಅಸ್ಪೃಶ್ಯವಾಗಿದ್ದ ಜನಾಂಗೀಯ-ವೈವಿಧ್ಯತೆಯ ಜಿರಿಬಾಮ್, ಈ ವರ್ಷದ ಜೂನ್‌ನಲ್ಲಿ ಒಂದು ಸಮುದಾಯಕ್ಕೆ ಸೇರಿದ 59 ವರ್ಷದ ವ್ಯಕ್ತಿಯನ್ನು ಮತ್ತೊಂದು ಸಮುದಾಯದ ಉಗ್ರಗಾಮಿಗಳು ಹತ್ಯೆಗೈದ ನಂತರ ಹಿಂಸಾಚಾರ ಸ್ಫೋಟಗೊಂಡಿದೆ.

# ಪಪ್ಪು ಯಾದವ್‌ಗೆ ಕೊಲೆ ಬೆದರಿಕೆ ಹಾಕಿದ್ದವನ ಬಂಧನ



**ಪಾಟ್ನಾ:** ಗ್ಯಾಂಗ್‌ಸ್ಟರ್ ಲಾರೆನ್ಸ್ ಬಿಷ್ಣೋಯ್ ಸಹಚರನೆಂದು ಹೇಳಿಕೊಂಡು ಸಂಸದ ಪಪ್ಪು ಯಾದವ್‌ಗೆ ಬೆದರಿಕೆ ಹಾಕುತ್ತಿದ್ದ ದೆಹಲಿ ಮೂಲದ ವ್ಯಕ್ತಿಯನ್ನು ಬಿಹಾರ ಪೊಲೀಸರು ಬಂಧಿಸಿದ್ದಾರೆ. ಯಾವುದೇ ಗ್ಯಾಂಗ್‌ನೊಂದಿಗೆ ಸಂಬಂಧ ಹೊಂದಿರದ ವ್ಯಕ್ತಿ ಯುಎಇಯಲ್ಲಿ ನೆಲೆಸಿರುವ ತನ್ನ ಸಂಬಂಧಿಯ ಸಿಮ್ ಕಾರ್ಡ್ ಬಳಸಿ ಬೆದರಿಕೆ ಹಾಕಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಸಾಮಾಜಿಕ ಮಾಧ್ಯಮ ಮತ್ತು ಮುಖ್ಯವಾಹಿನಿಯ ಮಾಧ್ಯಮಗಳಲ್ಲಿ ಬಂದ ವರದಿಗಳ ಆಧಾರದ ಮೇಲೆ ಪ್ರಕರಣ ದಾಖಲಿಸ ಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಲಾಗಿದೆ. ಕರೆ ಮಾಡಿದವರನ್ನು ದೆಹಲಿಯ ನಿವಾಸಿ ಮಹೇಶ್ ಪಾಂಡೆ ಎಂದು ಗುರುತಿಸಲಾಗಿದೆ. ಆತನನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಇತ್ತೀಚೆಗಷ್ಟೇ ಪಪ್ಪು ಯಾದವ್ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಬಿಹಾರ ಮುಖ್ಯ ಮಂತ್ರಿ ನಿತೀಶ್ ಕುಮಾರ್ ಅವರಿಗೆ ದುಬೈ ಸಂಖ್ಯೆಯಿಂದ ಕರೆ ಬಂದಿದ್ದು, ಭದ್ರತೆ ಹೆಚ್ಚಿಸುವಂತೆ ಪತ್ರ ಬರೆದಿದ್ದರು.

ವಾಟ್ಸಾಪ್ ಮೂಲಕ ಸಂಸದರನ್ನು ಸಂಪರ್ಕಿಸಿದ್ದು, ಇದಕ್ಕಾಗಿ ಯುಎಇಯಲ್ಲಿ ನೆಲೆಸಿರುವ ಕುಟುಂಬ ಸದಸ್ಯರೊಬ್ಬರ ಸಿಮ್ ಕಾರ್ಡ್ ಬಳಸದೆ ಎಂದು ಪಾಂಡೆ ತಪ್ಪೊಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಹಾರಾಷ್ಟ್ರದ ಮಾಜಿ ಸಚಿವ ಬಾಬಾ ಸಿದ್ದಿಕಿ ಹತ್ಯೆಯಾದ ತಕ್ಷಣ ಬಿಷ್ಣೋಯ್ ಗ್ಯಾಂಗ್ ವಿರುದ್ಧ ಹೇಳಿಕೆ ನೀಡಿದ್ದ ಅವರು ಪಪ್ಪು ಯಾದವ್ ಅವರ ಸಂಖ್ಯೆಯನ್ನು ಗೂಗಲ್‌ನಲ್ಲಿ ಹುಡುಕಿದ್ದಾರೆ. ಮಹೇಶ್ ಪಾಂಡೆ ಬೆದರಿಕೆ ಹಾಕಲು ಬಳಸಿದ್ದ ಮೊಬೈಲ್, ಸಿಮ್ ಕಾರ್ಡ್ ಜಪ್ತಿ ಮಾಡ ಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಹೆಚ್ಚಿನ ತನಿಖೆ ನಡೆಯುತ್ತಿದೆ.

# ಯುದ್ಧ, ಹಸಿವು... ಕುಟುಂಬ ಪೊರೆಯಲು ಹೆಣಗಾಡುತ್ತಿರುವ ಮೀನುಗಾರರು



**ಖಾನ್ ಯೂನಿಸ್:** ಒಂದು ವರ್ಷವಾದರೂ ನಿಲ್ಲದ ಯುದ್ಧದ ಕಾವು, ನಿತ್ಯ ಕಾಡುವ ಘೋರ ಹಸಿವಿನ ನೋವಿನೊಂದಿಗೆ ಸಮುದ್ರ ದಡದಲ್ಲಿ ಒಟ್ಟು ಸೇರಿರುವ ಪ್ಯಾಲೆಸ್ಟೀನಿನ ಬೆಸ್ತರು, ಸಾಕಷ್ಟು ಮೀನು ಸಿಗಬಹುದೆಂಬ ಆಸೆಯಲ್ಲಿ ಬಲೆ ಎಸೆಯುತ್ತಾರೆ. ಹತಾಶೆ ತುಂಬಿದ ಕಂಗಳಲ್ಲಿ ತಮ್ಮ ಕುಟುಂಬಗಳಿಗೆ ಬೇಕಾದಷ್ಟು ಮೀನು ಸಿಗಬಹುದು ಎನ್ನುವ ಭರವಸೆಯೂ ಇದೆ. 2023 ಅಕ್ಟೋಬರ್‌ನಲ್ಲಿ ಹಮಾಸ್ ಬಂಡುಕೋರರು ತನ್ನ ಮೇಲೆ ದಾಳಿ ಮಾಡಿದ ಬಳಿಕ, ಗಾಜಾ ವಿರುದ್ಧ ಇಸ್ರೇಲ್ ಯುದ್ಧ ಸಾರಿದೆ. ಇದು ಅಲ್ಲಿನ ಮೀನುಗಾರರ ಜೀವನವನ್ನು ದುಸ್ತರವಾಗಿಸಿದೆ.

ಸಮುದ್ರಕ್ಕೆ ತೆರಳಿ ಮೀನುಗಾರಿಕೆ ಮಾಡಲಾಗದೆ, ದಡದಿಂದಲೇ ಬಲೆ ಎಸೆಯುತ್ತಿದ್ದಾರೆ. ಯುದ್ಧದಿಂದ ನಿರಾಶ್ರಿತರಾಗಿ ಖಾನ್ ಯೂನಿಸ್‌ನ ಸಮುದ್ರ ತಟದಲ್ಲಿ ನಿರ್ಮಿಸಲಾಗಿರುವ ತಾತ್ಕಾಲಿಕ ಡೇರೆಗಳಲ್ಲಿ ವಾಸಿಸುತ್ತಿರುವ 71 ವರ್ಷದ ಇಬ್ರಾಹಿಂ ಫುರಾಬ್ ಹಾಗೂ 24 ವರ್ಷದ ವಸೀಂ ಅಲ್ ಮಸ್ತಿ ಬಲೆ ಎಸೆದು ಬೂತಾಯಿ ಮೀನಿಗಾಗಿ ಅರಸುತ್ತಿದ್ದರು. ಬದುಕು ಕಷ್ಟವಾಗಿದೆ ಮಾತಿಗೆ ನಿಂತರು ಫುರಾಬ್. ಆಹಾರ ಪಡೆಯಲು ಪ್ರಯತ್ನಿಸುತ್ತಿದ್ದೇವೆ. ನಮಗೆ ಯಾವ ಸಹಾಯವೂ ಇಲ್ಲ.

ನಮಗೆ ಏನೂ ಸಿಗುತ್ತಿಲ್ಲ. ಆರಂಭದಲ್ಲಿ ನಮಗೆ ಇಂದಿಷ್ಟು ಆಹಾರ ಸಿಗುತ್ತಿತ್ತು, ಆದರೆ ಈಗ ಅದೂ ಸಿಗುತ್ತಿಲ್ಲ ಫುರಾಬ್ ಮಾತಿನಲ್ಲಿ ನೋವಿತ್ತು. ಫುರಾಬ್, ಮಸಿಯಂತಹ ಮೀನು ಗಾರರು ತಮ್ಮ ಕುಟುಂಬಗಳಿಗೆ ಬೇಕಾದಷ್ಟು ಮೀನುಗಳನ್ನು ತರಲು ಪ್ರತಿದಿನ ಹೆಣಗಾಡುತ್ತಾರೆ. ಸ್ವಂತ ಬಳಕೆಗೆ ಮಿಕ್ಕಿ ಬೇರೆಯವರಿಗೆ ಮಾರಲು ಸಿಕ್ಕರೆ ಅದೃಷ್ಟ. ಯುದ್ಧಕ್ಕಿಂತ ಮುಂಚೆ ಗಾಜಾದ ಜನರಿಗೆ ಮೀನುಗಾರಿಕೆಯೇ ಪ್ರಮುಖ ಕಸುಬಾಗಿತ್ತು. ನಿತ್ಯ ಆಹಾರದ ಭಾಗವಾಗಿದ್ದ ಮೀನು, ಆದಾಯದ ಪ್ರಮುಖ ಮೂಲವಾಗಿತ್ತು.

ಸಮುದ್ರದಿಂದ ಹಿಡಿದು ತಂದ ಮೀನುಗಳನ್ನು ಮಾರುಕಟ್ಟೆಯಲ್ಲಿ ಬಿಕರಿಗಿಡಲಾಗುತ್ತಿತ್ತು. ಆದರೆ ಈಗ ಮೀನುಗಾರಿಕೆಗೆ ಇಸ್ರೇಲ್ ದಿಗ್ಬಂಧನ ವಿಧಿಸಿದ್ದಲ್ಲದೆ, ಪದೇ ಪದೇ ನಡೆಯುತ್ತಿರುವ ದಾಳಿಯಿಂದಾಗಿ ಹಲವು ಮಂದಿಯ ಆದಾಯ ಮೂಲ ನಿಂತು ಹೋಗಿದೆ. ನಿತ್ಯದ ಅಗತ್ಯ ವಸ್ತುಗಳೂ ಸಿಗುತ್ತಿಲ್ಲ. ನಮಗೆ ಆದಾಯವೂ ಇಲ್ಲ, ನಮ್ಮ ಜೀವನವೂ ಅಪಾಯದಲ್ಲಿದೆ' ಎಂದು ಇಸ್ರೇಲ್ ಪಡೆಗಳು ಸಮುದ್ರದಿಂದ ಮೀನುಗಾರರನ್ನು ಗುರಿಯಾಗಿಸಿಕೊಂಡು ನಡೆಸುವ ದಾಳಿಯನ್ನು ವಿವರಿಸಿದರು ಮಸ್ತಿ. ಖಾನ್ ಯೂನಿಸ್‌ನಲ್ಲಿರುವ ನಮ್ಮ ಮೀನುಗಾರಿಕಾ ದೋಣಿಯ ಮೇಲೆಯೇ ಇಸ್ರೇಲ್ ಪಡೆಗಳು ದಾಳಿ ನಡೆಸಿವೆ ಎಂದರು ಫುರಾಬ್. ಮೀನುಗಾರರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗಿದೆಯೇ ಎನ್ನುವ ರಾಯಿಟರ್ಸ್ ಕೇಳಿದ ಪ್ರಶ್ನೆಗೆ ಇಸ್ರೇಲ್ ಸೇನೆಯಿಂದ ಯಾವುದೇ ಉತ್ತರ ಬಂದಿಲ್ಲ.

# ಸನಾತನ ಧರ್ಮ ರಕ್ಷಣೆಗೆ ನರಸಿಂಹ ವಾರಾಹಿ ಬ್ರಿಗೇಡ್ ಸ್ಥಾಪಿಸಿದ ಪವನ್

**ಏಲೂರು:** ಜನಸೇನಾ ಪಕ್ಷದ ಮುಖ್ಯಸ್ಥ ಮತ್ತು ಆಂಧ್ರಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ಅವರು ಸನಾತನ ಧರ್ಮವನ್ನು ರಕ್ಷಿಸುವ ಉದ್ದೇಶದಿಂದ ತಮ ಪಕ್ಷದೊಳಗಿನ ಸಮರ್ಪಿತ ವಿಭಾಗವಾದ ನರಸಿಂಹ ವಾರಾಹಿ ಬ್ರಿಗೇಡ್ ಅನ್ನು ಸ್ಥಾಪಿಸಿದ್ದಾರೆ. ನಾನು ಎಲ್ಲಾ ಧರ್ಮಗಳನ್ನು ಗೌರವಿಸುತ್ತೇನೆ, ಆದರೆ ನನ್ನ ನಂಬಿಕೆಯಲ್ಲಿ ನಾನು ದೃಢವಾಗಿರುತ್ತೇನೆ, ಸಾಮಾಜಿಕ ಜಾಲತಾಣಗಳಲ್ಲಿ ಸನಾತನ ಧರ್ಮವನ್ನು ಟೀಕಿಸುವವರು ಅಥವಾ ಅದರ ಬಗ್ಗೆ ಅಗೌರವದಿಂದ ಮಾತನಾಡುವವರು ಅದರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದ್ದಾರೆ. ಹೀಗಾಗಿ, ನಾನು ನಮ ಪಕ್ಷದೊಳಗೆ ನರಸಿಂಹ ವಾರಾಹಿ ಎಂಬ ಹೆಸರಿನ ಸಮರ್ಪಿತ ವಿಭಾಗವನ್ನು ಸ್ಥಾಪಿಸುತ್ತಿದ್ದೇನೆ. ಸನಾತನ ಧರ್ಮದ ರಕ್ಷಣೆಗಾಗಿ ಬ್ರಿಗೇಡ್ ಎಂದು ಪವನ್ ಕಲ್ಯಾಣ್ ತಮ ಭಾಷಣದಲ್ಲಿ ತಿಳಿಸಿದ್ದಾರೆ.

ನಮ ಸಮಿಶ್ರ ಸರ್ಕಾರವು ಹೆಣ್ಣುಮಕ್ಕಳು ಮತ್ತು ಮಹಿಳೆಯರ ಸುರಕ್ಷತೆಗೆ ಆದ್ಯತೆ ನೀಡುತ್ತದೆ ಎಂದು ಅವರು ಒತ್ತಿ ಹೇಳಿದರು. ಮಹಿಳೆಯರ ಮೇಲೆ ಹಲ್ಲೆ ಅಥವಾ ಕಿರುಕುಳದ ಬೆದರಿಕೆ ಹಾಕುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಅವರು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

**ಜಗನ್ನಾಥಪುರ ಗ್ರಾಮದಲ್ಲಿ ಪವನ್ ಕಲ್ಯಾಣ್ ಅವರು ದೀಪಂ-2 ಉಚಿತ ಅಡುಗೆ ಅನಿಲ ಸಿಲಿಂಡರ್ ಯೋಜನೆಯನ್ನು ಉದ್ಘಾಟಿಸುತ್ತಿದ್ದಂತೆ ಈ ಘೋಷಣೆ ಹೊರಬಿದ್ದಿದೆ. ಹಿಂದಿನ ಸರಕಾರಕ್ಕೆ ಹೋಲಿಸಿದರೆ ಉತ್ಕೃಷ್ಟ ಕಲ್ಯಾಣ ಕಲ್ಪಿಸುವ ಭರವಸೆಗಳನ್ನು ಅನುಷ್ಠಾನ ಗೊಳಿಸುತ್ತಿದ್ದೇವೆ, ದೀಪಂ-2 ಯೋಜನೆ ಮೂಲಕ ರಾಜ್ಯದ 1,08,39,286 ಅರ್ಹ ಫಲಾನುಭವಿಗಳಿಗೆ ಪ್ರತಿ ವರ್ಷ 2,684 ಕೋಟಿಯಂತೆ ಮೂರು ಗ್ಯಾಸ್ ಸಿಲಿಂಡರ್‌ಗಳನ್ನು ವಿತರಿಸುತ್ತಿದ್ದೇವೆ. ಐದು ವರ್ಷಗಳಲ್ಲಿ, ಇದು 13,425 ಕೋಟಿಗಳನ್ನು ಕಲ್ಯಾಣಕ್ಕೆ ಮೀಸಲಿಟ್ಟಿದೆ ಎಂದು ಜೆಎಸ್‌ಪಿ ಮುಖ್ಯಸ್ಥರು ಹೇಳಿದರು.**




**ನಾನು ಎಲ್ಲಾ ಧರ್ಮಗಳನ್ನು ಗೌರವಿಸುತ್ತೇನೆ**

**ಮುಕ್ತವಾಗಿ ಮಾತನಾಡುವವರನ್ನು ಸಹಿಸುವುದಿಲ್ಲ**

**ಕೇವಲ 11 ಸ್ಥಾನ ಪಡೆದರೂ ವೈಎಸ್‌ಆರ್‌ಸಿಪಿ ಸದಸ್ಯರು, ಬೆಂಬಲಿಗರು ಸುಧಾರಿಸಿಲ್ಲ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದು ಕೆಲವೇ ತಿಂಗಳುಗಳು ಕಳೆದಿವೆ, ಆದರೂ ಅವರು ಈಗಾಗಲೇ ಏನೋ ಅನಾಹುತ ಸಂಭವಿಸಿದೆ ಎಂಬಂತೆ ವರ್ತಿಸುತ್ತಿದ್ದಾರೆ ಎಂದು ಉಪಮುಖ್ಯಮಂತ್ರಿ ವೈಎಸ್‌ಆರ್‌ಸಿಪಿ ನಾಯಕರನ್ನು ಟೀಕಿಸಿದರು. ಇನ್ನು ಮುಂದೆ ಸಾಮಾಜಿಕ ಜಾಲತಾಣಗಳಲ್ಲಿ ಮುಕ್ತವಾಗಿ ಮಾತನಾಡುವವರನ್ನು ಸಹಿಸುವುದಿಲ್ಲ ಎಂದು ಟಾಂಗ್ ನೀಡಿದರು.**

# ಜೆಎಂಎಂ ಮೈತ್ರಿಕೂಟಕ್ಕೆ ಮತ ನೀಡಿದರೆ ಏಳು ಕೆಜಿ ಅಕ್ಕಿ ಫ್ರೀ; ಸೊರೆನ್



**ರಾಂಚಿ:** ಜೆಎಂಎಂ ನೇತೃತ್ವದ ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಅಡಿಯಲ್ಲಿ ಜನರು ತಿಂಗಳಿಗೆ 5 ಕೆಜಿಯ ಬದಲು 7 ಕೆಜಿ ಪಡಿತರವನ್ನು ಪಡೆಯುತ್ತಾರೆ ಎಂದು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೆನ್ ಘೋಷಿಸಿದ್ದಾರೆ.

ಜಾರ್ಖಂಡ್ ಮುಕ್ತಿ ಮೋರ್ಚಾ ನೇತೃತ್ವದ ಮೈತ್ರಿಕೂಟವು ಪಿಂಚಣಿ ಮೊತ್ತವನ್ನೂ ಹೆಚ್ಚಿಸಲಿದೆ ಎಂದು ಅವರು ಇದೇ ಸಂದರ್ಭದಲ್ಲಿ ಹೇಳಿದರು.

ಜಾರ್ಖಂಡ್‌ನಲ್ಲಿ ಬಿಜೆಪಿ ಆಡಳಿತದಲ್ಲಿ 11 ಲಕ್ಷ ಪಡಿತರ ಚೀಟಿಗಳು, ಮೂರು ಲಕ್ಷ ಪಿಂಚಣಿಗಳನ್ನು ರದ್ದುಗೊಳಿಸಲಾಯಿತು ಇದು ಹಸಿವಿನಿಂದ ಹಲವಾರು ಬುಡಕಟ್ಟು, ದಲಿತರ ಸಾವಿಗೆ ಕಾರಣವಾಯಿತು ಎಂದು ಸೊರೆನ್ ಆರೋಪಿಸಿದರು.

ಬಿಜೆಪಿ ಆಡಳಿತದಲ್ಲಿ ಹಸಿವಿನಿಂದ ಸಾವುಗಳು ಸಾಮಾನ್ಯವಾಗಿದ್ದರೆ, ನಿಮ ಅಬುವಾ (ನಮ) ಸರ್ಕಾರದಲ್ಲಿ, ಪ್ರತಿಯೊಬ್ಬ ಜಾರ್ಖಂಡಿಯವರು ತಮ ಹಕ್ಕುಗಳ ಪ್ರಕಾರ ಪಡಿತರ, ಪಿಂಚಣಿ ಮತ್ತು ಪೌಷ್ಟಿಕಾಂಶವನ್ನು ಪಡೆಯುತ್ತಿದ್ದಾರೆ ಎಂದು ನನಗೆ ಹೆಮೆ ಇದೆ ಎಂದು ಸೊರೆನ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

**ಜಾರ್ಖಂಡ್‌ನಲ್ಲಿ ಮತ್ತೆ ನಮ ಸರ್ಕಾರ ರಚನೆಯಾದ ತಕ್ಷಣ ಸಾರ್ವಜನಿಕ ವಿತರಣಾ ವ್ಯವಸ್ಥೆಯಲ್ಲಿ ಪ್ರತಿ ವ್ಯಕ್ತಿಗೆ 5 ಕೆಜಿ ಧಾನ್ಯದ ಬದಲಿಗೆ 7 ಕೆಜಿ ಧಾನ್ಯವನ್ನು ನೀಡಲಾಗುವುದು, ಪಿಂಚಣಿ ಮೊತ್ತವನ್ನು ಸಹ ಹೆಚ್ಚಿಸಲಾಗುವುದು. ಸಬ್ಸಿಡಿ ಧಾನ್ಯಗಳಿಂದ ಹೊರಗುಳಿದಿರುವ ಹೆಚ್ಚುವರಿ 10 ಲಕ್ಷ ಜನರನ್ನು ಪಿಡಿಎಸ್ ವ್ಯವಸ್ಥೆಗೆ ಸೇರಿಸಲಾಗುವುದು ಎಂದರು.**


ಮೈಯಾನ್ ಸಮಾನ್ ಯೋಜನೆ ಅಡಿಯಲ್ಲಿ, ಮಹಿಳಾ ಫಲಾನುಭವಿಗಳಿಗೆ ಮಾಸಿಕ 2,500 ರೂ., ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟದಲ್ಲಿ ಹಣ್ಣು, ಮೊಟ್ಟೆಗಳನ್ನು ನೀಡಲಾಗುತ್ತದೆ.

# ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್‌ಗೆ ಬೆದರಿಕೆ

## ಯೋಗಿಗೆ ಕೊಲೆ ಬೆದರಿಕೆ ಹಾಕಿದ್ದು ಒಬ್ಬ ಮಹಿಳೆ, ಆರೋಪಿಯನ್ನು ಬಂಧಿಸಿದ ಮುಂಬೈ ಪೊಲೀಸರು

**ಮುಂಬೈ:** ಮುಂದಿನ 10 ದಿನಗಳಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ಇಲ್ಲವಾದರೆ, ಮುಂಬೈನಲ್ಲಿ ಇತ್ತೀಚೆಗೆ ಎನ್ ಸಿಪಿ ನಾಯಕ ಬಾಬಾ ಸಿದ್ದಿಕಿಯವರ ಹತ್ಯೆ ಆದ ರೀತಿಯಲ್ಲೇ ಯೋಗಿಯವರ ಹತ್ಯೆಯೂ ಆಗಲಿದೆ ಎಂದು ಅನಾಮಿಕನೊಬ್ಬ ಮುಂಬೈ ಪೊಲೀಸರಿಗೆ ಬೆದರಿಕೆ ಕರೆ ಮಾಡಿದ್ದು, ಈ ವಿಚಾರ ಭಾರೀ ಸದ್ದು ಮಾಡಿದೆ. ಮುಂಬೈ ಪೊಲೀಸರಿಗೆ ಬೆದರಿಕೆ ಬಂದಿರುವ ಹಿನ್ನೆಲೆಯಲ್ಲಿ ಉತ್ತರ ಪ್ರದೇಶದಲ್ಲಿ ಸಿಎಂ ಯೋಗಿ ಆದಿತ್ಯನಾಥ್ ಅವರ ಭದ್ರತೆಯನ್ನು ಹೆಚ್ಚಿಸಲಾಗಿದೆ.

ಮುಂಬೈ ಪೊಲೀಸರಿಗೆ ಬೆದರಿಕೆ ಬಂದಿರುವ ಹಿನ್ನೆಲೆ ಯಲ್ಲಿ ಉತ್ತರ ಪ್ರದೇಶದಲ್ಲಿ ಸಿಎಂ ಯೋಗಿ ಆದಿತ್ಯನಾಥ್ ಅವರ ಭದ್ರತೆಯನ್ನು ಹೆಚ್ಚಿಸಲಾಗಿದೆ.



ಪ್ರಕರಣದ ಬೆನ್ನು ಹತ್ತಿದ್ದ ಪೊಲೀಸರು 24 ವರ್ಷದ ಯುವತಿಯೊಬ್ಬಳನ್ನು ವಶಕ್ಕೆ ಪಡಿಸಿ ಕೊಂಡು ವಿಚಾರಣೆಗೊಳಪಡಿಸಿದ್ದಾರೆ. ಆಕೆಯನ್ನು ಫಾತಿಮಾ ಖಾನ್ ಎಂದು ಗುರುತಿಸಲಾಗಿದೆ.

ಆಕೆ ಮಹಾರಾಷ್ಟ್ರದ ಥಾಣೆ ವ್ಯಾಪ್ತಿಯಲ್ಲಿರುವ ಉಲ್ಲಾಸ್ ನಗರ್‌ನಲ್ಲಿ ವಾಸವಾಗಿದ್ದಾರೆ. ಆಕೆಯು ಇನ್ಫಾರ್ಮೇಶನ್ ಟೆಕ್ನಾಲಜಿಯಲ್ಲಿ ಸ್ನಾತಕ ಡಿಗ್ರಿ ವ್ಯಾಸಂಗ ಮಾಡುತ್ತಿದ್ದಾರೆ. ವಿಚಾರಣೆ ವೇಳೆ ಆಕೆಯು ಮಾನಸಿಕವಾಗಿ ಅಸ್ವಸ್ಥೆಯೆಂದು ಹೇಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಆದರೂ, ಈ ಪ್ರಕರಣವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಈಕೆಯ ಈ ಬೆದರಿಕೆ ಹಾಕುವುದರ ಹಿಂದೆ ಯಾರಾದರೂ ಇದ್ದಾರೆಯೇ, ಆಕೆಯ ಸ್ನೇಹಿತರಲ್ಲಿ ಯಾರಾದರೂ ಅನುಮಾನಾಸ್ಪದ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆಯೇ ಎಂಬಿತ್ಯಾದಿ ವಿಚಾರಗಳ ಬಗ್ಗೆ ತನಿಖೆ ನಡೆಸಲಾಗುತ್ತದೆ ಎಂದು ಪೊಲೀಸರು ತಿಳಿಸಿದ್ದಾರೆ. ಸದ್ಯಕ್ಕೆ ಫಾತೀಮಾ ಅವರನ್ನು ಮುಂಬೈಗೆ ಕರೆತರಲಾಗಿದೆ. ಆಕೆಯನ್ನು ವಿಚಾರಣೆಗೊಳಪಡಿಸುವ ಸಲುವಾಗಿ ಆಕೆಗೆ ಕಾನೂನುಬದ್ಧ ನೋಟಿಸ್ ಕೂಡ ಜಾರಿಗೊಳಿಸಲಾಗಿದೆ. ಅಷ್ಟೇ ಅಲ್ಲದೆ, ಆಕೆಯ ಮಾನಸಿನ ಸಮತೋಲದ ಪರೀಕ್ಷೆಯನ್ನೂ ನಡೆಸಲು ಉದ್ದೇಶಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

**ಶನಿವಾರ ಬಂದಿದ್ದ ಬೆದರಿಕೆ:** ಮುಂಬೈ ಪೊಲೀಸ್ ಟ್ರಾಫಿಕ್ ಕಂಟ್ರೋಲ್ ರೂಂಗೆ ಶನಿವಾರ ಈ ಬೆದರಿಕೆ ಕರೆ ಬಂದಿದ್ದು, ಅದರ ಬೆನ್ನು ಹತ್ತಿರುವ ಪೊಲೀಸರು ಕರೆಯನ್ನು ಮಾಡಿರುವವ ತಲಾಷ್ ನಲ್ಲಿದ್ದರು. ಈ ಕುರಿತಂತೆ ಮಾಹಿತಿ ನೀಡಿರುವ ಹಿರಿಯ ಪೊಲೀಸ್ ಅಧಿಕಾರಿಗಳು, ಇಂಥದ್ದೊಂದು ಕರೆ ಬಂದಿರುವುದು ನಿಜ. ಕರೆ ಎಲ್ಲಿಂದ ಬಂತು, ಯಾರು ಮಾಡಿದರು ಎಂಬುದನ್ನು ಪತ್ತೆ ಮಾಡಲು ತಂಡವೊಂದನ್ನು ಆ್ಯಂಟಿ ಟೆರರಿಸಂ ಸ್ಕ್ವಾಡ್ (ಎಟಿಎಸ್) ರಚಿಸಿದ್ದೇವೆ ಎಂದು ಹೇಳಿದ್ದರು.

- **10 ದಿನಗಳಲ್ಲಿ ಸಿಎಂ ಹುದ್ದೆಗೆ ರಾಜೀನಾಮೆ ಕೊಡದಿದ್ದರೆ ಕೊಲ್ಲುವುದಾಗಿ ಮುಂಬೈ ಪೊಲೀಸರಿಗೆ ಸಂದೇಶ.**
- **ಮಹಾರಾಷ್ಟ್ರದ ಥಾಣೆಯ ಉಲ್ಲಾಸ್ ನಗರ್ ನ ನಿವಾಸಿ ಫಾತಿಮಾ (24) ಎಂಬುವರನ್ನು ವಶಕ್ಕೆ ಪಡೆದ ಪೊಲೀಸರು.**

**ಟ್ರಾಫಿಕ್ ಪೊಲೀಸ್ ಕಂಟ್ರೋಲ್ ರೂಮ್‌ಗೆ ಕರೆ ಮಾಡಿದ್ದ ವ್ಯಕ್ತಿ**

**ಉತ್ತರ ಪ್ರದೇಶದ ಮುಖ್ಯಮಂತ್ರಿ, ಯೋಗಿ ಆದಿತ್ಯನಾಥ್ ಅವರಿಗೆ ಅನಾಮಿಕ ವ್ಯಕ್ತಿಯೊಬ್ಬ ಅನೇರವಾಗಿ ಬೆದರಿಕೆ ಒಡ್ಡಿದ್ದ. ಮುಂಬೈ ಟ್ರಾಫಿಕ್ ಪೊಲೀಸ್ ಕಂಟ್ರೋಲ್ ರೂಮ್‌ಗೆ ಕರೆ ಮಾಡಿದ್ದ ವ್ಯಕ್ತಿಯೊಬ್ಬ, ಇನ್ನು 10 ದಿನಗಳಲ್ಲಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ರಾಜೀನಾಮೆ ಸಲ್ಲಿಸದಿದ್ದರೆ ಅವರನ್ನು ಮುಂಬೈನಲ್ಲಿ ಇತ್ತೀಚೆಗೆ ಕೊಲ್ಲಲ್ಪಟ್ಟ, ಮಾಜಿ ಸಚಿವ ಬಾಬಾ ಸಿದ್ದಿಕಿಯವರಂತೆಯೇ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದ. ತನಿಖೆ ನಡೆಸದಿ ಪೊಲೀಸರು ಮುಂಬೈನ ಥಾಣೆ ವ್ಯಾಪ್ತಿಯಲ್ಲಿರುವ ಉಲ್ಲಾಸ್ ನಗರ್ ನ ನಿವಾಸಿಯಾದ ಫಾತಿಮಾ (24) ಎಂಬುವರನ್ನು ವಶಕ್ಕೆ ಪಡೆದಿದ್ದಾರೆ.**

## ಮಿನಿ ನ್ಯೂಸ್

### ಇರಾನ್‌ನ ಯೂನಿವರ್ಸಿಟಿಯಲ್ಲಿ ಹಿಜಾಬ್ ವಿರುದ್ಧ ಅರೆನಗ್ನವಾಗಿ ಪ್ರತಿಭಟಿಸಿದ ಯುವತಿ

**ದುಬೈ:** ಹಿಜಾಬ್ ವಿರುದ್ಧದ ಪ್ರತಿಭಟನಾರ್ಥವಾಗಿ ಯುವತಿಯೊಬ್ಬರು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ಲ್ಲಿಯೇ ಬಟ್ಟೆ ಬಿಚ್ಚಿ ಒಳ ಉಡುಪಿನಲ್ಲಿ ತಿರುಗಾಡಿರುವ ಘಟನೆ ಇರಾನ್ ನಲ್ಲಿ ಇತ್ತೀಚೆಗೆ ನಡೆದಿದೆ. ಟೆಹರಾನ್‌ನ ಇಸ್ಲಾಮಿಕ್ ಅಜಾದ್ ವಿಶ್ವವಿದ್ಯಾಲಯದಲ್ಲಿ ಈ ಘಟನೆ ನಡೆದಿರುವುದು ಬೆಳಕಿಗೆ ಬಂದಿದೆ. ಇರಾನ್‌ನಲ್ಲಿ ಆಚರಣೆಯಲ್ಲಿರುವ ಕಟ್ಟುನಿಟ್ಟಾದ ವಸ್ತ್ರಸಂಹಿತೆ ಹಾಗೂ ನೈತಿಕ ಪೊಲೀಸ್‌ಗಿರಿ ವಿರುದ್ಧ ಪ್ರತಿಭಟಿಸಲೆಂದೇ ಈ ಯುವತಿ ಒಳ ಉಡುಪಿನಲ್ಲಿ ಸಾರ್ವಜನಿಕವಾಗಿ ತಿರುಗಾಡಿದ್ದಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹಲವರು ವಿಡಿಯೊ ಸಮೇತ ಹೇಳಿರುವುದನ್ನು ಉಲ್ಲೇಖಿಸಿ ಸುದ್ದಿಸಂಸ್ಥೆ ರಾಯಿಟರ್ಸ್ ವರದಿ ಮಾಡಿದೆ. ಆದರೆ, ಈ ಬಗ್ಗೆ ಎಕ್ಸ್‌ನಲ್ಲಿ ಪ್ರತಿಕ್ರಿಯೆ ನೀಡಿರುವ ವಿಶ್ವವಿದ್ಯಾಲಯದ ವಕ್ತಾರ ಅಮೀರ್ ಮಹಜೋಬ್, ಕ್ಯಾಂಪಸ್‌ನಲ್ಲಿ ಒಳ ಉಡುಪಿನಲ್ಲಿ ತಿರುಗಾಡಿರುವ ಯುವತಿ ಮಾನಸಿಕ ಅಸ್ವಸ್ಥೆ. ಸದ್ಯ ಅವಳನ್ನು ಪೊಲೀಸರು ಬಂಧಿಸಿದ್ದಾರೆ' ಎಂದು ತಿಳಿಸಿದ್ದಾರೆ.

ಯುವತಿಯೊಬ್ಬಳು ಸಾರ್ವಜನಿಕವಾಗಿ ಒಳ ಉಡುಪಿನಲ್ಲಿ ಕಾಣಿಸಿಕೊಳ್ಳುವುದು ಇರಾನ್ ಮಹಿಳೆಯರಿಗೆ ದುಸ್ವಪ್ನವಾಗಿದೆ. ಆದರೆ, ಹಿಜಾಬ್ ಕಡ್ಡಾಯ ಎಂಬ ಮೂರ್ಖತನಕ್ಕೆ ಇದು ಪ್ರತಿಕ್ರಿಯೆಯಾಗಿದೆ' ಎಂದು ಲೈಲಾ ಎನ್ನುವರು ಎಕ್ಸ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಇರಾನ್‌ನಲ್ಲಿ ಇತ್ತೀಚೆಗೆ ಹಿಜಾಬ್ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ. ಅದರಲ್ಲೂ 2022 ರಲ್ಲಿ ಪೊಲೀಸ್ ಕಸ್ಟಡಿಯಲ್ಲಿರುವಾಗಲೇ ಮೃತಪಟ್ಟಿದ್ದ ಮಾಶಾ ಅಮಿನಿ ಘಟನೆ ನಂತರ ಹಿಜಾಬ್ ವಿರುದ್ಧದ ಪ್ರತಿಭಟನೆಯಲ್ಲಿ ಮಹಿಳೆಯರು ಸೇರಿದಂತೆ ಸುಮಾರು 551 ಜನ ಮೃತಪಟ್ಟಿದ್ದರು.

### ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಕಮಾಂಡರ್ ಹತ್ಯೆ ಮಾಡಿದ್ದೇವೆ: ಇಸ್ರೇಲ್ ಸೇನೆ

**ಜೆರುಸಲೇಂ:** ಲೆಬನಾನ್‌ನ ದಕ್ಷಿಣ ಭಾಗದಲ್ಲಿ ಹಿಜ್ಬುಲ್ಲಾದ ನಕ್ಸರ್ ಬ್ರಿಗೇಡ್ ರಾಕೆಟ್ ಘಟಕದ ಕಮಾಂಡರ್ ಅನ್ನು ಹತ್ಯೆ ಮಾಡಿರುವುದಾಗಿ ಇಸ್ರೇಲ್ ಸೇನೆ ಶನಿವಾರ ಘೋಷಿಸಿದೆ. 2023ರ ಅಕ್ಟೋಬರ್‌ನಲ್ಲಿ ಇಸ್ರೇಲ್ ಮೇಲೆ ನಡೆದ ಸರಣಿ ದಾಳಿಗೆ, ಸದ್ಯ ಹತ್ಯೆಯಾಗಿರುವ ಕಮಾಂಡರ್ ಕಾರಣನಾಗಿದ್ದ ಎಂದು ಹೇಳಿದೆ. ಈ ಬಗ್ಗೆ ಹಿಬ್ಬುಲ್ಲಾ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಗಾಜಾ ಪಟ್ಟಿಯ ದಕ್ಷಿಣದಲ್ಲಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದ ಇಸ್ರೇಲ್‌ನ ಇಬ್ಬರು ಯೋಧರು ಹತರಾಗಿದ್ದಾರೆ. ಇದರೊಂದಿಗೆ, ಹಮಾಸ್ ವಿರುದ್ಧ ಸಂಘರ್ಷದ ವೇಳೆ 2023ರ ಅಕ್ಟೋಬರ್‌ನಿಂದ ಪ್ಯಾಲೆಸ್ಟೀನ್‌ನಲ್ಲಿ ಮೃತಪಟ್ಟ ಇಸ್ರೇಲ್ ಸೈನಿಕರ ಸಂಖ್ಯೆ 780ಕ್ಕೆ ಏರಿಕೆಯಾಗಿದೆ.

### ಪೋಲಿಯೊ ಅಭಿಯಾನ ನಡೆಯುತ್ತಿದ್ದ ಗಾಜಾದ ಆಸ್ಪತ್ರೆ ಮೇಲೆ ದಾಳಿ

**ಕೈರೊ:** ಪೋಲಿಯೊ ಲಸಿಕೆ ನೀಡಲಾಗುತ್ತಿದ್ದ ಉತ್ತರ ಗಾಜಾದ ಆಸ್ಪತ್ರೆ ಮೇಲೆ ಇಸ್ರೇಲ್ ಪಡೆಗಳು ಡ್ರೋನ್ ದಾಳಿ ನಡೆಸಿದ್ದರಿಂದ ನಾಲ್ವರು ಮಕ್ಕಳು ಸೇರಿ ಆರು ಮಂದಿ ಗಾಯಗೊಂಡಿದ್ದಾರೆ ಎಂದು ಪ್ಯಾಲೆಸ್ಟೀನ್ ಅಧಿಕಾರಿಗಳು ತಿಳಿಸಿದ್ದಾರೆ. ಆದರೆ ಇದನ್ನು ಇಸ್ರೇಲ್ ಸೇನೆ ನಿರಾಕರಿಸಿದೆ. ಶನಿವಾರ ಈ ದಾಳಿ ನಡೆದಿದೆ ಎನ್ನಲಾಗಿದ್ದು, ಕಳೆದೊಂದು ವರ್ಷದಿಂದ ಈ ಪ್ರದೇಶವನ್ನು ಇಸ್ರೇಲ್ ಪಡೆಗಳು ಸುತ್ತುವರಿದಿವೆ. ಗಾಜಾ ನಗರದಲ್ಲಿರುವ ಶೇಖ್ ರದ್ದನ್ ಕ್ಲಿನಿಕ್ ಮೇಲೆ ಶನಿವಾರ ಮಧ್ಯಾಹ್ನ ಇಸ್ರೇಲ್ ಪಡೆಗಳು ದಾಳಿ ನಡೆಸಿದೆ. ವಿಶ್ವಸಂಸ್ಥೆಯ ಪ್ರತಿನಿಧಿಗಳು ತೆರಳಿದ ಕೂಡಲೇ ದಾಳಿ ನಡೆಸಲಾಗಿದೆ ಎಂದು ಗಾಜಾ ಆರೋಗ್ಯ ಸಚಿವಾಲಯದ ನಿರ್ದೇಶಕ ಡಾ. ಮುನೀರ್ ಅಲ್-ಬೌರುಷ್ ತಿಳಿಸಿದ್ದಾರೆ.

ವಿಶ್ವಸಂಸ್ಥೆ ಹಾಗೂ ಯುನಿಸೆಫ್ ಜಂಟಿಯಾಗಿ ಸ್ಥಳದಲ್ಲಿ ಪೋಲಿಯೋ ಅಭಿಯಾನ ನಡೆಸುತ್ತಿದ್ದವು. ದಾಳಿಯ ಬಗ್ಗೆ ಅವುಗಳು ಕಳವಳ ವ್ಯಕ್ತಪಡಿಸಿವೆ. ಮಕ್ಕಳಿಗೆ ಪೋಲಿಯೊ ಲಸಿಕೆ ನೀಡಲಾಗುತ್ತಿದ್ದ ಶೇಖ್ ರದ್ವಾನ್ ಕ್ಲಿನಿಕ್ ಮೇಲೆ ದಾಳಿ ನಡೆದಿರುವ ವರದಿಗಳು ನೋವುಂಟು ಮಾಡಿದೆ' ಎಂದು ಯುನಿಸೆಫ್ ವಕ್ತಾರ ರೊಸಾಲಿಯಾ ಬೊಲ್ಲೆನ್ ಹೇಳಿದ್ದಾರೆ. ಮಾನವೀಯ ನೆರವಿನ ವಿರಾಮ ಜಾರಿಯಲ್ಲಿರುವಾಗಲೇ ದಾಳಿ ನಡೆದಿದೆ. ಬೆಳಿಗ್ಗೆ 6 ಗಂಟೆಯಿಂದ ಸಂಜೆ 4ರವರೆಗೆ ದಾಳಿ ನಡೆಸುವುದಿಲ್ಲ ಎಂದು ಭರವಸೆ ನೀಡಿದ್ದರೂ, ಅದು ಪಾಲನೆಯಾಗಿಲ್ಲ' ಎಂದು ಹೇಳಿದ್ದಾರೆ. ನಿರ್ದಿಷ್ಟ ಸಮಯದಲ್ಲಿ ಆ ಪ್ರದೇಶದಲ್ಲಿ ದಾಳಿ ಮಾಡಲಿಲ್ಲ ಎಂದು ಇಸ್ರೇಲ್ ಸೇನೆಯ ವಕ್ತಾರ ಲೆಫ್ಟಿನೆಂಟ್ ಕರ್ನಲ್ ನಾಡವ್ ಶೋಶನಿ ಹೇಳಿದ್ದಾರೆ. ಅಕ್ಟೋಬರ್ 23ರಂದು ನಡೆಯಬೇಕಿದ್ದ ಈ ಪೋಲಿಯೊ ಅಭಿಯಾನವು, ಇಸ್ರೇಲಿ ಬಾಂಬ್ ದಾಳಿ, ಸಾಮೂಹಿಕ ಸ್ಥಳಾಂತರದ ಆದೇಶ, ಮಾನವೀಯ ನೆರವಿಗೆ ನೀಡುವ ವಿರಾಮಗಳ ಬಗ್ಗೆ ಭರವಸೆ ನೀಡದಿದ್ದರಿಂದ ಶನಿವಾರಕ್ಕೆ ಮುಂದೂಡಲಾಗಿತ್ತು ಎಂದು ವಿಶ್ವಸಂಸ್ಥೆ ತಿಳಿಸಿದೆ.

### ರಾಜತಾಂತ್ರಿಕ ಬಿಕ್ಕಟ್ಟಿನ ನಡುವೆಯೇ ದೀಪಾವಳಿ ಆಚರಿಸಿದ ಕೆನಡಾ ಪ್ರಧಾನಿ



**ನವದೆಹಲಿ:** ಭಾರತ-ಕೆನಡಾ ರಾಜತಾಂತ್ರಿಕ ಬಿಕ್ಕಟ್ಟಿನ ನಡುವೆಯೇ ಕೆನಡಾ ಪ್ರಧಾನಿ ಜಸ್ಟಿನ್ ಟ್ರುಡೊ ಅವರು ದೀಪಾವಳಿ ಆಚರಣೆಯಲ್ಲಿ ಭಾಗಿಯಾಗಿರುವ ವಿಡಿಯೋವನ್ನು ಹಂಚಿಕೊಂಡಿದ್ದಾರೆ. ಎಲ್ಲರಿಗೂ ದೀಪಾವಳಿ ಹಬ್ಬದ ಶುಭಾಶಯಗಳು. ಈ ವಾರ ಹಿಂದೂ ಸಮುದಾಯದೊಂದಿಗೆ ದೀಪಾವಳಿ ಆಚರಿಸಲಾಗಿದೆ. ಈ ವಿಶೇಷ ಕ್ಷಣಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ' ಎಂದು ಎಕ್ಸ್‌ನಲ್ಲಿ ಟ್ರುಡೊ ಹೇಳಿದ್ದಾರೆ. ಇದೇ ವೇಳೆ ಕೈಗೆ ಕಟ್ಟಿರುವ ಕೆಂಪು ದಾರವನ್ನು ಪ್ರದರ್ಶಿಸಿರುವ ಅವರು, 'ಕಳೆದ ಕೆಲವು ದಿನಗಳಲ್ಲಿ ಕೆನಡಾದ ಮೂರು ದೇವಸ್ಥಾನಕ್ಕೆ ಭೇಟಿ ನೀಡಿದ್ದು, ಅಲ್ಲಿ ಈ ದಾರಗಳನ್ನು ಕಟ್ಟಿದ್ದಾರೆ. ಹಿಂದೂ ಸಂಪ್ರದಾಯದಲ್ಲಿ ಇವುಗಳಿಗೆ ಅದರದ್ದೇ ಆದ ಮಹತ್ವವಿದ್ದು, ಅವಾಗಿಯೇ ಕಳಚುವವರೆಗೆ ನಾನು ಅವುಗಳನ್ನು ಬಿಚ್ಚುವುದಿಲ್ಲ' ಎಂದು ಹೇಳಿದ್ದಾರೆ. ಅಲ್ಲಿದ್ದ ವ್ಯಾಪಾರಿಯೊಬ್ಬರು ದೀಪಾವಳಿಯ ವಿಶೇಷ ತಿನಿಸು ಜಿಲೇಬಿಯನ್ನು ಟ್ರುಡೊ ಅವರಿಗೆ ಸವಿಯಲು ನೀಡಿದ್ದು, ನಮ್ಮ ತಂಡದವರಿಗೂ ಇದನ್ನು ನೀಡುತ್ತೇನೆ ಎಂದು ಟ್ರುಡೊ ಹೇಳಿದ್ದಾರೆ. ಖಾಲಿಸ್ತಾನಿ ಪ್ರತ್ಯೇಕತಾವಾದಿ ಹರ್ದೀಪ್ ಸಿಂಗ್ ನಿಜ್ಜರ್ ಹತ್ಯೆಗೆ ಸಂಬಂಧಿಸಿದಂತೆ ಉಭಯ ರಾಷ್ಟ್ರಗಳ ರಾಜತಾಂತ್ರಿಕ ಸಂಬಂಧದಲ್ಲಿ ಒಡಕು ಮೂಡಿದ್ದು, ಆರೋಪ-ಪ್ರತ್ಯಾರೋಪಗಳು ಕೇಳಿಬಂದಿವೆ. ನಿಜ್ಜರ್ ಹತ್ಯೆಯಲ್ಲಿ ಗೃಹ ಸಚಿವ ಅಮಿತ್ ಶಾ ಅವರ ಕೈವಾಡವಿದೆ ಎಂದು ಕೆನಡಾ ಇತ್ತೀಚೆಗೆ ಆರೋಪಿಸಿತ್ತು.

ಉದಯ ವಾಹಿನಿ
www.udayavahini.in
epaper.udayavahini.in
Udaya vahini news



Udaya vahini news
Udayavahini news youtube
udayavahininews@gmail. com
ಸೋಮವಾರ
04 ನವೆಂಬರ್ 2024





# ಪ್ರೇಮ್ ಬಗ್ಗೆ ನಟಿ ಶಾಕಿಂಗ್ ಹೇಳಿಕೆ

ಜೋಗಿ ಸಿನಿಮಾ ಖ್ಯಾತಿಯ ನಿರ್ದೇಶಕ ಪ್ರೇಮ್ ಬಗ್ಗೆ ಶಾಕಿಂಗ್ ಸಂಗತಿಯೊಂದನ್ನು ನಟಿಯೊಬ್ಬರು ಬಹಿರಂಗ ಪಡಿಸಿದ್ದಾರೆ. ಅದು ಅಂತಿಂಥ ಸುದ್ದಿಯಲ್ಲ, ಪ್ರೇಮ್ ಬಗ್ಗೆ ಯಾರಿಗೂ ಗೊತ್ತಿರದ ಸಂಗತಿಯೇ ಸರಿ! ಬಹುಶಃ ಈ ಸುದ್ದಿ ನಿರ್ದೇಶಕ ಪ್ರೇಮ್ ಪತ್ನಿ ರಕ್ಷಿತಾ ಅವರಿಗೂ ಗೊತ್ತಿರೋದು ಡೌಟ್! ಹಾಗಿದ್ದರೆ, ಪ್ರೇಮ್ ಬಗ್ಗೆ ಏನೋ ಸೀಕ್ರೆಟ್ ಹೇಳಿರೋ ನಟಿ ಯಾರು ಅವರು ಹೇಳಿದ್ದಾದರೂ ಏನು'ನಿರ್ದೇಶಕರಾದ ಪ್ರೇಮ್ ಅವರು ಪ್ರೀತಿಸಿ ಮದುವೆಯಾಗಿದ್ದಾರೆ ಎಂದು ಗೊತ್ತಾದಾಗ ನನಗೆ ನಿಜವಾಗಿಯೂ ಶಾಕ್ ಆಗಿತ್ತು. ಅವರು ಪ್ರೀತ್ಸೋದಾ ಅದು ಹೇಗೆ ಸಾಧ್ಯ ಎನಿಸಿತ್ತು. ಏಕೆಂದರೆ, ಅವರು ಹೆಣ್ಣುಮಕ್ಕಳನ್ನು ಜಾಸ್ತಿ ಮಾತನಾಡಿಸುವವರಲ್ಲ, ಶೂಟಿಂಗ್ ಸ್ಪಾಟ್‌ನಲ್ಲಿ ಕೂಡ ಮುಟ್ಟುವವರಲ್ಲ, ದೂರದಿಂದಲೇ ನಟಿಸಿ ತೋರಿಸುತ್ತಿದ್ದರು. ಅವರೊಬ್ಬ ಮಹಾ ಜಂಟಲ್‌ಮ್ಯಾನ್. ಆದರೆ ಕೊನೆಗೆ ನೋಡಿದರೆ, ಅವರು ಖ್ಯಾತ ನಟಿಯನ್ನೇ ಮದುವೆಯಾಗಿದ್ದಾರೆ. ನನಗೆ ನಿಜವಾಗಿಯೂ ಅಚ್ಚರಿಯಾಯ್ತು..! ಎಂದಿದ್ದಾರೆ ಅಭಿನಯಶ್ರೀ!

ಈ ಅಭಿನಯಶ್ರೀ ಯಾರು ಎಂಬುದು ಬಹುತೇಕರಿಗೆ ಗೊತ್ತು. ಕನ್ನಡದ ಸ್ಟಾರ್ ನಟ, ಹಾಗೂ ಸದ್ಯ ಕೊಲೆ ಕೇಸ್ ಆರೋಪಿಯಾಗಿರುವ ನಟ ದರ್ಶನ್ ಅಭಿನಯದ 'ಕರಿಯ' ಸಿನಿಮಾದಲ್ಲಿ ನಾಯಕಿಯಾಗಿ ನಟಿಸಿದ್ದರು. ದರ್ಶನ್-ಅಭಿನಯಶ್ರೀ ಜೋಡಿಯ ಕರಿಯ ಸಿನಿಮಾವನ್ನು ಇದೇ ಪ್ರೇಮ್ ನಿರ್ದೇಶನ ಮಾಡಿದ್ದಾರೆ.






# ಈಗ ವಿದೇಶದಲ್ಲಿರುವ ಸ್ಟಾರ್ ನಟಿಯರು

ಸೌತ್ ಇಂಡಿಯನ್ ಸಿನಿಮಾಗಳಲ್ಲಿ, ಕೆಲವರು ಬಾಲಿವುಡ್‌ನಲ್ಲಿಯೂ ನಟಿಸಿ, ಕನ್ನಡ ಸಿನಿಮಾಗಳಲ್ಲಿಯೂ ಕಾಣಿಸಿಕೊಂಡಿರುವ, ಆದರೆ ಈಗ ನಟನೆಯನ್ನೇ ಬಿಟ್ಟಿರುವ ನಟಿಯರು ಇವರು! ಈ ಲಿಸ್ಟ್‌ನಲ್ಲಿ ನಿಮಗೆ ಯಾರೆಲ್ಲ ನೆನಪಾಗುತ್ತಾರೆ. ಅವರೆಲ್ಲರೂ ಸ್ಟಾರ್ ನಟಿಯರು, ಅದರಲ್ಲೂ ಒಬ್ಬರು ಕನ್ನಡದ ಮೇರು ನಟ ಡಾ ರಾಜ್‌ಕುಮಾರ್ ಅವರ ಜೊತೆ ಕೂಡ ನಟಿಸಿರುವ ಸೀನಿಯರ್ ನಟಿ! ನಿಮ್ಮಲ್ಲಿ ಈಗ ಸಾಕಷ್ಟು ಕುತೂಹಲ ಸೃಷ್ಟಿಯಾಗಿದೆ ಗೊತ್ತು, ಮತ್ಯಾಕೆ ತಡ, ನೋಡಿ ಯಾರವರು ಅಂತ..! ನಟಿ ರಂಭಾ ಬಹುತೇಕರಿಗೆ ಗೊತ್ತು. ಒಂದು ಕಾಲದಲ್ಲಿ ಸ್ಟಾರ್ ನಟಿಯಾಗಿದ್ದ ರಂಭಾ, ದಕ್ಷಿಣ ಭಾರತದ ಬಹುತೇಕ ಎಲ್ಲಾ ಸ್ಟಾರ್ ಹೀರೋಗಳೊಂದಿಗೂ ತೆರೆ ಹಂಚಿಕೊಂಡಿದ್ದಾರೆ. ತಮಿಳಿನಲ್ಲಿ ವಿಜಯ್, ಸೂರ್ಯ ಸೇರಿದಂತೆ, ಕನ್ನಡದಲ್ಲಿ ಶಿವರಾಜ್‌ಕುಮಾರ್ ಜೊತೆ ನಟಿಸಿದ್ದಾರೆ ರಂಭಾ. ಬಾಲಿವುಡ್ ಸಿನಿಮಾದಲ್ಲಿ ಕೂಡ ಕಾಣಿಸಿಕೊಂಡಿದ್ದ ರಂಭಾ ತಮ್ಮ ಮಾದಕ ಚೆಲುವು ಹಾಗೂ ಆಕರ್ಷಕ ಮೈ ಮಾಟದ ಮೂಲಕ ತುಂಬಾ ಫೇಮಸ್ ಆಗಿದ್ದವರು. ಅವರೀಗ ಮದುವೆಯಾಗಿ ವಿದೇಶದಲ್ಲಿ ಸಂಸಾರ ಮಾಡಿಕೊಂಡು ಹಾಯಾಗಿದ್ದಾರೆ. ಇನ್ನೊಬ್ಬರು ಸಿಂಧು ಮೆನನ್. ಮಲಯಾಳಂ ಮೂಲದ ನಟಿ ಸಿಂಧು ಮೆನನ್ ಸಹ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲಿ ನಟಿಸಿದ್ದಾರೆ. ಸುದೀಪ್ ನಟನೆಯ ನಂದಿ, ವಿಜಯ ರಾಘವೇಂದ್ರ ನಟನೆಯ ಖುಷಿ ಸೇರಿದಂತೆ ಹಲವಾರು ಸಿನಿಮಾಗಳಲ್ಲಿ ನಟಿಸಿದ್ದಾರೆ, ತಮಿಳು, ತೆಲುಗು,ಮಲಯಾಳಂನಲ್ಲಿ ಸಾಕಷ್ಟು ಮಿಂಚಿದ್ದ ಸಿಂಧು ಮೆನನ್ ಈಗ ಅಪ್ಪಟ ಗೃಹಿಣಿಯಾಗಿ ಫಾರಿನ್‌ನಲ್ಲಿ ಸೆಟ್ಲ್ ಆಗಿದ್ದಾರೆ. ಇನ್ನು ಹಿರಿಯ ನಟಿ ಮಾಧವಿ. ಕನ್ನಡದಲ್ಲಿ ಡಾ ರಾಜ್‌ಕುಮಾರ್, ವಿಷ್ಣುವರ್ಧನ್, ಅನಂತ್ ನಾಗ್ ಹಾಗೂ ಅಂಬರೀಷ್ ಜೊತೆ ನಟಿಸಿದ್ದ ಮಾಧವಿ ಅವರು ಕೂಡ ಒಂದು ಕಾಲದಲ್ಲಿ ಸ್ಟಾರ್ ಹೀರೋಯಿನ್.

# ಶ್ರೀಮುರಳಿ ಆರ್ಭಟ ಬಾಕ್ಸ್ ಆಫೀಸ್ ಶೇಕ್



ಎರಡು ದಿನಕ್ಕೆ 'ಬಘೀರ' ಗಳಿಸಿದ್ದೆಷ್ಟು ಕೋಟಿ

ರಾಜ್ ಅಭಿನಯದ 'ಬಘೀರ' ಸಿನಿಮಾವು ಅಕ್ಟೋಬರ್ 31ರಂದು ತೆರೆಕಂಡಿದೆ. ದೀಪಾವಳಿ ಹಬ್ಬದ ಪ್ರಯುಕ್ತ ಹೊಂಬಾಳೆ ಫಿಲ್ಮ್ಸ್ 'ಬಘೀರ' ಚಿತ್ರವನ್ನು ಗ್ರ್ಯಾಂಡ್ ಆಗಿ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ರಿಲೀಸ್ ಮಾಡಿದೆ. 'ಬಘೀರ' ಮೇಲೆ ಫ್ಯಾನ್ಸ್ ಕೂಡ ದೊಡ್ಡ ನಿರೀಕ್ಷೆಯನ್ನು ಇಟ್ಟುಕೊಂಡಿದ್ದರು. ಸದ್ಯ 'ಬಘೀರ' ಚಿತ್ರಮಂದಿರಗಳಲ್ಲಿ ಸೌಂಡ್ ಮಾಡುತ್ತಿದೆ. ಹಾಗಾದರೆ, ಮೊದಲ ಎರಡು ದಿನಗಳಿಗೆ ಈ ಸಿನಿಮಾ ಗಳಿಸಿದ್ದೆಷ್ಟು ಕೋಟಿ ಇಲ್ಲಿದೆ ಮಾಹಿತಿ.

'ರೋರಿಂಗ್ ಸ್ಟಾರ್' ಶ್ರೀಮುರಳಿ, ರುಕ್ಮಿಣಿ ವಸಂತ್, ಪ್ರಕಾಶ್ ರಾಜ್, 'ಗರುಡ' ರಾಮ್ ಮುಂತಾದವರು ನಟಿಸಿರುವ 'ಬಘೀರ' ಸಿನಿಮಾವು ಅಕ್ಟೋಬರ್ 31ರಂದು ದೀಪಾವಳಿ ಹಬ್ಬದ ಪ್ರಯುಕ್ತ ತೆರೆಕಂಡಿತ್ತು. 'ಮದಗಜ' ನಂತರ ತೆರೆಗೆ ಬಂದಿರುವ ಶ್ರೀಮುರಳಿ ಅವರ ಹೊಸ ಸಿನಿಮಾ ಇದಾಗಿದೆ. ಆಕ್ಷನ್ ಥ್ರಿಲ್ಲರ್ ಸಿನಿಮಾ ಇದಾಗಿದ್ದು, ಭರ್ಜರಿ ರೆಸ್ಪಾನ್ಸ್ ಪಡೆದುಕೊಳ್ಳುತ್ತಿದೆ. ಹಾಗಾದರೆ, ಈ ಸಿನಿಮಾ ಮೊದಲ ಎರಡು ದಿನಗಳಿಗೆ ಎಷ್ಟು ಕೋಟಿ ಕಲೆಕ್ಷನ್ ಮಾಡಿದೆ ಇಲ್ಲಿದೆ ಆ ಕುರಿತ ಮಾಹಿತಿ.

ಶ್ರೀಮುರಳಿ ಅವರ 'ಬಘೀರ' ಸಿನಿಮಾವು ಮೊದಲ ಎರಡು ದಿನಗಳಿಗೆ ಭರ್ತಿ 7 ಕೋಟಿ ರೂಪಾಯಿಗಳನ್ನು ಬಾಚಿಕೊಂಡಿದೆ ಎಂಬ ಮಾಹಿತಿ ಸಿಕ್ಕಿದೆ. ಮೊದಲ ದಿನದ (ಗುರುವಾರ ಅಕ್ಟೋಬರ್ 31) ಗಳಿಕೆಗಿಂತ ಎರಡನೇ ದಿನದ (ಶುಕ್ರವಾರ ನವೆಂಬರ್ 1) ಕಲೆಕ್ಷನ್ ಜಾಸ್ತಿ ಇದೆ ಎಂಬುದು ಮೂಲಗಳ ಮಾಹಿತಿ. ಇನ್ನು, ಶನಿವಾರ ಮತ್ತು ಭಾನುವಾರ ರಜೆ ಇರುವುದಿರಂದ ಗಳಿಕೆ ಪ್ರಮಾಣ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಮೊದಲ ವಾರಾಂತ್ಯಕ್ಕೆ 'ಬಘೀರ' ಸುಲಭವಾಗಿ 10 ಕೋಟಿ ರೂ.ಗಳಿಗೂ ಅಧಿಕ ಕಲೆಕ್ಷನ್ ಮಾಡಲಿದ್ದಾನೆ.

## ಪರಿಸ್ಥಿತಿಯ ಲಾಭ ಪಡೆಯಲು ಎಂದಿಗೂ ಮುಂದಾಗಿಲ್ಲ

ಬಚ್ಚನ್ ಕುಟುಂಬದಲ್ಲಿ ಯವುದೂ ಸರಿ ಇಲ್ಲ ಎಂಬ ಬಗ್ಗೆ ಮಾಧ್ಯಮಗಳಲ್ಲಿ ಚರ್ಚೆ ನಡೆಯುತ್ತಿದೆ. ದೀಪಾವಳಿ ಸಂದರ್ಭದಲ್ಲಿ ಐಶ್ವರ್ಯಾ ರೈ ತಮ್ಮ ಕುಟುಂಬದೊಂದಿಗೆ ಕಾಣಿಸಿಕೊಂಡಿರಲಿಲ್ಲ. ಅವರು ಕುಟುಂಬದಿಂದ ಅಂತರ ಕಾಯ್ದುಕೊಂಡಿದ್ದಾರೆ. ಇತ್ತ ಐಶ್ವರ್ಯಾ ಜನ್ಮದಿನಕ್ಕೆ ಅಭಿಷೇಕ್ ಕಡೆಯಿಂದ ವಿಶ್ ಬಂದಿಲ್ಲ. ಬಚ್ಚನ್ ಕುಟುಂಬದ ಸದಸ್ಯನಿಗೆ ಸಮಾಜದಲ್ಲಿ ದೊಡ್ಡ ಹೆಸರು ಇದೆ. ಅಂದಿನಿಂದ ಈ ಎಲ್ಲಾ ಸಂದರ್ಭಗಳಲ್ಲಿ ಜನರು ಐಶ್ವರ್ಯಾ ಅವರನ್ನು ಬೆಂಬಲಿಸಿದ್ದಾರೆ. ಜನರು ಐಶ್ವರ್ಯಾ ಅವರನ್ನು ಬೆಂಬಲಿಸಲು ಕಾರಣವೇನು ಐಶ್ವರ್ಯಾ ಅವರಿಂದ ಕಲಿಯಬೇಕಾದ ವಿಷಯಗಳೇನು ಆ ಬಗ್ಗೆ ಇಲ್ಲಿದೆ ಮಾಹಿತಿ.

ಐಶ್ವರ್ಯಾ ರೈ ಮತ್ತು ಬಚ್ಚನ್ ಕುಟುಂಬದ ಸದಸ್ಯರಾದ ಅಮಿತಾಭ್ ಬಚ್ಚನ್, ಜಯಾ ಬಚ್ಚನ್, ಶ್ವೇತಾ ಬಚ್ಚನ್ ನಂದಾ ಬಗ್ಗೆ ಹಲವು ವದಂತಿಗಳಿವೆ. ಐಶ್ವರ್ಯಾ ದೂರ ಆಗಲು ಅವರು ಕಾರಣ ಎನ್ನಲಾಗಿದೆ. ಆದರೆ ಅವರೆಲ್ಲರ ಬಗ್ಗೆ ಐಶ್ವರ್ಯಾ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ. ಈ ಪರಿಸ್ಥಿತಿಯ ಲಾಭ ಪಡೆಯಲು ಅವರು ಪ್ರಯತ್ನಿಸಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಅವರು ನಡೆದುಕೊಂಡಿದ್ದಾರೆ, ಅವರು ಮೌನವಾಗಿದ್ದರು ಮತ್ತು ಗಾಸಿಪ್‌ಗಳಿಗೆ ಹೆದರುವುದಿಲ್ಲ ಎಂದು ಸ್ಪಷ್ಟವಾಗಿ ತೋರಿಸಿದರು. ಈ ಸಂದರ್ಭಗಳಲ್ಲಿ ಅನೇಕರು ಈ ರೀತಿಯ ಪರಿಸ್ಥಿತಿಯ ಲಾಭವನ್ನು ಪಡೆಯಲು ಪ್ರಯತ್ನಿಸುತ್ತಾರೆ. ಆದರೆ ಐಶ್ವರ್ಯಾ ಆ ರೀತಿ ಏನನ್ನೂ ಪ್ರಯತ್ನಿಸಲಿಲ್ಲ. ಇದರಿಂದ ಜನರ ಮನಸ್ಸಿನಲ್ಲಿ ಅವರ ಬಗ್ಗೆ ಗೌರವ ಹೆಚ್ಚಿದೆ.


# ಬಚ್ಚನ್ ಜತೆ ನಿಮ್ರತ್ ಅಫೇರ್



ಅಮಿತಾಭ್ ಬಚ್ಚನ್ ಕುಟುಂಬದಲ್ಲಿ ಎಲ್ಲಾವೂ ಸರಿ ಇಲ್ಲವೇ ಖಂಡಿತ ಇಲ್ಲ ಎನ್ನುತ್ತವೇ ಕೆಲ ಮೂಲಗಳು. ನಟ ಅಭಿಷೇಕ್ ಬಚ್ಚನ್ ಮತ್ತು ಐಶ್ವರ್ಯಾ ರೈ ದಾಂಪತ್ಯದಲ್ಲಿ ಬಿರುಕು ಮೂಡಿದ್ದು, ಈಗಾಗಲೇ ಐಶೂ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ ಎನ್ನಲಾಗುತ್ತಿದೆ. ಇವರಿಬ್ಬರು ಶೀಘ್ರದಲ್ಲೇ ವಿಚ್ಛೇದನ ಪಡೆಯಲಿದ್ದಾರಂತೆ. ಇದೆಲ್ಲದರ ನಡುವೆ ಅಭಿಷೇಕ್‌ಗೆ ನಟಿ ನಿಮ್ರತ್ ಕೌರ್ ಜೊತೆಗೆ ಅಫೇರ್ ಇದೆ. ಅದೇ ಇಷ್ಟೆಲ್ಲಾ ಸಮಸ್ಯೆಗಳಿಗೆ ಕಾರಣ ಎನ್ನಲಾಗಿದೆ.

42 ವರ್ಷದ ನಿಮ್ರತ್ ಕೌರ್ ಅವರು 2005ರಲ್ಲಿ ತೆರೆಕಂಡ 'ಯಾಹಾನ್' ಸಿನಿಮಾದಲ್ಲಿ ನಟಿಸುವ ಮೂಲಕ ಬಣ್ಣದ ಲೋಕಕ್ಕೆ ಕಾಲಿಟ್ಟರು. ಆದರೆ ನಿಮ್ರತ್ ಹೆಚ್ಚು ಸಿನಿಮಾಗಳಲ್ಲಿ ನಟಿಸಿಲ್ಲ. 2013ರಲ್ಲಿ ತೆರೆಕಂಡ 'ದಿ ಲಂಚ್‌ಬಾಕ್ಸ್' ಸಿನಿಮಾದ ಮೂಲಕ ಅಪಾರ ಜನಮನ್ನಣೆಯನ್ನು ಅವರು ಪಡೆದುಕೊಂಡರು. ಇಡೀ ಕರಿಯರ್‌ನಲ್ಲಿ ಅವರು ನಟಿಸಿರುವ ಸಿನಿಮಾಗಳ ಸಂಖ್ಯೆ 10 ಕೂಡ ದಾಟಿಲ್ಲ ಅನ್ನೋದು ವಿಶೇಷ.

ಅಭಿಷೇಕ್ ಮತ್ತು ನಿಮ್ರತ್ ನಡುವೆ ಏನೋ ಸಂಥಿಂಗ್ ಸಂಥಿಂಗ್ ಇದೆ ಅನ್ನೋ ಥರದ ಗಾಸಿಪ್ ಹುಟ್ಟಿಕೊಳ್ಳಲು ಕಾರಣವಾಗಿದ್ದೇ 'ದಸ್ವಿ' ಸಿನಿಮಾ. ಹೌದು, 2022ರಲ್ಲಿ ತೆರೆಗೆ ಬಂದ 'ದಸ್ವಿ' ಸಿನಿಮಾದಲ್ಲಿ ಅಭಿಷೇಕ್ ಮತ್ತು ನಿಮ್ರತ್, ದಂಪತಿಯಾಗಿ ಕಾಣಿಸಿಕೊಂಡಿದ್ದರು. ಅಲ್ಲಿಂದೀಚೆಗೆ ಇಬ್ಬರ ನಡುವೆ ಅಫೇರ್ ಹುಟ್ಟಿಕೊಂಡಿದೆ ಎನ್ನಲಾಗಿದೆ.



# ಗಂಭೀರ್ ಗರಡಿಯಲಿ ಟೀಮ್ ಇಂಡಿಯಾಗೆ ಸೋಲುಗಳ ಸರಮಾಲೆ

3-0 ಅಂತರದಿಂದ ಇದೇ ಮೊದಲ ಬಾರಿಗೆ ಸೋಲು

ಗೌತಮ್ ಗಂಭೀರ್ ಕೋಚ್ ಆದ ಬಳಿಕ ಭಾರತ ತಂಡ ಶ್ರೀಲಂಕಾ ವಿರುದ್ಧ ಸರಣಿ ಸೋತಿದೆ. ಅದು ಕೂಡ 27 ವರ್ಷಗಳ ಬಳಿಕ ಎಂಬುದು ಇಲ್ಲಿ ಉಲ್ಲೇಖಾರ್ಹ. ಅಂದರೆ 2 ದಶಕಗಳ ಬಳಿಕ ಶ್ರೀಲಂಕಾ ತಂಡವು ಭಾರತದ ವಿರುದ್ಧ ಏಕದಿನ ಸರಣಿ ಗೆಲ್ಲುವಲ್ಲಿ ಯಶಸ್ವಿಯಾಗಿದೆ.

ಶ್ರೀಲಂಕಾ ವಿರುದ್ಧದ ಸರಣಿಯನ್ನು 2-0 ಅಂತರದಿಂದ ಸೋತಿದ್ದು ಒಂದೆಡೆಯಾದರೆ (ಒಂದು ಪಂದ್ಯ ಡ್ರಾ), ಈ ಸರಣಿಯ ಮೂರು ಪಂದ್ಯಗಳಲ್ಲೂ ಟೀಮ್ ಇಂಡಿಯಾ ಆಲೌಟ್ ಆಗಿತ್ತು ಎಂಬುದು ವಿಶೇಷ. ಅಂದರೆ ಏಕದಿನ ಇತಿಹಾಸದಲ್ಲಿ ಮೊದಲ ಬಾರಿಗೆ ಟೀಮ್ ಇಂಡಿಯಾ 30 ವಿಕೆಟ್ ಕಳೆದುಕೊಂಡು 3 ಪಂದ್ಯಗಳ ಏಕದಿನ ಸರಣಿ ಸೋತ ಹೀನಾಯ ದಾಖಲೆ ಬರೆದಿದೆ. ಶ್ರೀಲಂಕಾ ವಿರುದ್ಧದ ಸರಣಿ ಸೋಲಿನೊಂದಿಗೆ ಭಾರತ ತಂಡವು ಕ್ಯಾಲೆಂಡರ್ ವರ್ಷವೊಂದರಲ್ಲಿ ಯಾವುದೇ ಜಯ ಸಾಧಿಸದೇ ಏಕದಿನ ಸರಣಿ ವೇಳಾಪಟ್ಟಿಯನ್ನು ಅಂತ್ಯಗೊಳಿಸಿದೆ. 45 ವರ್ಷಗಳ ಬಳಿಕ ಭಾರತ ತಂಡವು ಏಕದಿನ ಪಂದ್ಯ ಗೆಲ್ಲದೇ ವರ್ಷವೊಂದನ್ನು ಅಂತ್ಯಗೊಳಿಸಿರುವುದು ಇದೇ ಮೊದಲು. ಬೆಂಗಳೂರು ಟೆಸ್ಟ್ ಪಂದ್ಯದಲ್ಲಿ ಟೀಮ್ ಇಂಡಿಯಾ ಸೋಲುವುದರೊಂದಿಗೆ, ನ್ಯೂಝಿಲೆಂಡ್ ತಂಡವು 36 ವರ್ಷಗಳ ಬಳಿಕ ಭಾರತದಲ್ಲಿ ಟೆಸ್ಟ್ ಪಂದ್ಯ ಗೆದ್ದ ಸಾಧನೆ ಮಾಡಿದೆ. ಇದರೊಂದಿಗೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಭಾರತ ತಂಡದ 19 ವರ್ಷಗಳ ಗೆಲುವಿನ ನಾಗಾಲೋಟ ಕೂಡ ಅಂತ್ಯವಾಯ್ತು. ನ್ಯೂಝಿಲೆಂಡ್ ವಿರುದ್ಧದ ಮೊದಲ ಟೆಸ್ಟ್ ಪಂದ್ಯದಲ್ಲಿ 46 ರನ್‌ಗಳಿಗೆ ಟೀಮ್ ಇಂಡಿಯಾ ಆಲೌಟ್ ಆಯಿತು.

ಇದು ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲೇ ತವರಿನಲ್ಲಿ ಭಾರತ ತಂಡ ಕಲೆಹಾಕಿದ ಅತ್ಯಂತ ಕಡಿಮೆ ಸ್ಕೋರ್ ಎಂಬುದು ವಿಶೇಷ. 92 ವರ್ಷಗಳ ಟೆಸ್ಟ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಭಾರತ ತಂಡವು ನ್ಯೂಝಿಲೆಂಡ್ ವಿರುದ್ಧ ಸರಣಿ ಸೋತಿದೆ. ಅಂದರೆ ಗೌತಮ್ ಗಂಭೀರ್ ಕೋಚಿಂಗ್‌ನಲ್ಲಿ ಟೀಮ್ ಇಂಡಿಯಾ ಕಿವೀಸ್ ವಿರುದ್ಧದ ಪಾರುಪತ್ಯಕ್ಕೆ ತೆರೆ ಎಳೆದಿದೆ.

ನ್ಯೂಝಿಲೆಂಡ್ ವಿರುದ್ಧದ ಸರಣಿ ಸೋಲಿನೊಂದಿಗೆ ತವರಿನಲ್ಲಿ ಭಾರತ ತಂಡದ 12 ವರ್ಷಗಳ ಗೆಲುವಿನ ನಾಗಾಲೋಟಕ್ಕೆ ಬ್ರೇಕ್ ಬಿದ್ದಂತಾಗಿದೆ. ಅಲ್ಲದೆ 12 ವರ್ಷಗಳ ಬಳಿಕ ಟೀಮ್ ಇಂಡಿಯಾ ಸತತ ಟೆಸ್ಟ್ ಪಂದ್ಯಗಳನ್ನು ಸೋತು ನಿರಾಸೆ ಮೂಡಿಸಿದೆ. 19 ವರ್ಷಗಳ ಟೆಸ್ಟ್ ಗೆಲುವಿನ ನಾಗಾಲೋಟಕ್ಕೆ ತೆರೆ ಎಳೆದಿದ್ದ ಟೀಮ್ ಇಂಡಿಯಾ, ಮುಂಬೈನ ವಾಂಖೆಡೆ ಸ್ಟೇಡಿಯಂನಲ್ಲೂ ಸೋತು 12 ವರ್ಷಗಳ ಗೆಲುವಿನ ಪರಂಪರೆಯನ್ನು ಅಂತ್ಯಗೊಳಿಸಿದೆ.

# ದುಡ್ಡಿಗಿಂತ ತಂಡವೇ ಮುಖ್ಯ: ಇವರು ಕೋಟಿ ರೂ. ಕಡಿತಗೊಳಿಸಿದ ಆಟಗಾರರು





ಐಪಿಎಲ್ ಮೆಗಾ ಹರಾಜಿಗೂ ಮುನ್ನ 10 ಫ್ರಾಂಚೈಸಿಗಳು ಒಟ್ಟು 46 ಆಟಗಾರರನ್ನು ರಿಟೈನ್ ಮಾಡಿಕೊಂಡಿದೆ. ಈ ನಲ್ವತ್ತಾರು ಆಟಗಾರರಲ್ಲಿ 5 ಪ್ಲೇಯರ್ಸ್ ತಮ್ಮ ಸಂಭಾವನೆಯಲ್ಲಿ ಭಾರೀ ಕಡಿತ ಮಾಡಿಕೊಂಡಿದ್ದಾರೆ. ಅಂದರೆ ಐಪಿಎಲ್ 2024 ರಲ್ಲಿ ಪಡೆದ ಸಂಭಾವನೆಗಿಂತ ಈ ಬಾರಿ ಕಡಿಮೆ ಮೊತ್ತ ಪಡೆದುಕೊಂಡಿದ್ದಾರೆ. ಆ ಆಟಗಾರರು ಯಾರೆಂದರೆ....

**ಮಹೇಂದ್ರ ಸಿಂಗ್ ಧೋನಿ:** ಐಪಿಎಲ್ 2024 ರಲ್ಲಿ ಮಹೇಂದ್ರ ಸಿಂಗ್ ಧೋನಿಗೆ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿ ನೀಡಿದ ಮೊತ್ತ 12 ಕೋಟಿ ರೂ. ಆದರೆ ಈ ಬಾರಿ ಕೇವಲ 4 ಕೋಟಿ ರೂ.ಗೆ ಧೋನಿ ಸಿಎಸ್‌ಕೆ ತಂಡದಲ್ಲೇ ಉಳಿದುಕೊಂಡಿದ್ದಾರೆ. ಅಂದರೆ ಬರೋಬ್ಬರಿ 8 ಕೋಟಿ ರೂ. ಕಡಿತ ಮಾಡಿಕೊಂಡಿದ್ದಾರೆ.

**ಆಂಡ್ರೆ ರಸೆಲ್:** ಕೊಲ್ಕತ್ತಾ ನೈಟ್ ರೈಡರ್ಸ್ ತಂಡದ ಸ್ಟಾರ್ ಆಲ್‌ರೌಂಡರ್ ಕಳೆದ ಸೀಸನ್‌ನಲ್ಲಿ 16 ಕೋಟಿ ರೂ. ಪಡೆದಿದ್ದರು. ಆದರೆ ಈ ಬಾರಿ ರಸೆಲ್ ಅವರನ್ನು ಕೇವಲ 12 ಕೋಟಿ ರೂ.ಗೆ ರಿಟೈನ್ ಮಾಡಲಾಗಿದೆ. ಅಂದರೆ ತಮ್ಮ ಸಂಭಾವನೆಯಲ್ಲಿ 4 ಕೋಟಿ ರೂ. ಕಡಿತ ಮಾಡಿಕೊಂಡಿದ್ದಾರೆ.

**ರಾಹುಲ್ ತೆವಾಠಿಯಾ:** ಐಪಿಎಲ್ 2024 ರಲ್ಲಿ ಗುಜರಾತ್ ಟೈಟಾನ್ಸ್ ಫ್ರಾಂಚೈಸಿಯು ರಾಹುಲ್ ತೆವಾಠಿಯಾಗೆ ನೀಡಿದ ಮೊತ್ತ 9 ಕೋಟಿ ರೂ. ಆದರೆ ಈ ಬಾರಿ 5 ಕೋಟಿ ರೂ. ಕಡಿತ ಮಾಡಿ ಕೇವಲ 4 ಕೋಟಿ ರೂ.ಗೆ ತೆವಾಠಿಯಾರನ್ನು ರಿಟೈನ್ ಮಾಡಿಕೊಂಡಿದೆ.

**ಪ್ಯಾಟ್ ಕಮಿನ್ಸ್:** ಐಪಿಎಲ್ 2024 ರ 2ನೇ ಅತ್ಯಂತ ದುಬಾರಿ ಆಟಗಾರ ಪ್ಯಾಟ್ ಕಮಿನ್ಸ್. ಕಳೆದ ಸೀಸನ್‌ನಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಫ್ರಾಂಚೈಸಿಯು ಕಮಿನ್ಸ್ ಅವರನ್ನು ಬರೋಬ್ಬರಿ 20.50 ಕೋಟಿ ರೂ.ಗೆ ಖರೀದಿಸಿತ್ತು. ಆದರೆ ಈ ಬಾರಿ ನೀಡಿದ್ದು 18 ಕೋಟಿ ರೂ. ಮಾತ್ರ. ಅಂದರೆ ಇಲ್ಲಿ ಕಮಿನ್ಸ್ ಕಳೆದ ಬಾರಿಗಿಂತ 2.50 ಕೋಟಿ ರೂ. ಕಡಿಮೆ ಪಡೆದುಕೊಂಡಿದ್ದಾರೆ.

**ಶಾರುಖ್ ಖಾನ್:** ಗುಜರಾತ್ ಟೈಟಾನ್ಸ್ ಫ್ರಾಂಚೈಸಿಯು ಐಪಿಎಲ್ 2024 ರಲ್ಲಿ ಸ್ಫೋಟಕ ದಾಂಡಿಗ ಶಾರುಖ್ ಖಾನ್ ಅವರಿಗೆ ನೀಡಿದ ಸಂಭಾವನೆ 7.40 ಕೋಟಿ ರೂ. ಆದರೆ ಈ ಬಾರಿ ಕೇವಲ 4 ಕೋಟಿ ರೂ.ಗೆ ರಿಟೈನ್ ಮಾಡಿಕೊಂಡಿದೆ. ಅಂದರೆ ಶಾರುಖ್ ಖಾನ್ 3.40 ಕೋಟಿ ರೂ. ಕಡಿಮೆ ಮೊತ್ತದೊಂದಿಗೆ ಗುಜರಾತ್ ಟೈಟಾನ್ಸ್ ತಂಡದಲ್ಲೇ ಉಳಿದಿದ್ದಾರೆ.

# ನಿವೃತ್ತಿ ಸುಳಿವು ನೀಡಿದ ವಿರಾಟ್ ಕೊಹ್ಲಿ



17 ವರ್ಷ, 17 ಸೀಸನ್, ಒಂದೇ ತಂಡ, ಒಂದೇ ಗುರಿ... ಇದುವೇ ವಿರಾಟ್ ಕೊಹ್ಲಿಯ ಬಹುದೊಡ್ಡ ಕನಸು. ಹೌದು, ಕಳೆದ ಹದಿನೇಳು ಸೀಸನ್‌ಗಳಿಂದ ಆರ್‌ಸಿಬಿ ಪರ ಕಣಕ್ಕಿಳಿದಿರುವ ವಿರಾಟ್ ಕೊಹ್ಲಿ ಇದೀಗ 18ನೇ ಆವೃತ್ತಿಗಾಗಿ ಸಜ್ಜಾಗಿ ನಿಂತಿದ್ದಾರೆ. ಅದು ಸಹ ಈ ಸಲ ಆದರೂ ಕಪ್ ಗೆಲ್ಲಬೇಕೆಂಬ ಮಹದಾಸೆಯೊಂದಿಗೆ ಎಂಬುದು ವಿಶೇಷ.

ಈ ಬಾರಿಯ ಐಪಿಎಲ್ ಹರಾಜಿಗೂ ಮುನ್ನ ಆರ್‌ಸಿಬಿ ಫ್ರಾಂಚೈಸಿ ಬರೋಬ್ಬರಿ 21 ಕೋಟಿ ರೂ. ನೀಡಿ ವಿರಾಟ್ ಕೊಹ್ಲಿಯನ್ನು ಉಳಿಸಿಕೊಂಡಿದೆ. ಇದರೊಂದಿಗೆ ಕಿಂಗ್ ಕೊಹ್ಲಿ ಆರ್‌ಸಿಬಿ ಪರ 18ನೇ ಸೀಸನ್ ಆಡುವುದು ಕೂಡ ಖಚಿತವಾಗಿದೆ. ಅಷ್ಟೇ ಅಲ್ಲದೆ ಮುಂದಿನ ಮೂರು ಆವೃತ್ತಿಗಳಲ್ಲೂ ಅವರು ಬೆಂಗಳೂರು ಫ್ರಾಂಚೈಸಿಯಲ್ಲೇ ಉಳಿಯಲಿದ್ದಾರೆ. ಇದನ್ನು ಖುದ್ದು ವಿರಾಟ್ ಕೊಹ್ಲಿಯೇ ಖಚಿತಪಡಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ವಿರಾಟ್ ಕೊಹ್ಲಿ, ಒಂದು ತಂಡಕ್ಕಾಗಿ ಇಷ್ಟು ವರ್ಷ ಆಡಲಿದ್ದೇನೆ ಎಂದು ನಾನು ಎಂದಿಗೂ ಯೋಚಿಸಿರಲಿಲ್ಲ. ಆದರೆ ಈ ಸಂಬಂಧವು ಹಲವು ವರ್ಷಗಳಿಂದ ಮುಂದುವರೆದಿದೆ. ಇದು ನಿಜಕ್ಕೂ ನನ್ನ ಪಾಲಿಗೆ ತುಂಬಾ ವಿಶೇಷ ಅನುಭವ. ನನ್ನ ವೃತ್ತಿಜೀವನದ ಅಂತ್ಯದ ವೇಳೆಗೆ 20 ವರ್ಷಗಳು ಪೂರ್ಣಗೊಳ್ಳಲಿದೆ. ಈ 20 ವರ್ಷಗಳನ್ನು ನಾನು ಆರ್‌ಸಿಬಿ ಪರವಾಗಿಯೇ ಕಣಕ್ಕಿಳಿಯಲಿದ್ದೇನೆ ಎಂದು ವಿರಾಟ್ ಕೊಹ್ಲಿ ಹೇಳಿದ್ದಾರೆ. ಅಂದರೆ ವಿರಾಟ್ ಕೊಹ್ಲಿ ಐಪಿಎಲ್ 2027ರವರೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲೇ ಮುಂದುವರೆಯುವುದಾಗಿ ತಿಳಿಸಿದ್ದಾರೆ. ಆದರೆ ಆ ಬಳಿಕ ಅವರು ನಿವೃತ್ತಿ ನೀಡುವ ಸಾಧ್ಯತೆಯಿದೆ. ಇದೇ ಕಾರಣದಿಂದಾಗಿ ಅವರು ವೃತ್ತಿಜೀವನದ ಅಂತ್ಯದ ವೇಳೆಗೆ 20 ವರ್ಷಗಳನ್ನು ಪೂರ್ಣಗೊಳಿಸಲಿದ್ದೇನೆ ಎಂದು ಒತ್ತಿ ಹೇಳಿದ್ದಾರೆ.

# ಟೆಸ್ಟ್ ಸರಣಿ ಸೋಲು, ಅಂದುಕೊಂಡಷ್ಟು ಸುಲಭವಲ್ಲ



ಭಾರತದ ವಿರುದ್ಧದ ಮೂರು ಪಂದ್ಯಗಳ ಟೆಸ್ಟ್ ಸರಣಿಯನ್ನು ನ್ಯೂಝಿಲೆಂಡ್ 3-0 ಅಂತರದಿಂದ ಗೆದ್ದುಕೊಂಡಿದೆ. ಮೊದಲ ಪಂದ್ಯದಲ್ಲಿ 8 ವಿಕೆಟ್‌ಗಳ ಜಯ ಸಾಧಿಸಿದ್ದ ಕಿವೀಸ್ ಪಡೆ, 2ನೇ ಪಂದ್ಯದಲ್ಲಿ 113 ರನ್‌ಗಳ ಭರ್ಜರಿ ಗೆಲುವು ದಾಖಲಿಸಿತ್ತು. ಇದೀಗ 3ನೇ ಪಂದ್ಯದಲ್ಲಿ 25 ರನ್‌ಗಳ ರೋಚಕ ಜಯ ಸಾಧಿಸಿದೆ. ಈ ಮೂಲಕ ನ್ಯೂಝಿಲೆಂಡ್ ತಂಡವು ಭಾರತದಲ್ಲಿ ಚೊಚ್ಚಲ ಟೆಸ್ಟ್ ಸರಣಿ ಗೆಲುವು ದಾಖಲಿಸಿದೆ. ಈ ಹೀನಾಯ ಸೋಲಿನ ಬಳಿಕ ಮಾತನಾಡಿದ ಟೀಮ್ ಇಂಡಿಯಾ ನಾಯಕ ರೋಹಿತ್ ಶರ್ಮಾ ಸರಣಿ ಸೋಲಿನ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ.

ಟೆಸ್ಟ್ ಸರಣಿಯನ್ನು ಕಳೆದುಕೊಳ್ಳುವುದು ಅಥವಾ ಟೆಸ್ಟ್ ಪಂದ್ಯದಲ್ಲಿ ಸೋಲುವುದು ಎಂದಿಗೂ ಸುಲಭವಲ್ಲ. ಇದು ಸುಲಭವಾಗಿ ಅರಗಿಸಿಕೊಳ್ಳಲಾಗದ ವಿಷಯ. ಆದರೆ ಈ ಬಾರಿ ನಾವು ಅತ್ಯುತ್ತಮ ಕ್ರಿಕೆಟ್ ಆಡಿಲ್ಲ ಎಂಬುದೇ ನಿಜ. ಇದನ್ನು ನಾವು ಒಪ್ಪಿಕೊಳ್ಳಲೇಬೇಕು ಎಂದು ರೋಹಿತ್ ಶರ್ಮಾ ಹೇಳಿದ್ದಾರೆ. ನ್ಯೂಝಿಲೆಂಡ್ ತಂಡವು ಸರಣಿಯುದ್ದಕ್ಕೂ ನಮಗಿಂತ ಉತ್ತಮ ಪ್ರದರ್ಶನ ನೀಡಿದರು. ನಾವು ಬಹಳಷ್ಟು ತಪ್ಪುಗಳನ್ನು ಮಾಡಿದ್ದೇವೆ ಮತ್ತು ಅದನ್ನು ಒಪ್ಪಿಕೊಳ್ಳಲೇಬೇಕು. ಮೊದಲ ಇನ್ನಿಂಗ್ಸ್‌ನಲ್ಲಿ (ಬೆಂಗಳೂರು ಮತ್ತು ಪುಣೆಯಲ್ಲಿ) ನಾವು ಸಾಕಷ್ಟು ರನ್‌ಗಳನ್ನು ಕಲೆಹಾಕಲಿಲ್ಲ. ಈ ಪಂದ್ಯಗಳಲ್ಲಿ ನಾವು ತುಂಬಾ ಹಿಂದುಳಿದಿದ್ದೆವು. ಆದರೆ ಈ ಬಾರಿ 30 ರನ್‌ಗಳ ಮುನ್ನಡೆ ಸಾಧಿಸಿದಾಗ, ನಾವು ಪಂದ್ಯ ಗೆಲ್ಲುತ್ತೇವೆ ಎಂದೇ ಭಾವಿಸಿದ್ದೆ. ಅಲ್ಲದೆ 147 ರನ್‌ಗಳ ಗುರಿ ಮುಟ್ಟುವ ವಿಶ್ವಾಸವಿತ್ತು.

ಆದರೆ ನಾನು ಸೇರಿದಂತೆ ಪ್ರಮುಖ ಆಟಗಾರರು ರನ್‌ಗಳಿಸಲು ಸಾಧ್ಯವಾಗಿಲ್ಲ. ನಾನು ಬ್ಯಾಟಿಂಗ್ ಮಾಡಲು ಹೋದಾಗ ನನ್ನ ಮನಸ್ಸಿನಲ್ಲಿ ಕೆಲವು ಆಲೋಚನೆಗಳು, ಕೆಲವು ಯೋಜನೆಗಳು ಇದ್ದವು. ಆದರೆ ಈ ಸರಣಿಯುದ್ದಕ್ಕೂ ಅದು ಹೊರಬರಲಿಲ್ಲ. ಇದು ನಿಜಕ್ಕೂ ನನಗೆ ನಿರಾಶಾದಾಯಕವಾಗಿದೆ ಎಂದು ರೋಹಿತ್ ಶರ್ಮಾ ಹೇಳಿದ್ದಾರೆ. ಇದಾಗ್ಯೂ, ರಿಷಭ್ ಪಂತ್ ಹಾಗೂ ಯಶಸ್ವಿ ಜೈಸ್ವಾಲ್ ಈ ಪಿಚ್‌ಗಳಲ್ಲಿ ಹೇಗೆ ಬ್ಯಾಟಿಂಗ್ ಮಾಡಬೇಕೆಂದು ತೋರಿಸಿಕೊಟ್ಟಿದ್ದರು.

ಇಂತಹ ಪಿಚ್‌ಗಳಲ್ಲಿ ಆಡು ವಾಗ ಸ್ವಲ್ಪ ಪೂರ್ವಭಾವಿಯಾಗಿರಬೇಕು. ಹೇಗೆ ಆಡಬೇಕೆಂದು ನಮಗೆ ತಿಳಿದಿದೆ. ಆದರೆ ಈ ಸರಣಿಯಲ್ಲಿ ಅದು ಹೊರಬರಲಿಲ್ಲ ಎಂದು ಹಿಟ್‌ಮ್ಯಾನ್ ನಿರಾಸೆ ವ್ಯಕ್ತ ಪಡಿಸಿದರು. ಒಟ್ಟಿನಲ್ಲಿ 3-0 ಅಂತರದಿಂದ ಸರಣಿ ಸೋತಿರುವುದು ನಿಜಕ್ಕೂ ಅರಗಿಸಿಕೊಳ್ಳಲಾಗದ ವಿಷಯ. ತಂಡವು ಸಾಂಘಿಕ ಪ್ರದರ್ಶನ ನೀಡುವಲ್ಲಿ ವಿಫಲವಾಗಿರುವುದು ನಿಜ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966